# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೧೫

ಸಂಪುಟ: ೪ ಸಂಚಿಕೆ: ೧೦

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟಗಳು: ೨೦

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨೪೨೨೮೪ ಈಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರ ಈ ವರ್ಷ ಶೇ. ೭.೫ರ ದರದಲ್ಲಿ ಬೆಳವಣಿಗೆ ಸಾಧಿಸಿ ಚೀನಾವನ್ನು ಹಿಂದಕ್ಕಲಿದೆ ಎಂದು ಅಂತಾರಾಷ್ಟೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಒಕ್ಕೊರಲನಿಂದ ಘೋಷಿಸಿ, ಮೋದಿ ನೇತೃತ್ವದ ಸರ್ಕಾರಕ್ಕೆ ಅರ್ಹತಾ ಪತ್ರ ನೀಡುತ್ತಿರುವಂತೆಯೇ, ಮತ್ತೆ ರಾಷ್ಟ್ರಾದ್ಯಂತ-ವಿಶೇಷವಾಗಿ ಮಧ್ಯ ಭಾರತದಲ್ಲಿ-ರೈತರ ಸರಣಿ ಆತ್ಮಹತ್ಯೆಗಳು ಶುರುವಾಗಿವೆ. ಇಂದು ದಿನವೊಂದಕ್ಕೆ ೪೭ ಜನ ರೈತರು ಬೆಳೆನಾಶ ಅಥವಾ ಸಾಲದ ಬಾಧೇಯಿಂದ ಅಸಹಾಯಕರಾಗಿ ಪ್ರಾಣಬಿಡುತ್ತಿದ್ದಾರೆ ಇದು ಭಾರತ ಕಳೆದ ಇಪ್ಪತ್ತೈದು ವರ್ಷಗಳಿಂದ ಆರ್ಥಿಕ 'ಸುಧಾರಣೆಗಳೆಂಬ ಕಪಟ ಹೆಸರಿನಲ್ಲಿ ಅನುಸರಿಸಿಕೊಂಡು ಬರುತ್ತಿರುವ ಒಂದು ಜನವರ್ಗದ ಗೋರಿಯ ಮೇಲೆ ಇನ್ನೊಂದು ಜನವರ್ಗದ ಅರಮನೆ ಕಟ್ಟುವ ನವ ಉದಾರವಾದಿ ಅಭಿವೃದ್ಧಿ ನೀತಿಯಲ್ಲಿ ಅಡಗಿರುವ ಕ್ರೌರ್ಯವೇ ಆಗಿದೆ. ಈ ಮಧ್ಯೆ ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಬೇರೆ ಮೋದಿಯವರ ನಾಯಕತ್ವ ಗುಣವನ್ನು ಶ್ಲಾಘಿಸಿ *ನ್ಯೂಯಾರ್ಕ್ ಟೈಮ್ಸ್‌*ನಲ್ಲಿ ಲೇಖನ ಬರೆದಿದ್ದಾರಂತೆ! ಇದಕ್ಕೆ ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ, ಮೋದಿ ನೀತಿಯಿಂದ ಅಮೆರಿಕಾಕ್ಕೆ ಲಾಭವಾಗುತ್ತಿರುವುದರಿಂದಲೇ ಒಬಾಮಾ ಇದನ್ನು ಬರೆದಿರುವುದು ಎಂದು ಹೇಳುವ ಮೂಲಕ ತನ್ನ ತಲೆಯಲ್ಲೂ ಒಂದಿಷ್ಟು ರಾಜಕೀಯ ಬುದ್ಧಿವಂತಿಕೆಯೂ ಇದೆಯೆಂಬುದನ್ನು ತೋರ್ಪಡಿಸಿದ್ದಾರೆ. ಅವರಿಗೆ ಮನಮೋಹನ ಸಿಂಗ್-ಜಾರ್ಜ್ ಬುಷ್‌ರ ದುರಂತ ಪ್ರೇಮ ಕಥೆ ನೆನಪಿಗೆ ಬಂದಿರಬೇಕು!

ಮನಮೋಹನ ಸಿಂಗ್ ಸರ್ಕಾರ ಕೈಗೊಳ್ಳುತ್ತಿದ್ದ ನವ ಉದಾರವಾದಿ ನೀತಿಗಳನ್ನೆಲ್ಲ-ಪರಮಾಣು ಸಹಕಾರ ಒಪ್ಪಂದ, ವಿಮಾ ಮಸೂದೆ, ವಿದೇಶಿ ನೇರ ಬಂಡವಾಳ ಹೂಡಿಕೆ ಇತ್ಯಾದಿ-ರಾಷ್ಟ್ರೀಯತೆಯ ಹೆಸರಿನಲ್ಲಿ ವಿರೋಧಿಸಿದ ಬಿಜೆಪಿ ಈಗ ಅವೆಲ್ಲವನ್ನೂ ತನ್ನ ಅಧಿಕಾರಾವಧಿಯ ಮೊದಲ ವರ್ಷದಲ್ಲೇ ಬಲಿಷ್ಠ ಭಾರತದ ಹೆಸರಿನಲ್ಲಿ ಜಾರಿಗೆ ತಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ. ಇಂತಹ ಆತ್ಮದ್ರೋಹದ ರಾಜಕಾರಣದ ಭಾಗವಾಗಿಯೇ ಅದು ಈಗ ತನ್ನ ಆರ್ಥಿಕ ಅಭಿವೃದ್ಧಿ ನೀತಿಯ ದಿಕ್ಕನ್ನು ದೇಶದ ನಗರೀಕರಣವೆಂಬ ಏಕೈಕ ಕಾರ್ಯಕ್ರಮದತ್ತ ತಿರುಗಿಸಿ ಗ್ರಾಮೀಣ ಭಾರತಕ್ಕೆ ಔಪಚಾರಿಕ ಗಮನವನ್ನಷ್ಟೇ ನೀಡಿದೆ. ಇದು ಅದರ ಮೊದಲ ಮುಂಗಡ ಪತ್ರದಲ್ಲೇ ಪ್ರತಿಬಿಂಬಿತವಾಗಿದೆ. ಗ್ರಾಮೀಣ ಪ್ರದೇಶದ ಕೃಷಿ, ಮೂಲಭೂತ ಸೌಕರ್ಯಗಳು ಮತ್ತು ಉದ್ಯೋಗ ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಖರ್ಚುಗಳನ್ನು ಗಮನಾರ್ಹವಾಗಿ ಕಡಿತಗೊಳಿಸಿರುವ ಈ ಸರ್ಕಾರ ನಗರ ಮೂಲ ಸೌಕರ್ಯ, ಬೃಹತ್ ಕೈಗಾರಿಕಾ ಸಂಕೀರ್ಣಗಳು ಇತ್ಯಾದಿ ನಗರೀಕರಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ನಿಗದಿ ಮಾಡಿದೆಯಲ್ಲದೆ, ಬಂಡವಾಳಶಾಹಿ ಉದ್ಯಮಗಳಿಗೆ ವ್ಯಾಪಕ ತೆರಿಗೆ ವಿನಾಯ್ತಿಗಳನ್ನು ಪ್ರಕಟಿಸಿದೆ. ಜೊತೆಗೆ ಈ ರೀತಿಯ ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆಯೆಂದು ಪರಿಸರ ರಕ್ಷಣೆಯ ಕಾನೂನುಗಳನ್ನು ದುರ್ಬಲಗೊಳಿಸಿದೆ

ಗ್ರಾಮೀಣ ಭಾರತ ಪೂರ್ಣವಾಗಿ ಹಾಳುಕೊಂಪೆಯಾಗಿ ಪರಿವರ್ತಿತವಾಗಿ ಜನ ನಗರಗಳಿಗೆ ಗುಳೆ ಹೋಗಿ ಬಂಡವಾಳಿಗರ ಕೃಪಾ ಕಟಾಕ್ಷದಲ್ಲಿ ದುಡಿಯುವುದನ್ನು ಅನಿವಾರ್ಯ ಮಾಡುವ ಪ್ರಜ್ಞಾಪೂರ್ವಕ ರಾಜಕೀಯ ಕಾರ್ಯಕ್ರಮವಿದು. ಭಾರತದ ಸನಾತನ ಸಂಸ್ಕೃತಿಯ ಬಗ್ಗೆ ಉಮ್ಮಳಿಸಿಕೊಂಡು ಮಾತನಾಡುವ ಜನರೇ ತುಂಬಿರುವ ಪಕ್ಷದ ಈ ಸರ್ಕಾರ ರಾಷ್ಟ್ರ, ಸಂಸ್ಕೃತಿ, ಅಭಿವೃದ್ಧಿ ಇತ್ಯಾದಿ ಮೂಲ ಸಂಗತಿಗಳ ಅರ್ಥಗಳನ್ನಾಗಲೀ, ಅವುಗಳ ನಡುವಣ ಸಂಬಂಧಗಳ ಸೂಕ್ಷ್ಮಗಳನ್ನಾಗಲೀ ಅರಿಯದೆ, ಈ ದೇಶವನ್ನು ಒಂದು ಆಂತರಿಕ ವಸಾಹತುಶಾಹಿ ವ್ಯವಸ್ಥೆಯನ್ನಾಗಿ ಮಾರ್ಪಡಿಸಲು ಹೊರಟಂತಿದೆ. ಹೇಗೂ ಬಿಜೆಪಿ ತಾತ್ವಿಕವಾಗಿ ವರ್ಣ ವ್ಯವಸ್ಥೆಯ ಹಿಂದಿನ 'ವೈಜ್ಞಾನಿಕ'ತೆಯನ್ನು ಒಪ್ಪಿಕೊಂಡಿರುವ ಪಕ್ಷವೇ ಆಗಿದ್ದು, ಅದೀಗ ವರ್ಣ ವ್ಯವಸ್ಥೆಯ ಆಧುನಿಕ ರೂಪಾಂತರಕ್ಕೆ ಮಧ್ಯವರ್ತಿಯಾಶಿಗಲು ಹೊರಟಂತಿದೆ. ರೈತರ ಆತ್ಮಹತ್ಯೆ ಈ ಪಾಯಕಾರಿ ರಾಜಕೀಯ ಕಾರ್ಯಕ್ರಮದ ದುರಂತಮಯ ಪರಿಣಾಮಗಳ ಮುನ್ಸೂಚನೆಯೇ ಆಗಿದೆ.

ನಿಜ, ಇದೇನೂ ಬಿಜೆಪಿ ಸರ್ಕಾರಕ್ಕೇ ವಿಶಿಷ್ಟವಾದ ರಾಜಕೀಯ ಕಾರ್ಯಕ್ರಮವೇನಲ್ಲ. ಮನಮೋಹನ ಸಿಂಗ್‌ರ ನೇತೃತ್ವದ ಕಾಂಗ್ರೆಸ್ ಸರ್ಕಾರವಿದ್ದಾಗಲೂ ರೈತರ ಸರಣಿ ಆತ್ಮಹತ್ಯೆಗಳು ನಡೆದಿದ್ದವು. ಅದಕ್ಕೂ ಕಾರಣವಾಗಿದ್ದುದು, ಜಾಗತಿಕ ಹಣಕಾಸು ಸಂಸ್ಥೆಗಳಿಂದ ನಿರ್ದೇಶಿತವಾಗಿದ್ದ ಮನಮೋಹನ ಸಿಂಗ್‌ರ ನಗರೀಕರಣ ನೀತಿಯೇ. ಆದರೆ ಕಾಂಗ್ರೆಸ್‌ನೊಳಗೆ ಮತ್ತು ಹೊರಗೆ ಎರಡೂ ಕಡೆಯಿಂದ ಅದಕ್ಕೆ ವಿರೋಧ ವ್ಯಕ್ತವಾಗಿ ಆ ನೀತಿಯನ್ನು ಕ್ರಮೇಣ ಪರಿಷ್ಕರಿಸಿ ಪರಿಸ್ಥಿತಿಯನ್ನು ತಹಬಂದಿಗೆ ತರಲಾಗಿತ್ತು. ಈ ಹೊಸ ಸರ್ಕಾರ ಮತ್ತೆ ಅದೇ ನೀತಿಯನ್ನು ಅನುಸರಿಸುತ್ತಿದೆಯೆಂದರೆ ಭಾರತದ ರಾಜಕಾರಣದ ಸೂತ್ರಗಳು ಮೂಲತಃ ಯಾರ ಕೈಯಲ್ಲಿವೆ ಎಂಬುದು ಗೊತ್ತಾಗುತ್ತದೆ. ಸದ್ಯದ ಅಪಾಯವೆಂದರೆ ಬಿಜೆಪಿ ಒಂದು ಸರ್ವಜ್ಞ ಗರ್ವದ ಪಕ್ಷವಾಗಿದ್ದು, ಅದರ ಈಗಿನ ನಾಯಕತ್ವವೂ ಅದಕ್ಕೆ ತಕ್ಕಂತಿದ್ದು, ಅದಕ್ಕೆ ಸಂಸತ್ತಿನಲ್ಲಿ ಗಣನೀಯವೆನ್ನಬಹುದಾದ ವಿರೋಧವೇ ಇಲ್ಲದಾಗಿದೆ. ಈಗ ಏನಿದ್ದರೂ ಜನತೆಯೇ ವಿರೋಧ ಪಕ್ಷವಾಗಿ ಸಂಘಟಿತವಾಗಬೇಕಿದೆ. ಈ ಸರ್ಕಾರದ ಆತ್ಮದ್ರೋಹಿ ರಾಜಕಾರಣದ ಸಂಕೇತದಂತಿರುವ ಭೂಸ್ವಾಧೀನ ಕಾಯಿದೆ ತಿದ್ದುಪಡಿಗೆ ಜನತೆಯ ವಿರೋಧ ಸತತವಾಗಿ ವ್ಯಕ್ತವಾಗುತ್ತಿರುವುದು ಈ ದಿಕ್ಕಿನಲ್ಲಿ ಒಂದು ಶುಭ ಸೂಚನೆಯೇ ಆಗಿದೆ.

ಕಾಂಗ್ರೆಸ್ ಭ್ರಷ್ಟವಾಗಿ ಹೋಗಿ ತನ್ನೆಲ್ಲ ವಿಶ್ವಾರ್ಹತೆಯನ್ನು ಕಳೆದುಕೊಂಡಿರುವ ಮತ್ತು ಎಡ ಪಕ್ಷಗಳು ತಾತ್ವಿಕವಾಗಿ ದಿವಾಳಿಯೆದ್ದು ಹೋಗಿರುವ ಇಂದಿನ ಸಂದರ್ಭದಲ್ಲಿ ಬಿಜೆಪಿಯ ನಗ್ನ ಬಂಡವಾಳಶಾಹಿ ರಾಜಕಾರಣವನ್ನು ಎದುರಿಸಬಲ್ಲ ಒಂದು ವಿಶ್ವಾಸಾರ್ಹ ಜನ ಸಂಘಟನೆಯ ಅಗತ್ಯ ಈಗ ಎದ್ದು ಕಾಣುತ್ತಿದೆ. ಜನತಾ ಪರಿವಾರದ ಐಕ್ಯತೆ ಒಂದು ಅವಕಾಶವಾದಿ ರಾಜಕೀಯ ನಡೆಯಂತೆ ಮಾತ್ರ ಸದ್ಯಕ್ಕೆ ಕಾಣುತ್ತಿದ್ದು, ಅದರ ಮುಂದಿನ ಚಾಲೂ-ಚಹರೆಗಳನ್ನು ಕಾದು ನೋಡಬೇಕಿದೆ. ಇನ್ನು ನಮ್ಮ *ಭರವಸೆಯ ಬೆಳಕಿನಂತಿದ್ದ ಆಮ್ ಪಕ್ಷ* ಈಗ ಮುಟ್ಟಿರುವ ಅವಸ್ಥೆಯಲ್ಲಿ ಅದು ದೆಹಲಿಯಾಚೆ ಕಾಲಿಡುವ ಮುಖವನ್ನು ಕಳೆದುಕೊಂಡಿದೆ. ನಮ್ಮೆಲ್ಲರ ನಾಯಕನಾಗಿ ಕಂಗೊಳಿಸಿದ್ದ ಕೇಜ್ರಿವಾಲ್ ಎಂಬ ವ್ಯಕ್ತಿ ಬೇರುಮಟ್ಟದ ಪ್ರಜಾಪ್ರಭುತ್ವವೇ ಜೀವಾಳವಾಗಿರುವ ಸ್ವರಾಜ್ಯ ತತ್ವದ ಮುಖವಾಡ ಹೊತ್ತ ಎಂತಹ ನಿರ್ಮಮ ಸರ್ವಾಧಿಕಾರಿ ಎಂದು ಪಕ್ಷದ ಇತ್ತೀಚಿನ ನಡಾವಳಿಗಳಿಂದ ಗೊತ್ತಾಗತೊಡಗಿ ಎಲ್ಲರೂ ತಲ್ಲಣಿಸುವಂತಾಗಿದೆ. ಇದರ ಮುಖ್ಯ ಬಲಿಗಳಾಗಿ ನಮ್ಮ ಸಹಾನುಭೂತಿಗೆ ಪಾತ್ರರಾಗಿರುವ ಯೋಗೇಂದ್ರ ಯಾದವ್ ಮತ್ತು ಪ್ರಶಾಂತ್‌ಭೂಷಣರೂ ಇದಕ್ಕೆ ಕಾರಣವೆಂದು ಹೇಳಬೇಕಿದೆ. ಕೇಜ್ರಿವಾಲ್‌ರ ಬೀದಿ ರಾಜಕಾರಣದ ಜನಪ್ರಿಯತೆಗೆ ಮಾರು ಹೋಗಿ ಆಪ್‌ನ್ನು ಒಂದು ಖಚಿತ ತಾತ್ವಿಕ ರಾಜಕೀಯ ಪಕ್ಷವಾಗಿ ರೂಪಿಸುವಲ್ಲಿ ರಾಜಿ ಮಾಡಿಕೊಂಡಿದ್ದು(ಇದರ ವಿವರವಾದ ಚರ್ಚೆಗಾಗಿ ಈ ಪತ್ರಿಕೆಯ ೨೦೧೪ರ ಮೇ ಸಂಚಿಕೆಯ ಸಂಪಾದಕೀಯವನ್ನು ಗಮನಿಸಿ) ಒಂದು ನಿರ್ಣಾಯಕ ತಪ್ಪೆಂದು ಈಗ ಸಾಬೀತಾಗಿದೆ. ಅದೇನೇ ಇರಲಿ, ಆಪ್‌ನ ಮೂಲಸ್ಫೂರ್ತಿ ಆರದಿರಲಿ. ಯೋಗೇಂದ್ರ-ಪ್ರಶಾಂತ್ ಭೂಷಣ್ ಜೋಡಿಯ ಹೊಸ ಪ್ರಯತ್ನಕ್ಕೆ ನಮ್ಮ ಬೆಂಬಲವನ್ನು ಕಾದಿರಿಸೋಣ.

ಈ ಮಧ್ಯೆ ನಮ್ಮ ಮುಖ್ಯಮಂತ್ರಿಗಳು ಕೇಜ್ರಿವಾಲ್‌ರಿಂದ ಸ್ಫೂರ್ತಿ ಪಡೆದಂತೆ ಬಡವರಿಗಾಗಿ ಅಕ್ಕಿಯನ್ನು ಪುಕ್ಕಟೆ ನೀಡಲು ಹೊರಟಿದ್ದಾರೆ! ಇದು ಜನಪ್ರಿಯ ರಾಜಕಾರಣದ ಅತ್ಯಂತ ಬೇಜವಾಬ್ದಾರಿ ರೂಪವೇ ಸರಿ.

## ಹೆದ್ದೂರ ಶೆಟ್ಟರ ಲೋಹಿಯಾ ಅವಹೇಳನದ ಇನ್ನೊಂದು ವರಸೆ!

ಲೋಹಿಯಾ ಅವರ ವ್ಯಕ್ತಿತ್ವ ಮತ್ತು ವಿಚಾರಗಳನ್ನು ಹಲವು ಪರಿಯಲ್ಲಿ ಅವಹೇಳನ ಮಾಡಿ ಅನುಮಾನಾಸ್ಪದಗೊಳಿಸಲೆಂದೇ ಒಂದೆರಡು ವರ್ಷಗಳ ಹಿಂದೆ ಪುಸ್ತಕವೊಂದನ್ನು ಬರೆದ ಬಾಪು ಹೆದ್ದೂರ ಶೆಟ್ಟರು ಅದನ್ನೀಗ ಮರುಮುದ್ರಿಸಿ ಗುರಿ ಇಟ್ಟು ಪುಕ್ಕಟೆ ಹಂಚುತ್ತಿರುವುದರ ಜೊತೆಗೆ, ಈಗ ಸುಮಾರು ಅದೇ ಉದ್ದೇಶದೊಂದಿಗೆ 'ಸಮಾಜವಾದ: ವಾದ-ವಿವಾದ' ಎಂಬ ಇನ್ನೊಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಲೋಹಿಯಾ ಅವಹೇಳನಕ್ಕೆಂದೇ ಬರೆದ ತಮ್ಮ ಮೂಲ ಪುಸ್ತಕದಲ್ಲಿಯೇ ಲೋಹಿಯಾ ಹೇಗೆ ಮೂಲತಃ ಸಮಾಜವಾದಿಯೇ ಅಲ್ಲ, ಅವರೊಬ್ಬ ಅರಾಜಕತಾವಾದಿ(ಒಮ್ಮೊಮ್ಮೆ 'ಅನಧಿಪತ್ಯವಾದಿ'ಯೂ!), ಸುಳ್ಳ, ಕಳ್ಳ, ಕಪಟಿ, ಪಕ್ಷ ವಿಭಜಕ, ಫ್ಯಾಸಿಸ್ಟ್ ಎಂದು 'ಸ್ಪಷ್ಟಪಡಿಸಿ'ಬಿಟ್ಟಿರುವಾಗ ಇವರು ಮತ್ತೆ ಮತ್ತೆ ಏಕೆ ಆ 'ಕೇಡಿ' ಲೋಹಿಯಾ ಬಗ್ಗೆ ಇಷ್ಟೊಂದು ವ್ಯಸನಕ್ಕೊಳಪಟ್ಟವರಂತೆ ಬರೆಯುತ್ತಾರೋ ನನಗೆ ತಿಳಿಯದಾಗಿದೆ! ತಮ್ಮ ಪುಸ್ತಕಗಳಲ್ಲಿ ಸಮಾಜವಾದದ ಐರೋಪ್ಯಮೂಲದ ಚರಿತ್ರೆಯ ಬಗ್ಗೆ ನಿಜವಾಗಿಯೂ ಪಾಂಡಿತ್ಯಪೂರ್ಣವಾಗಿ ಬರೆಯುವ ಹೆದ್ದೂರಶೆಟ್ಟರು, ಭಾರತದಲ್ಲಿ ಸಮಾಜವಾದ ತನ್ನದೇ ಅಸ್ತಿತ್ವ-ಅಸ್ಮಿತೆಗಳನ್ನು ಕಂಡುಕೊಂಡ ಬಗ್ಗೆ ಹೊಂದಿರುವ ಅನುಮಾನ-ಅಸಡ್ಡೆಗಳೇ ಲೋಹಿಯಾ ಕುರಿತ ಇವರ ಈ ಪರಿಯ ಪೂರ್ವಗ್ರಹ, ಕ್ರೋಧ ಮತ್ತು ವ್ಯಸನಕ್ಕೆ ಕಾರಣವಾಗಿವೆಯೆಂದು ಈ ಪುಸ್ತಕವನ್ನೋದಿದಾಗಲೂ ನನಗೆ ಅನ್ನಿಸಿತು.

ಭಾರತಾದ್ಯಂತ ಸಮಾಜವಾದವೆಂದೊಡನೆ ಯಾರಿಗಾದರೂ ಯಾರ ಹೆಸರು ನೆನಪಿಗೆ ಬರುತ್ತದೆ ಮತ್ತು ಇಂದಿಗೂ ಭಾರತೀಯ ಸಮಾಜವಾದ ಕುರಿತ ಶಾಸ್ತ್ರೀಯ ಮತ್ತು ಜನಪ್ರಿಯ ಚರ್ಚೆಗಳೆರಡರಲ್ಲೂ ಯಾರ ಹೆಸರು ಪದೇ ಪದೇ ಪ್ರಸ್ತಾಪವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವುದರಿಂದ, ಇಲ್ಲಿ ನಾನು ಈ ಪುಸ್ತಕವನ್ನು ಚರ್ಚಿಸುವ, ಅವರ ವಾದವನ್ನು ಪ್ರಶ್ನಿಸುವ ನಿರರ್ಥಕ ಕೆಲಸಕ್ಕೆ ಮತ್ತೆ ಕೈಹಾಕುವುದಿಲ್ಲ... ಈ ಪುಸ್ತಕದಲ್ಲಿ ಹೆದ್ದೂರಶೆಟ್ಟರು ಹಲವರೊಡನೆ ಎತ್ತಿಕೊಂಡಿರುವ ಪತ್ರ ರೂಪದ 'ಚರ್ಚೆ'ಗಳಲ್ಲಿ ಸೇರಿರುವ ನನ್ನೊಡನೆಯ ಒಂದೆರಡು 'ಚರ್ಚೆ'ಗಳಲ್ಲಿ ನಾನೀಗಾಗಲೇ ಇದನ್ನು ಮಾಡಿ ತಪ್ಪಿಸಿಗಿದ್ದೇನೆ ಎಂಬ ಅರಿವು ನನಗಾಗಿದೆ. ಹಾಗಾಗಿ ಲೋಹಿಯಾ ಅವರು ಮೂಲ ಸಮಾಜವಾದಿ ಪಕ್ಷವನ್ನು ಬಿಡಲು ಯಾವ ಅನುಕೂಲಸಿಂಧು ಚಿಂತನಾ ಕ್ರಮ ಕಾರಣವಾಯಿತೋ ಆ ಚಿಂತನಾ ಕ್ರಮದ ಪಿತಾಮಹರಾಗಿ ಪಕ್ಷವನ್ನು ಗೊಂದಲಕ್ಕೆ ತಳ್ಳಿ ಅಧಿಕಾರ ರೂಢ ಕಾಂಗ್ರೆಸ್ ಪಕ್ಷಕ್ಕೆ ಹಾರಿ, ಕೊನೆಗೆ ಸಂಸ್ಥಾ ಕಾಂಗ್ರೆಸ್ ಎಂಬ ಯಥಾಸ್ಥಿತಿವಾದಿ ಪಕ್ಷದ ಅಧ್ಯಕ್ಷರಾಗಬೇಕಾಗಿ ಬಂದ ಆ ಅಶೋಕ ಮೆಹ್ತಾರೇ ಭಾರತೀಯ ಸಮಾಜವಾದದ ಮುಂಚೂಣಿ ಚಿಂತಕ ಎಂದು ಮತ್ತು ನಮ್ಮ ಎಸ್. ಎಂ. ಕೃಷ್ಣರೇ ಆ 'ಉಜ್ವಲ' ಪರಂಪರೆಯ ವರ್ತಮಾನದ ಪ್ರತೀಕ ಎಂದು ಹೆದ್ದೂರಶೆಟ್ಟಿ ಮತ್ತು ಅವರ ಸಮಾನ ಮನಸ್ಕ ಗೆಳೆಯರು ನಂಬುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಆದರೆ ಈ ಪುಸ್ತಕದಲ್ಲಿ, ನನ್ನೊಡನೆಯ ಇವರ 'ಚರ್ಚೆ'ಗೆ ಪ್ರತಿಕ್ರಿಯೆಯಾಗಿ ಇವರ ಸಮಾಜವಾದಿ ಅಧ್ಯಯನ ಕೇಂದ್ರದ ಕೆಲ (ಅನಾಮಿಕ) ಸದಸ್ಯರು ನನ್ನ ವಿರುದ್ಧ ಬರೆದ ಪತ್ರವೊಂದನ್ನೂ ಸೇರಿಸಲಾಗಿದೆ. ಈ ಪತ್ರಕ್ಕೆ ಈ ಚರ್ಚೆ ನಡೆದ 'ಸಂವಾದ' ಮಾಸಿಕಕ್ಕೆ ನಾನು ಉತ್ತರವೊಂದನ್ನು ಬರೆದಿದ್ದೆ. ಆದರೆ, ಆ ಪತ್ರಿಕೆಯ ಸಂಪಾದಕರು ತಮ್ಮ ಸಂಪಾದಕೀಯ ವಿವೇಚನಾಧಿಕಾರವನ್ನು ಬಳಸಿ ಅದನ್ನು ಪ್ರಕಟಿಸದೇ ಹೋಗಿದ್ದರು. ಆ ಪತ್ರವನ್ನು ಈಗ ನಮ್ಮ ಓದುಗರ ಕ್ಷಮೆ ಕೋರಿ ಈ ಕೆಳಗೆ ಪ್ರಕಟಿಸುವುದು ಅನಿವಾರ್ಯವಾಗಿದೆ.

**-ಸಂಪಾದಕ**

## 'ಸಂವಾದ'ಕ್ಕೆ ಬರೆದ ಪತ್ರ (ಮೇಲಿನ ಟಿಪ್ಪಣಿಯನ್ನು ನೋಡಿ)

ಪ್ರಿಯ ಸಂಪಾದಕರೇ,

'ಗಾಂಧಿ ದರ್ಶನ' ಕುರಿತ ನನ್ನ ಲೇಖನಕ್ಕೆ ಬಾಪು ಹೆದ್ದೂರಶೆಟ್ಟರು ಬರೆದ ಪ್ರತಿಕ್ರಿಯೆಗೆ ನಾನು ಬರೆದ ಉತ್ತರದಲ್ಲಿನ 'ಈಗ ನೊಣ ಹೊಡೆಯುತ್ತಿರುವ ತಮ್ಮ ಸಮಾಜವಾದಿ ಅಧ್ಯಯನ ಕೇಂದ್ರಕ್ಕೆ' ಎಂಬ ಮಾತಿನ ಬಗ್ಗೆ ಕೇಂದ್ರದ ಕೆಲವು ಸದಸ್ಯರು ಬರೆದ ಪತ್ರವನ್ನು ('ಸಂವಾದ', ಮಾರ್ಚ್, ೨೦೧೩) ಗಮನಿಸಿರುವೆ. ನನ್ನ ಮಾತಿನಿಂದ ನಿಜವಾಗಿ ನೋವಾಗಿರುವ ಸದಸ್ಯರು ನನ್ನನ್ನು ಕ್ಷಮಿಸಲಿ. ಅದರ ಜೊತೆಗೆ, ಅವರ ಪತ್ರದಲ್ಲಿ ನನ್ನ ಬಗ್ಗೆ ಕೆಲವು ವೈಯಕ್ತಿಕ ನೆಲೆಯ ಟೀಕೆ, ಚೇಷ್ಟೆಗಳೂ ಇರುವುದರಿಂದ ಈ ಕೆಲವು ಅಂಶಗಳನ್ನೂ ಅವರು ಗಮನಿಸಲಿ ಎಂದು ಕೇಳಿಕೊಳ್ಳುವೆ:

೧. ನಾನು ಅಕಾರಣವಾಗಿ ಅವರ ಕೇಂದ್ರದ ಪ್ರಸ್ತಾಪ ಮಾಡಿಲ್ಲ. ಸ್ವತಃ ಹೆದ್ದೂರಶೆಟ್ಟರೇ ತಮ್ಮ ಪ್ರತಿಕ್ರಿಯೆಯ ಸಂದರ್ಭವೊಂದರಲ್ಲಿ ತಾವು ನಂಬಿರುವ ಸಮಾಜವಾದವು ಹೇಗೆ ಮತ್ತು ಏಕೆ ನೇರ ವಿದೇಶಿ ಬಂಡವಾಳದ ಪರವಾಗಿದೆ ಎನ್ನುವುದನ್ನು ಸ್ಪಷ್ಟಪಡಿಸಲು ತಮ್ಮ ಈ ಸಮಾಜವಾದಿ ಅಧ್ಯಯನ ಕೇಂದ್ರದ ಸದಸ್ಯರೊಬ್ಬರು ಬರೆದ ಲೇಖನವೊಂದರ ಪ್ರಸ್ತಾಪ ಮಾಡಿದ್ದರು. ಹಾಗಾಗಿ, ಅವರೇ, ನಾನು ಆ ಕೇಂದ್ರದ ಪ್ರಸ್ತಾಪ ಮಾಡಲು ಕಾರಣರಾಗಿದ್ದಾರೆ.

೨. ನಾನು ಕೇಂದ್ರ ಈಗ ನೊಣ ಹೊಡೆಯುತ್ತಿರುವುದರ ಬಗ್ಗೆ ಹೇಳಿದ್ದರೆ ಅವರು ಸಂಪ್ರದಾಯಸ್ಥ ಕುಟುಂಬದ ವಿಧವೆಯೊಬ್ಬರು ತಮ್ಮ ಹಳೆಯ ತುರುಬನ್ನು ನೆನಪಿಸಿಕೊಂಡಂತೆ ಸಮಾಜವಾದಿ ಪಕ್ಷ ಏಕೀಕೃತವಾಗಿದ್ದ ಪುರಾತನ ಕಾಲದಲ್ಲಿನ ತಮ್ಮ ಕೇಂದ್ರದ ವೈಭವವನ್ನು ಸವಿವರವಾಗಿ ಪಟ್ಟಿ ಮಾಡಿ ಬೀಗಿಕೊಂಡಿದ್ದಾರೆ. ಅದರ ಭಾಗವಾಗಿ ನನ್ನ ಮೇಲೆ ಅನೇಕ ವ್ಯಂಗ್ಯ-ಕಟಕಿಗಳ ಬಾಣ-ಬಿರುಸುಗಳನ್ನು ಹಾರಿಸಿದ್ದಾರೆ. ಅವರ ಈ ಸಂತೋಷ-ಸಂಭ್ರಮಕ್ಕೆ ನಾನು ಅಡ್ಡಿ ಬರಲಾರೆ.

೩. ಈ ಅಧ್ಯಯನ ಕೇಂದ್ರ ಇತ್ತೀಚೆಗೆ ನಡೆಸಿರುವ ಅಧ್ಯಯನವು ಯಾವ ತೆರನದ್ದು ಎಂಬುದು ಗಾಂಧಿ-ಲೋಹಿಯಾ ಮುಂತಾದವರು ಪಡೆಯುತ್ತಿದ್ದರೆಂದು ಹೇಳಲಾಗುವ ದೇಣಿಗೆಗಳ ಮೂಲಗಳನ್ನು ಕಲೆ ಹಾಕಿರುವ ರೀತಿ ನೀತಿಗಳಿಂದ ಗೊತ್ತಾಗುವಂತಿದೆ. ಹಾಗೇ, ಈ ಕೇಂದ್ರದ ತೆರೆ ಮರೆಯ ಮಾರ್ಗದರ್ಶಕರು ಲೋಹಿಯಾ ಕುರಿತು ಬರೆದಿರುವ ಅವಹೇಳನಕಾರಿ ಪುಸ್ತಕದ ಬಗ್ಗೆ ಈ ಸದಸ್ಯರು ಮಗುಮ್ಮಾಗಿ ಇರುವುದರಿಂದಲೂ ಈ ಅಧ್ಯಯನದ ಶೀಲ ಎಂತಹದೆಂಬುದು ತಿಳಿದು ಬರುತ್ತದೆ.

೪. ಕೇಂದ್ರ ಅಥವಾ ಅದರ ಪರವಾಗಿ ಅದರ ಉಸ್ತುವಾರಿಯಲ್ಲಿರುವವರು ಅಶೋಕ ಮೆಹ್ತಾ ಜನ್ಮಶತಮಾನೋತ್ಸವದ ಉದ್ಘಾಟನೆಗೆ ಬಂದಿದ್ದ (ಈ ಕೇಂದ್ರ ಹೀಗೆ ಯಾರ್ಯಾರ ಶತಮಾನೋತ್ಸವವನ್ನು ಆಚರಿಸಿದೆ?) ಎಸ್.ಎಂ. ಕೃಷ್ಣರಿಂದ ದೊಡ್ಡ ಪ್ರಮಾಣದಲ್ಲೇ ಹಣ ಪಡೆದರೆಂಬ ಸುದ್ದಿ ನನಗೆ ಗೊತ್ತಾದದ್ದು ಕೇಂದ್ರದ ಇಬ್ಬರು ಸದಸ್ಯರಿಂದಲೇ ಎಂಬುದನ್ನು ಇಲ್ಲಿ ತಿಳಿಸಬಯಸುವೆ. ಹಾಗಿಲ್ಲದಿದ್ದರೆ ಈ ಮಾಹಿತಿ ನನಗಾದರೂ ಹೇಗೆ ದೊರಕೀತು?

೫. ಅದೇನೇ ಇರಲಿ, ಇಂದಿನ ತಲೆಮಾರಿಗೆ ಸಮಾಜವಾದವನ್ನು ಎಸ್.ಎಂ. ಕೃಷ್ಣರ ಮೂಲಕ ಪರಿಚಯಿಸುವ ಈ ಕೇಂದ್ರದ ಈ ಪ್ರಯತ್ನ ಸಮಾಜವಾದದ ಮಾನ ಮರ್ಯಾದೆಗಳನ್ನೇ ತೆಗೆದಿದೆ ಎಂದು ಈ ಸದಸ್ಯರಾರಿಗೂ ಅನ್ನಿಸಿಲ್ಲ ಎಂಬ ಸಂಗತಿ, ಅವರಿಂದ ಹಣ ಪಡೆದ ಮಾಹಿತಿ ತಪ್ಪಾಗಿದ್ದರೂ ಇರಬಹುದೆಂಬ ನನ್ನ ಅಳುಕನ್ನು ಸಂಪೂರ್ಣವಾಗಿ ನಿವಾರಿಸಿದೆ ಎಂದು ಇಲ್ಲಿ ತಿಳಿಸಬಯಸುವೆ.

೬. 'ನಾಗಭೂಷಣರಿಗೂ ಸಹಾಯ ಮಾಡಿರುವ ವೆಂಕಟಸ್ವಾಮಿ' ಎಂದು ಈ ಸದಸ್ಯರು ಬರೆದಿದ್ದಾರೆ. ವೆಂಕಟಸ್ವಾಮಿಯವರು ಸಹಾಯ ಮಾಡಿರುವುದು ನನಗಲ್ಲ; ನಾನು ಅಧ್ಯಕ್ಷನಾಗಿರುವ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನಕ್ಕೆ; ಅದು ನಡೆಸುವ ಅಧ್ಯಯನ ಶಿಬಿರಗಳ ಸಂದರ್ಭದಲ್ಲಿ ಬಹುಶಃ ಎರಡು ಬಾರಿ, ಒಂದು ಅಥವಾ ಎರಡು ಸಾವಿರ ರೂಪಾಯಿಗಳ ಮಟ್ಟದಲ್ಲಿ; ಅದೂ ಸ್ವಯಂಪ್ರೇರಣೆಯಿಂದ ಎಂದು ಇಲ್ಲಿ ತಿಳಿಸಬಯಸುವೆ. ಹಾಗೇ, ವೆಂಕಟಸ್ವಾಮಿಯವರಂತೆಯೇ ಹಲವರು ನಮ್ಮ ಪ್ರತಿಷ್ಠಾನಕ್ಕೆ ಇದೇ ಪ್ರಮಾಣದಲ್ಲಿ ದೇಣಿಗೆ ನೀಡಿದ್ದಾರೆ. ಪ್ರತಿಷ್ಠಾನವು ತನ್ನ ಆದಾಯ ಮತ್ತು ಖರ್ಚಿನ ಪ್ರತಿ ಪೈಸೆಯ ಲೆಕ್ಕ ಇಟ್ಟಿದ್ದು, ಪ್ರತಿ ಹಣಕಾಸಿನ ವರ್ಷದಂತ್ಯಲ್ಲೂ ಅಧಿಕೃತ ಲೆಕ್ಕ ಪರಿಶೋಧನೆ ನಡೆಸಿ ಅದರ ವರದಿಯನ್ನು ಆಯಾ ವರ್ಷದ ಎಲ್ಲ ದೇಣಿಗೆದಾರರಿಗೆ ಒದಗಿಸುತ್ತಿದೆ.

೭. ನಾನು ಸುರಕ್ಷಿತವಾಗಿ ಸರ್ಕಾರಿ ಸೇವೆಯಿಂದ ನಿವೃತ್ತಿ ಪಡೆದು ಈಗ ಸಮಾಜವಾದದ ಕೆಲಸದಲ್ಲಿ ತೊಡಗಿರುವುದಾಗಿ ಈ ಸದಸ್ಯರು ಬರೆದಿದ್ದಾರೆ. ಇಂತಹ ಪುಡಿ ಸಮಾಜವಾದಿಯ ಬಗ್ಗೆಯೂ ಇಷ್ಟು ಸವಿವರವಾದ ಕಡತ ತಯಾರು ಮಾಡಿಡಬಲ್ಲ ಕೇಂದ್ರದ ಅಧ್ಯಯನಶೀಲತೆ ಮೆಚ್ಚತಕ್ಕದ್ದೇ ಆಗಿದೆ. ಆದರೆ ಇಂತಹ ಕಡತ ತಯಾರಿಸಿದ ಯಾವ ಮತ್ತು ಎಷ್ಟು ಸದಸ್ಯರು ತಮ್ಮ ಕುಟುಂಬ ನಿರ್ವಹಣೆಗಾಗಿ ಯಾವುದೇ ದುಡಿಮೆಯಿಲ್ಲದೆ ಸಮಾಜವಾದದ ಕೆಲಸ ಮಾಡಿದ್ದಾರೆ ಅಥವಾ ಮಾಡುತ್ತಿದ್ದಾರೆ ಹಾಗೂ ಯಾರು ಎಷ್ಟು ಅಸುರಕ್ಷಿತವಾಗಿ ನಿವೃತ್ತಿ ಪಡೆದಿದ್ದಾರೆ ಎಂದು ನಾನು ತಿಳಿಯಬಯಸುವೆ. ಜೊತೆಗೆ (ಸ್ವಯಂ) ನಿವೃತ್ತಿ ಪಡೆದ ನಂತರವಷ್ಟೇ ನಾನು ಸಮಾಜವಾದದ ಕೆಲಸ ಮಾಡುತ್ತಿರುವುದಾಗಿ ಇವರು ಹೇಳುವ ನನ್ನಂತಹ ಯಕಃಶ್ಚಿತ್ ವ್ಯಕ್ತಿ ಆಡಿದ ಮಾತುಗಳ ಬಗ್ಗೆ ತಮ್ಮ ಕೇಂದ್ರದ ಹಳೆಯ ಕಂತೆ ಪುರಾಣವನ್ನೆಲ್ಲ ಬಿಚ್ಚಿಡುವ ಮಟ್ಟಿಗೆ ಹೀಗೆ ಸಾಮೂಹಿಕವಾಗಿ ಏಕೆ ವಿಚಲಿತರಾಗಿದ್ದಾರೋ ನನಗೆ ತಿಳಿಯದಾಗಿದೆ!

೮. ನಾನು ವ್ಯಕ್ತಿಗತ ಪುಸ್ತಕಗಳನ್ನು ಪ್ರಕಟಿಸಿರುವುದಾಗಿ ಈ ಸದಸ್ಯರು ಹೇಳಿದ್ದಾರೆ. ಹಾಗೆಂದರೇನೆಂದು ನನಗೆ ತಿಳಿಯದಾಗಿದೆ! ನಾನು ವೈಯುಕ್ತಿಕ ನೆಲೆಯಲ್ಲಿ ಪ್ರಕಟಿಸುವ ಪುಸ್ತಕಗಳ ವಸ್ತು ನನ್ನ ಆಯ್ಕೆ. ಇವರ ಸಮಾಜವಾದದ ಪ್ರಕಾರ ಇದು ಅಪರಾಧವಾಗಿದ್ದರೆ, ಅದನ್ನು ಪ್ರಶ್ನಿಸಲು ಇವರು ತಮ್ಮ ಸಮಾಜವಾದ ಅಧಿಕಾರಕ್ಕೆ ಬರುವ ತನಕ ಕಾಯುವುದು ಒಳ್ಳೆಯದು.

**-ಡಿ.ಎಸ್. ನಾಗಭೂಷಣ**

## ನಮ್ಮ ಸಮಾಜವಾದಿಗಳು

# ಧೀರ ಹೋರಾಟಗಾರ: ಜಾರ್ಜ್ ಫರ್ನಾಂಡೀಸ್



**ಜಾ**ರ್ಜ್ ಫರ್ನಾಂಡೀಸ್ ಎಂಬುದು ಸ್ವಾತಂತ್ರ್ಯೋತ್ತರ ಭಾರತದ ಕಾರ್ಮಿಕ ಚಳುವಳಿ ಮತ್ತು ರಾಜಕೀಯ ಕ್ಷೇತ್ರಗಳ ಬಹುದೊಡ್ಡ ಹೆಸರು. ೧೯೭೪ರ ಅಖಿಲ ಭಾರತ ರೈಲ್ವೇ ನೌಕರರ ಚಳುವಳಿ ಮತ್ತು ೧೯೭೭ರ ತುರ್ತು ಪರಿಸ್ಥಿತಿ ವಿರೋಧ'ದ ಬರೋಡಾ ಡೈನಾಮೈಟ್ ಪ್ರಕರಣ ಜಾರ್ಜ್ ಫರ್ನಾಂಡೀಸರ ಹೆಸರನ್ನು ಭಾರತಾದ್ಯಂತ ಮನೆ ಮಾತಾಗಿಸಿತು. ೧೯೭೭ರಲ್ಲಿ ಜನತಾ ಪಕ್ಷ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರಕ್ಕೆ ಬಂದು, ಡೈನಾಮೈಟ್ ಪ್ರಕರಣದಿಂದಾಗಿ ಸೆರೆಮನೆಯಲ್ಲಿದ್ದ ಫರ್ನಾಂಡೀಸ್ ಬಿಡುಗಡೆಯಾದಾಗ ಇಡೀ ಭಾರತದ ಸ್ವಾತಂತ್ರ್ಯ ಪ್ರಿಯರ, ನಿರ್ದಿಷ್ಟವಾಗಿ ಯುವಜನರ ಕಣ್ಮಣಿಯಾಗಿದ್ದರು. ಅದು 'ಭಾರತಬಿಟ್ಟು ತೊಲಗಿ' ಚಳುವಳಿಯಲ್ಲಿ ಭೂಗತರಾಗಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಿದ ಜೆಪಿ ಮತ್ತು ಲೋಹಿಯಾ, ಭಾರತದ ಸ್ವಾತಂತ್ರ್ಯ ಘೋಷಣೆಯ ಸಂಬಂಧದ ಮಾತುಕತೆಗೆ ಮುನ್ನ ಲಾಹೋರ್ ಸೆರೆಮನೆಯಿಂದ ಬಿಡುಗಡೆಯಾದ ಸಂದರ್ಭಕ್ಕೆ, ಆ ಸಂದರ್ಭದ ಜನರ ಸಂಭ್ರಮಕ್ಕೆ ಹೋಲಿಸಬಹುದಾದ ರೋಚಕ ಐತಿಹಾಸಿಕ ಕ್ಷಣವಾಗಿತ್ತು.

ಜಾರ್ಜ್ ಕನ್ನಡಿಗರು. ಅವರು ಮಂಗಳೂರಿನ ರೋಮನ್ ಕ್ಯಾಥೋಲಿಕ್ ಕುಟುಂಬವೊಂದರಲ್ಲಿ ೧೯೩೦ರ ಜೂನ್ ೩ರಂದು ಜನಿಸಿದರು. ಮನೆ ಮಾತು ಕೊಂಕಣಿಯಾದರೂ, ಕನ್ನಡ ಅವರ ಸಾರ್ವಜನಿಕ ಬಳಕೆಯ ಮತ್ತು ಶಿಕ್ಷಣ ಪಡೆದ ಭಾಷೆಯಾಗಿತ್ತು. ಆನಂತರ ಅವರು ಈ ಎರಡು ಭಾಷೆಗಳ ಜೊತೆಗೆ ಲ್ಯಾಟಿನ್ ಸೇರಿ ಇತರ ಏಳು ಭಾಷೆಗಳಲ್ಲಿ ಪರಿಣಿತರಾದರು. ಅವರು ಬಹುಕಾಲ ಕರ್ನಾಟಕದಲ್ಲಿ ಇರಲಿಲ್ಲವಾದರೂ, ಅವರು ತಮ್ಮ ಕಾರ್ಮಿಕ ಸಂಘಟನೆಯ ಕೆಲಸ ಆರಂಭಿಸಿದ್ದು ಕರ್ನಾಟಕದಲ್ಲಿಯೇ. ಧಾರ್ಮಿಕ ಶ್ರದ್ಧೆಯ ಕುಟುಂಬವಾಗಿದ್ದ ಅವರ ಕುಟುಂಬ ಜಾರ್ಜ್‌ರನ್ನು ಅವರ ೧೬ನೇ ವಯಸ್ಸಿನಲ್ಲಿ ಬೆಂಗಳೂರಿನ ಸೇಂಟ್ ಪೀಟರ್ ಧಾರ್ಮಿಕ ಶಿಕ್ಷಣ ಶಾಲೆಗೆ ಸೇರಿಸಿದರು. ಅವರು ಅಲ್ಲಿ ರೋಮನ್ ಕ್ಯಾಥೋಲಿಕ್ ಪೌರೋಹಿತ್ಯದ ಸಂಬಂಧವಾಗಿ ಮೂರು ವರ್ಷಗಳ ಶಿಕ್ಷಣವನ್ನು ಪೂರೈಸಿದರಾದರೂ, ಅಲ್ಲಿನ ವ್ಯವಸ್ಥೆಯಲ್ಲಿನ ವಿವಿಧ ಶ್ರೇಣಿಗಳು ಮತ್ತು ತಾರತಮ್ಯಗಳನ್ನು ಕಂಡು ವಿಚಲಿತರಾಗಿದ್ದರು.

ಹಾಗಾಗಿ ಧಾರ್ಮಿಕ ಶ್ರದ್ಧೆ ಕಳೆದುಕೊಂಡ ಜಾರ್ಜ್ ಅವರು ಮಂಗಳೂರಿಗೆ ಹಿಂದಿರುಗಿ ಶೋಷಿತರ, ದುರ್ಬಲರ ಸಂಘಟನೆಗೆ ತೊಡಗಿದರು. ವಿಶೇಷವಾಗಿ ಸಾರಿಗೆ ಮತ್ತು ಹೋಟೆಲ್ ಕಾರ್ಮಿಕರನ್ನು ಅವರು ಸಂಘಟಿಸಿದರು. ಆಗ ಮನೆಯಿಂದ ದೂರ ಸರಿದಿದ್ದ ಜಾರ್ಜ್‌ರನ್ನು ಗುರುತಿಸಿ, ಆಶ್ರಯ ನೀಡಿ ಪ್ರೋತ್ಸಾಹಿಸಿದವರು ಸಮಾಜವಾದಿಯಾಗಿದ್ದ ಅಮ್ಮೆಂಬಳ ಬಾಳಪ್ಪ ಅವರು. ಇವರ ಸಲಹೆಯಂತೆಯೇ ಜಾರ್ಜ್ ಜೀವನೋಪಾಯ ಅರಸಿ ೧೯೪೯ರಲ್ಲಿ ಮುಂಬೈಗೆ ಹೊರಟದ್ದು ಕೂಡ.

ಮುಂಬೈನಲ್ಲಿ ಉದ್ಯೋಗಕ್ಕಾಗಿ ಅಲೆಯುತ್ತಾ, ಸಮುದ್ರದ ಮರಳಿನ ಮೇಲೆಯೇ ರಾತ್ರಿಗಳನ್ನು ಕಳೆಯುತ್ತಿದ್ದ ಜಾರ್ಜ್‌ರಿಗೆ ಆಗ ಪ್ರಸಿದ್ಧ ಕಾರ್ಮಿಕ ನಾಯಕರಾಗಿದ್ದ ಪ್ಲಾಸಿಡ್ ಡಿ'ಮೆಲ್ಲೋರ ಪರಿಚಯವಾಯಿತು. ಹುಡುಗನ ಸಾಮಾಜಿಕ ಕಳಕಳಿ, ಉತ್ಸಾಹ ಮತ್ತು ಶ್ರದ್ಧೆಗಳನ್ನು ಗುರುತಿಸಿದ ಡಿ'ಮೆಲ್ಲೋ ಜಾರ್ಜ್‌ರನ್ನು ಕಾರ್ಮಿಕ ಸಂಘಟನೆಗೆ ತೊಡಗಿಸಿದರು. ಆರಂಭದಲ್ಲಿ ಹೋಟೆಲ್ ಕಾರ್ಮಿಕರು ಮತ್ತು ಟ್ಯಾಕ್ಸಿ ಚಾಲಕರ ಸಂಘಟನೆಯಲ್ಲಿ ತೊಡಗಿ ಆ ಬೃಹತ್ ನಗರದ ಈ ಕಾರ್ಮಿಕ ಶಕ್ತಿಯ ದೊಡ್ಡ ಜಾಲವನ್ನೇ ನಿರ್ಮಿಸಿದ ಫರ್ನಾಂಡೀಸ್, ಅದರ ಹಿತಾಸಕ್ತಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ದೊಡ್ಡ ಹೋರಾಟಗಳನ್ನೇ ಅರಂಭಿಸಿ, ಮುಷ್ಕರಗಳನ್ನು ಸಂಘಟಿಸಿ ಯಶಸ್ವಿಯೂ ಆದರು. ಅನೇಕ ಬಾರಿ ವಿವಿಧ ಅವಧಿಗಳ ಸೆರೆಮನೆವಾಸಗಳಿಗೂ ಅವರು ತುತ್ತಾದರು. ಇದರಿಂದ ಇತರ ಕಾರ್ಮಿಕ ವಲಯಗಳಲ್ಲೂ ಅವರ ಜನಪ್ರಿಯತೆ ಹೆಚ್ಚಿತು. ಅವರು ಹಡಗುಕಟ್ಟೆ ಮತ್ತು ರೈಲ್ವೇ ಇಲಾಖೆಗಳ ಕಾರ್ಮಿಕರ ಜನಪ್ರಿಯ ನಾಯಕರಾಗಿಯೂ ಮೂಡಿದರು.

ಸಮಾಜವಾದಿ ಪಕ್ಷದ ಕಾರ್ಮಿಕ ವಿಭಾಗವಾಗಿದ್ದ *ಹಿಂದ್ ಮಜದೂರ್ ಸಭಾ*ದ ನಾಯಕರಾಗಿದ್ದ ಡಿಮೆಲ್ಲೋ ಜಾರ್ಜರನ್ನು ಸಮಾಜವಾದಿ ಪಕ್ಷದ ನಾಯಕರಾಗಿದ್ದ ರಾಮಮನೋಹರ ಲೋಹಿಯಾರಿಗೆ ಪರಿಚಯಿಸಿದರು. ಲೋಹಿಯಾರ ವ್ಯಕ್ತಿತ್ವ ಮತ್ತು ವಿಚಾರಗಳಿಂದ ಪ್ರಭಾವಿತರಾದ ಜಾರ್ಜ್ ಸಮಾಜವಾದಿ ಪಕ್ಷದ ಸದಸ್ಯತ್ವ ಪಡೆದುಕೊಂಡು ರಾಜಕಾರಣದಲ್ಲೂ ಸಕ್ರಿಯವಾಗಿ ತೊಡಗಿಕೊಂಡರು. ಇದರ ಪರಿಣಾಮವಾಗಿ ೧೯೬೧ರಲ್ಲಿ ಮುಂಬೈ ನಗರಪಾಲಿಕೆಯ ಚುನಾವಣೆಗಳಿಗೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. ನಂತರದ ಎರಡು ಅವಧಿಗಳಲ್ಲಿಯೂ ನಗರಪಾಲಿಕೆಯ ಸದಸ್ಯರಾಗಿ ಗೆದ್ದ ಫರ್ನಾಂಡೀಸ್ ಆ ಬೃಹತ್ ನಗರದ ಕಾರ್ಮಿಕ ಸಮುದಾಯದ ಸಮಸ್ಯೆಗಳ ಪರಿಹಾರಗಳ ವಿಷಯವಾಗಿ ದೊಡ್ಡ ಹೋರಾಟಗಳನ್ನೇ ನಡೆಸಿದರು. ಇದರ ಫಲ ಕಂಡದ್ದು ಲೋಹಿಯಾ ಅವರು ಕಾಂಗ್ರೆಸ್ಸೇತರವಾದ ಪ್ರತಿಪಾದಿಸಿದ ೧೯೬೭ರ ಲೋಕಸಭಾ ಚುನಾವಣೆಗಳಲ್ಲಿ. ಮುಂಬೈ ದಕ್ಷಿಣ ಕ್ಷೇತ್ರದಿಂದ ಸಂಯುಕ್ತ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮುಂಬೈನ ಸುಪ್ರಸಿದ್ಧ ರಾಜಕಾರಣಿ ಎಸ್.ಕೆ. ಪಾಟೀಲ್ ವಿರುದ್ಧ ಸ್ಪರ್ಧಿಸಿದ ಜಾರ್ಜ್ ಎಲ್ಲರ ನಿರೀಕ್ಷೆಯನ್ನೂ ಹುಸಿಗೊಳಿಸಿ ಭಾರಿ ಅಂತರದಿಂದ ಗೆದ್ದೇಬಿಟ್ಟರು. ಇದರಿಂದಾಗಿ 'ಸೈಂಧವ ಹಂತಕ' (Gaint killer) ಎಂದೇ ಹೆಸರಾದ ಜಾರ್ಜ್ ಅಂದಿನಿಂದ ಅಖಿಲಭಾರತ ನಾಯಕರೂ ಆಗಿ ಮೂಡಿದರು.

ಲೋಕಸಭಾ ಸದಸ್ಯರಾದ ನಂತರ ಕಾರ್ಮಿಕ ಚಳುವಳಿಯ ನಾಯಕತ್ವವನ್ನು ತನ್ನ ಕಿರಿಯ ಸಹವರ್ತಿಗಳಿಗೆ ವಹಿಸಿದ ಫರ್ನಾಂಡೀಸ್ ಸಮಾಜವಾದಿ ರಾಜಕಾರಣದಲ್ಲಿ ತಮ್ಮನ್ನು ಹೆಚ್ಚೆಚ್ಚು ತೊಡಗಿಸಿಕೊಳ್ಳಲಾರಂಭಿಸಿದರು ಲೋಹಿಯಾ ನಿಧನಾನಂತರ ೧೯೬೯ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಅವರು ೧೯೭೩ರ ಹೊತ್ತಿಗೆ ಪಕ್ಷದಲ್ಲಿ ಎಷ್ಟು ವರ್ಚಸ್ವೀ ನಾಯಕರಾಗಿ ಬೆಳೆದಿದ್ದರೆಂದರೆ, ಒಡೆದು ದೂರವಾಗಿದ್ದ ಸಮಾಜವಾದಿ ಪಕ್ಷಗಳ ಎರಡು ಗುಂಪುಗಳು ಒಂದಾಗಿ ಮತ್ತೆ ಉದಯವಾದ ಏಕೀಕೃತ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು. ಎಪ್ಪತ್ತರ ಆ ದಶಕ ಎಂದರೆ ದೇಶ ಬಂಗ್ಲಾ ಯುದ್ಧದ ನಂತರ ಅನೇಕ ಸಂಕಷ್ಟಗಳಿಗೆ ಸಿಲುಕಿ ತಳಮಳಗಳಿಗೆ ಸಿಕ್ಕಿದ್ದ ದಶಕ. ಇಂದಿರಾ ಗಾಂಧಿಯವರ 'ಗರೀಬಿ ಹಟಾವೋ' ಘೋಷಣೆ ಪೊಳ್ಳಾಗಿ ಹೋಗಿ, ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮುಗಿಲು ಮುಟ್ಟಿ ಪ್ರಧಾನಿ ಇಂದಿರಾ ಗಾಂಧಿಯವರ ಜನಪ್ರಿಯತೆ ಕುಸಿಯುತ್ತಿದ್ದ ಕಾಲವದು. ಸರ್ಕಾರದ ವಿರುದ್ಧ ಯುವಜನರು, ವಿದ್ಯಾರ್ಥಿಗಳು, ಕಾರ್ಮಿಕರು ಸಂಘಟಿತರಾಗಿ ಸಿಡಿದೇಳತೊಡಗಿದ್ದರು.

ಜಾರ್ಜ್ ತಮ್ಮ ನಾಯಕ ಲೋಹಿಯಾರ ಕಾಂಗ್ರೆಸ್ ವಿರೋಧಿ ರಾಜಕೀಯ ಪರಂಪರೆಗೆ ಅನುಗುಣವಾಗಿ ಇಂದಿರಾ ಸರ್ಕಾರದ ದುರಾಡಳಿತ ಮತ್ತು ಭ್ರಷ್ಟತೆಯ ವಿರುದ್ಧ ಜನಾಭಿಪ್ರಾಯ ಮೂಡಿಸಲು ಸಂಸತ್ತು ಮತ್ತು ಅದರ ಹೊರಗೆ ಶ್ರಮಿಸಿದರು. ಆ ಹೊತ್ತಿಗೆ ರೈಲ್ವೇ ಇಲಾಖೆಯ ನೌಕರರೂ, ಈಡೇರದ ತಮ್ಮ ಬಹುದಿನಗಳ ವೇತನ ಪರಿಷ್ಕರಣೆ ಮತ್ತು ಇತರೆ ಕ್ಷೇಮಾಭ್ಯುದಯ ಬೇಡಿಕೆಗಳನ್ನು ಒತ್ತಾಯಿಸಿ ೧೯೭೪ರ ಮೇ ೮ರಂದು ಮುಷ್ಕರ ಆರಂಭಿಸಿದರು. ಸಹಜವಾಗಿಯೇ ಈ ಕಾರ್ಯಚರಣೆಯ ನೇತೃತ್ವ ವಹಿಸಿದ ಜಾರ್ಜ್ ಫರ್ನಾಂಡೀಸ್ ತಮ್ಮ ಚತುರ ಸಂಘಟನಾ ಶಕ್ತಿಯಿಂದ ಇಡೀ ರೈಲ್ವೇ ಇಲಾಖೆಯ ವಿವಿಧ ಘಟಕಗಳಲ್ಲದೆ, ಇತರೆ ಹಲವು ವಲಯಗಳ ಕಾರ್ಮಿಕರ ಸಂಘಗಳ ಬೆಂಬಲವನ್ನು ಸಂಘಟಿಸಿ ಇಡೀ ದೇಶದ ಆರ್ಥಿಕ ಚಕ್ರ ಹೆಚ್ಚೂ ಕಡಿಮೆ ಸ್ಥಗಿತಗೊಳ್ಳುವಂತೆ ಮಾಡಿದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಅತಿ ದೀರ್ಘ ಮತ್ತು ಸಂಕಷ್ಟಮಯವೆನಿಸಿದ ಮುಷ್ಕರ ೩೦ ಸಾವಿರ ಜನ ಕಾರ್ಮಿಕರ ಬಂಧನಕ್ಕೆ, ನಂತರ ಹಲವು ಸಾವಿರ ರೈಲ್ವೇ ಇಲಾಖೆಯ ನೌಕರರ ಅಮಾನತ್ತು ಮತ್ತು ವಜಾದಂತಹ ಸರ್ಕಾರದ ದಮನಕಾರಿ ಕ್ರಮಗಳಿಗೆ ಕಾರಣವಾಗಿ ಮೇ ೨೭ರಂದು ಏಕಪಕ್ಷೀಯವಾಗಿ ಕಾರ್ಮಿಕ ಸಂಘಗಳ ಕ್ರಿಯಾಸಮಿತಿಯಿಂದಲೇ ಹಿಂತೆಗೆಯಲ್ಪಟ್ಟಿತು. ಆಗ ಕಾರ್ಮಿಕರಿಗೆ ಮುಷ್ಕರದಿಂದ ಯಾವ ಫ್ರತಿಫಲವೂ ಸಿಗದಿದ್ದರೂ, ಇಂತಹ ಅಶಾಂತಮಯ ವಾತಾವರಣ ಜೆಪಿ ಚಳುವಳಿಯ ಮೂಲಕ ತಾರಕಕ್ಕೇರಿ ತುರ್ತು ಪರಿಸ್ಥಿತಿ ಘೋಷಣೆಯಾಗಿ, ಅದರ ರಾಜಕೀಯ ಪರಿಣಾಮವಾಗಿ ೧೯೭೭ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ಮತ್ತೋರ್ವ ಸಮಾಜವಾದಿ ನಾಯಕ ಮಧು ದಂಡವತೆಯವರು ರೈಲ್ವೇ ಮಂತ್ರಿಯಾದಾಗ ರೈಲ್ವೇ ಕಾರ್ಮಿಕರ

ಮೂಲ ಬೇಡಿಕೆಗಳಲ್ಲಿ ಬಹುಪಾಲು ಈಡೇರಲ್ಪಟ್ಟವು. ಅಮಾನತು ಮತ್ತು ವಜಾಗಳಿಗೆ ಒಳಗಾಗಿದ್ದ ಕಾರ್ಮಿಕರಿಗೆ ಪುರ್ನವಸತಿ ಕಲ್ಪಿಸಲಾಯಿತು.

ತುರ್ತು ಪರಿಸ್ಥಿತಿ ವೇಳೆ ಬಂಧನದಿಂದ ತಪ್ಪಿಸಿಕೊಳ್ಳಲು ಭೂಗತರಾದ ಜಾರ್ಜ್ ಫರ್ನಾಂಡೀಸ್, ರಾಷ್ಟ್ರಾದ್ಯಂತ ಮಾರುವೇಷದಲ್ಲಿ ಸಂಚರಿಸುತ್ತಾ ಇಂದಿರಾ ಸರ್ಕಾರದ ಸರ್ವಾಧಿಕಾರದ ವಿರುದ್ಧ ಹೋರಾಟಗಳನ್ನು ರೂಪಿಸಿದರು. ಇದರ ಫಲವಾಗಿ ಅವರ ಸೋದರರು–ನಿರ್ದಿಷ್ಟವಾಗಿ ಮೈಕೇಲ್ ಫರ್ನಾಂಡೀಸ್–ಮತ್ತು ಗೆಳೆಯರು–ನಿರ್ದಿಷ್ಟವಾಗಿ ಸ್ನೇಹಲತಾ ರೆಡ್ಡಿ–ಸರ್ಕಾರದ ದಮನ, ಚಿತ್ರಹಿಂಸೆಗೆ ಒಳಗಾಗಬೇಕಾಯಿತು; ಸ್ನೇಹಲತಾ ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಸರ್ಕಾರವನ್ನು ಬೆದರಿಸಿ ಶರಣಾಗುವಂತೆ ಮಾಡಲು ಜಾರ್ಜ್ ಬರೋಡಾದ ಕೆಲ ಸಮಾನಮನಸ್ಕರೊಂದಿಗೆ ಗುಟ್ಟಾಗಿ ಸಮಾಲೋಚಿಸಿ ಸರ್ಕಾರಿ ಕಛೇರಿಗಳನ್ನು ರಾತ್ರಿವೇಳೆ ಡೈನಾಮೈಟ್ ಮೂಲಕ ಸ್ಫೋಟಿಸುವ ಯೋಜನೆಯೊಂದನ್ನು ರೂಪಿಸಿದರು. ಅದು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳ್ಳುವ ಮುನ್ನವೇ ಅವರು ಕಲ್ಕತ್ತಾದಲ್ಲಿ ಬಂಧಿತರಾಗಿ, ಹಿಂಸೆ ಮತ್ತು ಸರ್ಕಾರದ ವಿರುದ್ಧ ಪಿತೂರಿಯ ಆಪಾದನೆಗಳನ್ನು ಎದುರಿಸುತ್ತಾ ಕೈಕಾಲುಗಳಿಗೆ ಸರಪಳಿ ಬಿಗಿದ ಸೆರೆಯಾಳಾಗಿ ಸುಮಾರು ಹತ್ತು ತಿಂಗಳುಗಳ ಕಾಲ ದೆಹಲಿಯ ತಿಹಾರ್ ಜೈಲಿನಲ್ಲಿರಬೇಕಾಯಿತು. ಕೊನೆಗೆ ಅಂತಾರಾಷ್ಟ್ರೀಯ ಒತ್ತಡಗಳಿಂದಾಗಿ ಇಂದಿರಾ ೧೯೭೭ರ ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಂಡು ಚುನಾವಣೆಗಳನ್ನು ನಡೆಸಿ, ಅದರಲ್ಲಿ ಸೋತಾಗ, ಫರ್ನಾಂಡೀಸ್‌ರಿಗೆ ಸೆರೆಮನೆಯಿಂದ ಬಿಡುಗಡೆ ಮತ್ತು ತಮ್ಮ ವಿರುದ್ಧದ ಎಲ್ಲ ಮೊಕದ್ದಮೆಗಳಿಂದ ಮುಕ್ತವಾಗುವ ಭಾಗ್ಯ ದೊರಕಿತು. ಸೆರೆಮನೆಯಿಂದಲೇ ಬಿಹಾರದ ಮುಝಫರ್‌ಪುರದಿಂದ ಜೆಪಿ ರೂಪಿಸಿದ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಾರ್ಜ್ ೩ ಲಕ್ಷ ಮತಗಳ ಭಾರಿ ಅಂತರದಿಂದ ಗೆದ್ದಿದ್ದರು.

ನಂತರ ಜನತಾ ಪಕ್ಷದ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಯಾದ ಫರ್ನಾಂಡೀಸ್ ಭಾರತದ ಕಂಪನಿ ಕಾನೂನುಗಳನ್ನು ಪಾಲಿಸಲು ನಿರಾಕರಿಸುತ್ತಿವೆ ಎಂಬ ಕಾರಣದ ಮೇಲೆ ಕೋಕಾ ಕೋಲಾ ಮತ್ತು ಐ.ಬಿ.ಎಂ ಕಂಪನಿಗಳ ಭಾರತದಲ್ಲಿನ ಶಾಖೆಗಳನ್ನು ಮುಚ್ಚಿಸುವ ಧೈರ್ಯ ತೋರಿ ದೊಡ್ಡ ಸುದ್ದಿ ಮಾಡಿದರು. ಅಷ್ಟೇ, ಅಲ್ಲಿಗೆ ಅವರ ಹೋರಾಟದ ಬದುಕು ಮುಗಿಯಿತೆಂದು ಹೇಳಬೇಕು. ಮುಂದಿನದೆಲ್ಲ ಇತ್ತೀಚಿನ ಇತಿಹಾಸ. ಜನತಾ ಪಕ್ಷ ಎರಡೇ ವರ್ಷಗಳಲ್ಲಿ ಒಡೆದು, ಸರ್ಕಾರ ಬಿದ್ದು ಹೋದಾಗ ಜನತಾ ಪಕ್ಷದ ನಿರ್ಮಾಣದಲ್ಲಿ ಪಕ್ಷವನ್ನು ಕಳೆದುಕೊಂಡಿದ್ದ ಎಲ್ಲ ಸಮಾಜವಾದಿಗಳಂತೆ ಕೆಲ ಕಾಲ ಇವರೂ ಜನತಾ ಪಕ್ಷದ ಚೂರುಪಾರುಗಳ ಚಿಲ್ಲರೆ ರಾಜಕಾರಣದಲ್ಲಿ ಬಸವಳಿದು, ಕೊನೆಗೆ ವಿ.ಪಿ. ಸಿಂಗ್‌ರ ನೇತೃತ್ವದ ಜನತಾ ದಳದ ಸರ್ಕಾರದಲ್ಲಿ ರೈಲ್ವೇ ಮಂತ್ರಿಯಾಗಿ ಕೊಂಕಣ ರೈಲ್ವೇ ಎಂಬ ಬೃಹತ್ ರೈಲ್ವೇ ಯೋಜನೆಯ ಯಶಸ್ಸಿನ ಹೆಗ್ಗಳಿಕೆ ಪಾತ್ರರಾದರು. ಆದರೆ ನಂತರದ ಅವರ ರಾಜಕಾರಣ ಸಂಪೂರ್ಣ ಗೊಂಲಮಯವೇ ಆದದ್ದು ಸಮಾಜವಾದಿ ರಾಜಕಾರಣದ ದುರಂತಗಳಲ್ಲೊಂದು. ಅವರು ತಮ್ಮ ಕೆಲ ಸಮಾಜವಾದಿ ಗೆಳೆಯರೊಂದಿಗೆ ಸೇರಿ ಸಮತಾ ಪಕ್ಷ ಕಟ್ಟಿದರು. ನಂತರ ಒಳಜಗಳಗಳಿಗೆ ಸಿಕ್ಕಿ ಅದನ್ನು ಬೆಳೆಸಲಾಗದೆ ಜನತಾ ಬಳಗದ ಐಕ್ಯತೆಯ ಹೆಸರಿನಲ್ಲಿ ಜೆಡಿ(ಯು)ನಲ್ಲಿ ವಿಲೀನಗೊಳಿಸಿದರು. ಕೊನೆಗೆ ಅವರ ತಾತ್ವಿಕ ರಾಜಕಾರಣದ ವಿಪರ್ಯಾಸವೆಂಬಂತೆ, ಯಾವ ಕೋಮುವಾದಿ ರಾಜಕಾರಣದ ಕಾರಣದ ಮೇಲೆ ಜನತಾ ಪಕ್ಷದ ಒಡಕನ್ನು ಅವರು ಬೆಂಬಲಿಸಿದ್ದರೋ ಆ ಕೋಮುವಾದಿ ರಾಜಕರಣದ ಪ್ರತೀಕವಾಗಿ ಬೆಳೆದಿದ್ದ ಭಾರತೀಯ ಜನತಾ ಪಕ್ಷದ ನೇತೃತ್ವದ ಮೈತ್ರಿಕೂಟದಲ್ಲಿ ತಮ್ಮ ಜೆಡಿ(ಯು) ಪಕ್ಷವನ್ನು ಭಾಗಿಯಾಗಿಸಿ ಕೇಂದ್ರ ರಕ್ಷಣಾ ಮಂತ್ರಿಯಾದರು. ಇದರ ಪರಿಣಾಮವಾಗಿ ಜೆಡಿ(ಯು) ಒಡೆದು ಜೆಡಿ(ಎಸ್) ಎಂಬ ಪಕ್ಷದ ಉದಯಕ್ಕೂ ಅವರು ಮತ್ತು ಅವರ ಗೆಳೆಯರು ಕಾರಣರಾದರು. ಈ ಮಧ್ಯೆ ಅವರ ಕೌಟುಂಬಿಕ ಬದುಕೂ ಅಸ್ತವ್ಯಸ್ತವಾಗಿ ಅವರ ಪತ್ನಿ ಲೈಲಾ ಕಬೀರ್ ಮತ್ತು ಮಗ ಸಿಯಾನ್ ಅವರಿಂದ ದೂರಾದರು. ಜಯಾ ಜೈಟ್ಲಿ ಎಂಬ ವಿವಾಹ ವಿಚ್ಛೇದಿತ ಮಹಿಳೆ ಜಾರ್ಜ್‌ರ ಅವರ ಜೊತೆಗಾರ್ತಿಯಾದರು.

ಜಾರ್ಜ್ ರಕ್ಷಣಾ ಸಚಿವರಾಗಿದ್ದಾಗಲೇ–೧೯೯೮ರಲ್ಲಿ–ಭಾರತ ಪೋಖ್ರಾನ್‌ನಲ್ಲಿ ಅಣುಸ್ಫೋಟನ ನಡೆಸಿದ್ದು ಎಂಬುದು ಸಮಾಜವಾದಿ ತಾತ್ವಿಕತೆಗೆ ಅವರು ನೀಡಿದ ಇನ್ನೊಂದು ವಿಪರ್ಯಾಸಕರ ಆಘಾತ ಎನ್ನಬಹುದು. ನಿಜ, ಅವರು ಜಗತ್ತಿನ ಅತಿ ಎತ್ತರದ ಮತ್ತು ದುರ್ಗಮ ಯುದ್ಧಭೂಮಿ ಎನಿಸಿದ ಸಿಯಾಚಿನ್ ಪ್ರದೇಶಕ್ಕೆ ಅತಿ ಹೆಚ್ಚು ಬಾರಿ–೧೮ ಬಾರಿ–ಭೇಟಿಕೊಟ್ಟ ಸಚಿವರೆನಿಸಿದರು ಮತ್ತು ಪಾಕಿಸ್ತಾನದೊಡನೆಯ ೧೯೯೯ರ ಕಾರ್ಗಿಲ್ ಯುದ್ಧದಲ್ಲಿ ಭಾರತಕ್ಕೆ ಜಯ ದೊರಕಿಸಿಕೊಟ್ಟರು. ಆದರೆ ಅದೇ ವೇಳೆಗೆ, ಸೈನಿಕರ ಶವಪೆಟ್ಟಿಗೆಗಳ ಮತ್ತು ಬರಾಕ್ ಕ್ಷಿಪಣಿಗಳ ಖರೀದಿ ಹಗರಣಗಳು ಅವರನ್ನು ಸುತ್ತಿಕೊಂಡವು. ಇದಕ್ಕೆ ಪೂರಕವಾಗಿ ಅವರ ಸಂಗಾತಿ ಜಯಾ ಜೈಟ್ಲಿ ತೆಹಲ್ಕಾ ಕುಟುಕು ಕಾರ್ಯಾಚರಣೆಯಲ್ಲಿ ಲಂಚ ಸ್ವೀಕಾರ ಆರೋಪಕ್ಕೆ ಸಿಕ್ಕಿ ಹಾಕಿಕೊಂಡರು. ಇದೆಲ್ಲದರಿಂದ ತತ್ತರಿಸಿದ ಫರ್ನಾಂಡೀಸ್ ಕ್ರಮೇಣ ತಮ್ಮ ಆರೋಗ್ಯವನ್ನು ಕಳೆದುಕೊಳ್ಳಲಾರಂಭಿಸಿದರು. ಈ ಎಲ್ಲ ಹಗರಣಗಳಿಂದ ಈಗ ಅವರು ಮುಕ್ತರಾಗಿದ್ದಾರಾದರೂ, ಮರೆವಿನ ಕಾಯಿಲೆಗೆ ತುತ್ತಾಗಿರುವ ಅವರನ್ನು ಅವರ ಜೆಡಿ(ಯು) ಪಕ್ಷ ರಾಜ್ಯ ಸಭೆಯ ಸದಸ್ಯರನ್ನಾಗಿ ಮಾಡಿ ಗೌರವಿಸಿದೆ. ಆದರೆ ಒಂದು ಕಾಲದಲ್ಲಿ ಅವರ ವ್ಯಕ್ತಿತ್ವಕ್ಕಿದ್ದ ಪ್ರಖರತೆ, ಪ್ರಭಾವಳಿ ಇತಿಹಾಸದಲ್ಲಿ ಮರೆಯಾಗಿದೆ.

ಸಮಾಜವಾದಿ ರಾಜಕಾರಣದ ಧೀರತೆ, ಏಳು ಬೀಳು ಮತ್ತು ದುರಂತಮಯತೆಯ ಪ್ರತೀಕದಂತೆ, ೮೫ ವರ್ಷ ವಯಸ್ಸಿನ ಈ ಜಾರ್ಜ್ ಫರ್ನಾಡೀಸ್ ಮತ್ತೆ ತಮ್ಮ ಮೊದಲ ಪತ್ನಿಯ ಆರೈಕೆಯಲ್ಲಿ (ಮತ್ತೆ ಅದೊಂದು ವಿವಾದಾಸ್ಪದವೆನಿಸಿದ ಬೆಳವಣಿಗೆ) ವಿರಮಿಸಿದ್ದಾರೆ.

**–ಡಿ.ಎಸ್. ನಾಗಭೂಷಣ**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೩೧

**–ಇಂದಿರಾ ಬಿ. ಕೃಷ್ಣಪ್ಪ**

### ದಲಿತ ಚಳುವಳಿಯಲ್ಲಿ ಬ್ರಾಹ್ಮಣರ ಹುಡುಗ!

**ಬೆ**ಂಗಳೂರಿನಲ್ಲಿ ಕಳೆದ ತಿಂಗಳು ನಾನು ಗಾಂಧಿಭವನದ ಪಕ್ಕದ ವಲ್ಲಭ ನಿಕೇತನಕ್ಕೆ ಹೋದಾಗ ನನಗೆದುರಾದವರೇ ಮಂಗಳೂರು ವಿಜಯರವರು. ಇವರ ಬಗ್ಗೆಯೂ ನಾನು "ಹೊಸ ಮನುಷ್ಯ ಪತ್ರಿಕೆ"ಗೆ ಬರೆಯಬೇಕೆಂದು ಆಲೋಚಿಸಿಕೊಂಡಿದ್ದ ವಿಚಾರ ಥಟ್ ಅಂತ ಹೊಳೆದೇ ಬಿಟ್ಟಿತು. ಅಲ್ಲೇ ಕೂತು ನಾವು ನಡೆದು ಬಂದ ದಾರಿ, ಮನದಾಳದ ಮಾತುಗಳನ್ನು ಇಬ್ಬರೂ ಹಂಚಿಕೊಳ್ಳತೊಡಗಿದೆವು. ಮಂಗಳೂರು ವಿಜಯರವರು ಚಿತ್ರದುರ್ಗದಿಂದ ಹೊರಟು ಬೆಳಿಗ್ಗೆ ೯.೦೦ ಗಂಟೆಗೆ ಭದ್ರಾವತಿಯ ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದರು.

**ಇಂದಿರಾ :** ನಿಮಗೆ ಕೃಷ್ಣಪ್ಪನವರನ್ನು ನೋಡಬೇಕು ಅಂತ ಯಾಕೆ ಅನ್ನಿಸಿತು?

**ಮಂಗಳೂರು ವಿಜಯ :** ಮಂಜುನಾಥ ಎನ್ನುವವರು *ಕನ್ನಡ ಪ್ರಭ* ಪತ್ರಿಕೆಯಲ್ಲಿ ಅಜ್ಜಂಪುರದ ಜಾತ್ರೆಯಲ್ಲಿ 'ಸಿಡಿ' ಆಡುತ್ತಿರುವ ಅನಿಷ್ಟ ಪದ್ಧತಿ ಬಗ್ಗೆ ಬರೆದಿದ್ದನ್ನು ಓದಿ ಮಾರುತ್ತರ ಬರೆದೆ ಮತ್ತು ಅದರ ಪ್ರತಿಯನ್ನು ಪ್ರೊ. ಕೃಷ್ಣಪ್ಪನವರಿಗೂ ಕಳುಹಿಸಿದೆ. ಕೃಷ್ಣಪ್ಪ ಆಗ ಸಮಾಜವಾದಿ ಯುವಜನ ಸಭಾದಲ್ಲಿದಲ್ಲಿರು. ನಾನು ಚಿತ್ರದುರ್ಗದಲ್ಲಿ ಸಮಾಜವಾದಿ ಯುವಜನ ಸಭಾಕ್ಕೆ ಆಗಲೇ ಸೇರಿದ್ದೆ. ಪೂರ್ಣಚಂದ್ರ ತೇಜಸ್ವಿ, ನಂಜುಂಡಸ್ವಾಮಿಯವರ ಪರಿಚಯ ಸಮಾಜವಾದಿ ಯುವಜನ ಸಭಾದಿಂದ ನನಗಿತ್ತು. ಚಂಪಾ, ಲಂಕೇಶ್ ಮತ್ತೆಲ್ಲರೂ ಅಲ್ಲಿ ಜಾತಿ



ಸವಿತಾ ಅಂಬೇಡ್ಕರ್, ರಾಮದಾಸ್ ಅಠಾವಳೆ, ಬಿ.ಕೃಷ್ಣಪ್ಪ, ಸಿದ್ದಲಿಂಗಯ್ಯ, ಹರವೆ, ಓ.ರಾಜಣ್ಣ, ಕೆ.ರಾಮಯ್ಯ ಮುಂತಾದ ದಲಿತ ಚಳುವಳಿಯ ಅತಿರಥ ಮಹಾರಥರೊಂದಿಗೆ ಕೂತಿರುವವರ ಸಾಲಿನಲ್ಲಿ ಬಲಗಡೆಯಿಂದ ನಾಲ್ಕನೆಯವರು ಮಂಗ್ಳೂರ ವಿಜಯ

ಪದ್ಧತಿ ಸಾಮಾಜಿಕ ಅನಿಷ್ಟ ಪದ್ಧತಿ ವಿರುದ್ಧ ಮಾತನಾಡುತ್ತಿರುವುದು ನನ್ನ ಮನಸ್ಸಿಗೆ ಇಷ್ಟ ಆಗ್ರಾ ಇತ್ತು. ಬೆಂಗಳೂರಿನ ಇದೇ ಗಾಂಧಿಭವನದಲ್ಲಾದ ಸಮಾಜವಾದಿ ಯುವಜನ ಸಭಾ ಕಾರ್ಯಕ್ರಮಕ್ಕೆ ಕೃಷ್ಣಪ್ಪನವರು ದೇವನೂರು

ಮಹಾದೇವರವರು ಬಂದಿದ್ರು. ಅವರ ಭಾಷಣಗಳನ್ನು ಕೇಳಿದ್ದೆ, ಅವರೊಂದಿಗೆ ಮಾತನಾಡಿದೆ. ಹಾಗೆಯೇ ನನ್ನ ಅವರ ಬಾಂಧವ್ಯ ಬೆಳೀತು. ಆದ್ದರಿಂದ ಜಾತ್ರೆಯಲ್ಲಿ 'ಸಿಡಿ' ಆಡೋ ಕಂದಾಚಾರದ ಬಗ್ಗೆ ಕೃಷ್ಣಪ್ಪನವರಿಗೆ ಬರೆಯಬೇಕು ಅನ್ನಿಸಿತು. ನಾನೂ ಅವರಿಗೆ ಬರೆದೆ. ಆವಾಗ ದಸಂಸದ ಆರಂಭದ ಕಾಲ ಕೃಷ್ಣಪ್ಪನವರು, ಅಜ್ಜಂಪುರದ ಸಂಘಟನೆ ಮೂಲಕ ಪೋಲೀಸ್ ಕಂಪ್ಲೇಂಟ್ ಕೊಡಿಸಿಬಿಟ್ಟರು.

**ಇಂದಿರಾ :** ನೀವು ದಲೇಕ ಸಮ್ಮೇಳಕ್ಕೂ ಬಂದ್ದಿದ್ರಲ್ಲಾ ?

**ಮಂ ವಿ :** ಹೌದು ೧೯೭೬ರಲ್ಲಿ ಬಿ.ಕೆಯವರು ನನಗೆ ಪತ್ರ ಬರೆದು, ದಲಿತ ಲೇಖಕರ – ಕಲಾವಿದರ ಸಮ್ಮೇಳನ ಮಾಡ್ತಾ ಇದ್ದೀವಿ. ನೀನು ಬಾ ಅಂತ ತಿಳಿಸಿದ್ರು, ನಾನು ಚಿತ್ರದುರ್ಗದ ನಾಲ್ಕಾರು ಗೆಳೆಯರೊಂದಿಗೆ ಸಮ್ಮೇಳನದಲ್ಲಿ ಭಾಗವಹಿಸಿದೆ. ಆ ಸಂದರ್ಭದಲ್ಲಿ ಅವರು, ಚಿತ್ರದುರ್ಗದಲ್ಲಿ ದಲಿತರ ಕಾಲೋನಿಗೆ ಹೋಗಿ ಜನರನ್ನು ಸೇರಿಸಿ ಮಾತಾಡು ಅಂದ್ರು. ನಾನು ಬರ್ತೀನಿ ಅಂದ್ರು. ಆಗ ಚಿತ್ರದುರ್ಗದಲ್ಲಿ ನಾನು ಶಂಕರ್ ಟಾಕೀಸಿನಲ್ಲಿ ಟಿಕೇಟ್ ಕೋಡೋ ಕೆಲಸ ಮಾಡ್ತಾ ಇದ್ದೆ. ತಿಂಗಳಿಗೆ ೧೬/– ರೂ ಸಂಬಳ. ಎರಡು ವರ್ಷದಿಂದ ನಾನು ಚಿತ್ರದುರ್ಗದಲ್ಲಿದ್ರೂ ನನಗೆ ಕಾಲೋನಿ ಎಲ್ಲಿದೆ ಅಂತ ಗೊತ್ತಿರಲಿಲ್ಲ.

**ಇಂದಿರಾ :** ಮತ್ತೇನು ಮಾಡಿದ್ರಿ ?

**ಮಂ ವಿ :** ಬಿಕೆ ಯವರು ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡ್ತಾ ಇದ್ದ ಒಬ್ಬನ ಹೆಸ್ರು ಹೇಳಿದ್ರು. ಹೆಸರು ನೆನಪಿಲ್ಲ ಅವನನ್ನು ನೋಡು ಅಂದಿದ್ರು. ಅವನನ್ನು ಸಂಪರ್ಕಿಸಿದೆ. ಆತ ಆಸಕ್ತಿ ತೋರಿಸಲಿಲ್ಲ. ನಾನು ಇದ್ದ ರೂಂ ಪಕ್ಕದಲ್ಲಿದ್ದ ಹಾಸ್ಟೆಲ್‌ನಲ್ಲಿ ತಿಪ್ಪೇಸ್ವಾಮಿ ಮತ್ತು ಮಲ್ಲಿಕಾರ್ಜುನ ಅಂತ ಇದ್ರು, ಅವರನ್ನ ಭೇಟಿಮಾಡಿದೆ. ನಾವೆಲ್ಲ ಸೇರಿ ಹಾಸ್ಟೆಲ್ ಹುಡುಗರನ್ನ ಸೇರ್‍ಸಿ ಸಭೆ ಮಾಡಿದ್ವಿ, ಆಗ ಅಲ್ಲಿನ ಕಾಲೇಜು ಪ್ರಿನ್ಸಿಪಾಲರು ಜಿ.ಎಸ್. ಸಿದ್ಧಲಿಂಗಯ್ಯ. ಅವ್ರು ಕಾಲೇಜ್ ಡೇಗೆ ಕೃಷ್ಣಪ್ಪನವರನ್ನ ಕರೆಸಿದ್ರು. ಆ ದಿನ ಹುಡುಗರೆಲ್ಲ ಕೃಷ್ಣಪ್ಪಣ್ಣನವರನ್ನು ಭೇಟಿ ಮಾಡಿದ್ರು. ನಂತರ ಜಯಣ್ಣ, ಸಿ.ಕೆ. ಮಹೇಶ್ ಬಂದು ಸೇರಿದ್ರು. ಹಾಗೆ ಶುರುವಾಯ್ತು ಚಿತ್ರದುರ್ಗದ ದಸಂಸ. ಹಾಗೆ ಕೃಷ್ಣಪ್ಪನವರೊಡನಾಟದೊಂದಿಗೆ ನಾನು ದಸಂಸ ಬಳಗದೊಳಗೆ ಬಂದಿದ್ದೆ. ಸಂಘಟನೆಯ ಹಲವಾರು ವಿಚಾರಗಳನ್ನು ಮತ್ತು ಡಾ. ಅಂಬೇಡ್ಕರ್‌ರವರ ಚಿಂತನೆಗಳನ್ನು ನಾನು ತಿಳ್ಕೋಬೇಕಿತ್ತು. ಅದಕ್ಕೆ ಕೃಷ್ಣಪ್ಪನವರು ಕಾಲೇಜಿಗೆ ಹೊರಡೋದ್ರಲ್ಲಿ ಬಂದು ಮಾತನಾಡಿಸಿ, ನನ್ನ ಸಂಶಯಗಳಿಗೆ ಪ್ರಶ್ನೆಗಳಿಗೆ ಉತ್ತರ ಪಡಕೊಂಡು, ಸಾಯಂಕಾಲದ ಸಿನಿಮಾ ಟಿಕೇಟ್ ಕೋಡೋ ಕೆಲಸಕ್ಕೆ ಹೋಗಿ ಬಿಡ್ತಾ ಇದ್ದೆ.

**ಇಂ :** ನಿಮಗೆ ಸರ್ಕಾರಿ ಕೆಲಸ ಸಿಕ್ಕಿದ ಮೇಲೂ ನೀವು ದಸಂಸ ಕೆಲಸ ಬಿಡಲಿಲ್ಲ. ನಿಮಗೆ ಗುಲ್ಬರ್ಗಾಕ್ಕೆ ನೇಮಕ ಆದಾಗ ಅಲ್ಲಿ ನೀವು ದಸಂಸ ಕಟ್ಟಲು ಬಹಳ ಶ್ರಮವಹಿಸಿದ್ರಿ. ನಿಮ್ಮಿಂದ ಬರ್ತಾ ಇದ್ದ ಪತ್ರಗಳೇ ಅದಕ್ಕೆ ಸಾಕ್ಷಿ ಆಗಿದೆ.

**ಮಂ ವಿ :** ನಂಗೆ ಯುವಜನ ಸೇವಾ ಇಲಾಖೆಯಲ್ಲಿ ಕೆಲಸ ಸಿಕ್ತು, ಗುಲ್ಬರ್ಗಾಕ್ಕೆ ಹಾಕಿದ್ರು. ಕೃಷ್ಣಪ್ಪನವರಿಂದ ಮತ್ತು ಶಿವಾಜಿ ಗಣೇಶನ್‌ರಿಂದ ಅಲ್ಲಿನ ಪಂಚಮ ಬಳಗದ ಮಾಹಿತಿ ಪಡೆದಿದ್ದೆ. ಅಲ್ಲಿ ಅವರನ್ನು ಹುಡುಕಿದೆ. ಅಲ್ಲಿನ ಎಂಐಎಸ್ ಕಾಲೇಜಿಗೆ ಚೆನ್ನಣ್ಣ ವಾಲೀಕಾರ್‌ರವರನ್ನು ಕರೆಸಿದ್ರು. ಬಸವಣ್ಣ ಸಿಂಘೆ ಆಗ ವಿದ್ಯಾರ್ಥಿ ಸಂಘಟನೆಯಲ್ಲಿದ್ದು ಡಿ.ಜಿ. ಸಾಗರ್‌ರ ಪರಿಚಯ ಆಯ್ತು. ಶಿವರಾಂ ಮೋಘಾರವರು ಖಾಸಗಿ ಹಾಸ್ಟೆಲ್ ನಡೆಸ್ತಾ ಇದ್ರು. ಈ ಬ್ರಾಹ್ಮಣರ ಹುಡುಗ ಬಂದು ಇಲ್ಲೇನು ಸಂಘಟನೆ ಮಾಡ್ತಾನೆ ಅಂತ ಸಂಶಯದಿಂದ ನನ್ನನ್ನು ನೋಡಿದ್ದು ಉಂಟು. ಆವಾಗೆಲ್ಲ ನನಗೆ ಕೃಷ್ಣಪ್ಪನವರ ಮಾತುಗಳು ನೆನಪಿಗೆ ಬರ್ತಾ ಇತ್ತು. ಅವುಗಳನ್ನು ಜ್ಞಾಪಿಸಿಕೊಳ್ತಾ ಮುಂದುವರಿತಿದ್ದೆ. ಹುಣಸೇ ಕೋಟೆ ಜಾಥಾ ಆದ ನಂತರ ಗುಲ್ಬರ್ಗಾದವರಿಗೆ, ಸಂಘಟನೆಯ ಶಕ್ತಿ ಎಂತಹುದು ಅಂತ ಮನವರಿಕೆ ಆಯ್ತು. ಸಂಘಟನೆ ಚುರುಕಾಗಿ ಬೆಳೀತು.

ಮಂಗಳೂರು ವಿಜಯ ಅವರ ದಸಂಸ ಸಂಘಟನೆಯ ಸ್ವರೂಪ, ಶಿಸ್ತು, ವರ್ತಮಾನದ ವಿಷಯಗಳಿಗೆ ಸ್ಪಂದನೆ, ಹಣಕಾಸಿನ ವ್ಯವಸ್ಥೆ ಮತ್ತು ಪಂಚಮ ಮುನ್ನೆಡೆ ಇತ್ಯಾದಿ ಹಲವು ಹತ್ತು ವಿಚಾರಗಳನ್ನು ಕುರಿತು ಪತ್ರ ಬರೆಯುತ್ತಲೇ ಇರುತ್ತಿದ್ದರು. ವಿಶ್ವವಿದ್ಯಾನಿಲಯದಲ್ಲಿ ದಲಿತ ನೌಕರರ ಒಕ್ಕೂಟವನ್ನು ಸಂಘಟಿಸಿದ್ದರು. ಸರ್ಕಾರಿ ನೌಕರಿಯಲ್ಲಿದ್ದ ಇವರ ಮೇಲೆ ದೂರು ಅರ್ಜಿಗಳನ್ನು ಪಿತೂರಿಗಾರರು ಸಲ್ಲಿಸಿದ್ದರು. ಈ ವಿಷಯದಲ್ಲಿ ಕಚೇರಿಯಲ್ಲಿ ಎನ್‌ಕ್ವೈರಿಗಳು ಶುರುವಾದವು. ಇದು ಬಹಳವಾಗಿ ಮಾನಸಿಕ ಘಾಸಿ ತಂದ ವಿಚಾರಗಳಾಗಿದ್ದವು. ಈ ವಿಷಯ ಕುರಿತು, ಕೃಷ್ಣಪ್ಪ ವಿಜಯರವರಿಗೆ ಸಾಂತ್ವನದ ಪತ್ರಗಳನ್ನು ಬರೆದಿದ್ದರು. ಪಂಚಮ ನಡೆಸುವಲ್ಲಿ ವಿಜಯರವರು ಲೇಖನ/ವರದಿ ಬರೆಯುತ್ತ, ಹಣಕಾಸಿನ ನೆರವನ್ನು ಒದಗಿಸುತ್ತಾ ಬಂದಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಡಿ.ಜಿ. ಸಾಗರ್, ಬಸವಣ್ಣ ಸಿಂಘೆ, ಮತ್ತು ವಿಜಯರವರ ಸಂಘಟಿತ ಕಾರ್ಯಸೂಚಿಯಿಂದಾಗಿ ಗುಲ್ಬರ್ಗಾ, ರಾಯಚೂರು, ಬೀದರ್‌ನಲ್ಲಿ ದಸಂಸ ನಿರ್ಣಾಯಕ ಸಂಘಟನೆಯಾಗಿ ಬೆಳೆಯಿತು. ಅಫ್‌ಜಲ್ಪುರ ಜಾಥಾದಿಂದಾಗಿ, ಜಿಲ್ಲೆಯಲ್ಲಿ ದಲಿತೇತರರು, ದಲಿತರ ಮೇಲೆ ಹಾಕಿದ್ದ ಬಹಿಷ್ಕಾರದ ಪ್ರಕರಣಗಳು ಇತ್ಯರ್ಥವಾದುವು. ಹಾಗೇ, ಆಗ ಸಚಿವ ವಿಶ್ವನಾಥರೆಡ್ಡಿ ಮುದ್ನಾಳರು ಹಾಸನದಲ್ಲಿ ದಸಂಸದ ನಾಯಕರ ಬಗ್ಗೆ ಆಡಿದ ಅವಮಾನಕರ ಮಾತುಗಳನ್ನು ದಸಂಸದ ಕೇಂದ್ರ ಸಮಿತಿಯ ಗಮನಕ್ಕೆ ತಂದು ಅವರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿ ಜನತಾ ಪಕ್ಷದ ಸರ್ಕಾರಕ್ಕೆ ಇರುಸುಮುರುಸು ಉಂಟು ಮಾಡಲು ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದು ಮಂಗ್ಳೂರ ವಿಜಯ ಅವರೇ.

ದಸಂಸದ ಅಂತರರಾಜ್ಯ ಸಂಪರ್ಕಕ್ಕಾಗಿ ಒರಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ, ಹೈದ್ರಾಬಾದ್‌ಗೆ ಒಂದು ತಂಡವನ್ನು ಕಳುಹಿಸಲಾಗಿತ್ತು. ಆ ತಂಡದಲ್ಲಿ ವೆಂಕಟಸ್ವಾಮಿ, ಎನ್. ವೆಂಕಟೇಶ್, ಶಿವಣ್ಣರೊಂದಿಗೆ ಮಂಗಳೂರು ವಿಜಯರವರು ಇದ್ದರು. ಹಾಗೆ ಹೋದಾಗಲೂ, ಅಲ್ಲಿನ ತಿರುಗಾಟದ ಮಧ್ಯೆಯೂ ವಿಜಯರವರು ಕೃಷ್ಣಪ್ಪನವರಿಗೆ ದಸಂಸದ ಮುಂದಿನ ಕೆಲಸಗಳ ಬಗ್ಗೆ ಪತ್ರ ಬರೆಯುತ್ತಿದ್ದರು. ಅವರು ಪಶ್ಚಿಮ ಬಂಗಾಲದಲ್ಲಿ ನಡೆಸಿದ ಉತ್ರಾಸ್ ರಾಷ್ಟ್ರೀಯ ಸಮಾವೇಶದ ಕೂಲಂಕುಷವಾದ ವಿವರಣೆ ಮತ್ತು ಅವರ ಭಾರತ ಸರ್ಕಾರಕ್ಕೆ ಸಲ್ಲಿಸಿದ ೪೧ ಬೇಡಿಕೆಗಳ ಕಾರ್ಯ ಸೂಚಿಯನ್ನು ವರದಿಯೊಂದಿಗೆ ಸಲ್ಲಿಸಿದ್ದರು. ಅದು *ಪಂಚಮ*ದಲ್ಲಿಯೂ ಪ್ರಕಟವಾಗಿತ್ತು.

ಈ ಸಂದರ್ಭದಲ್ಲಿ ಅವಿವಾಹಿತರಾಗಿದ್ದ ವಿಜಯರವರಲ್ಲಿ ನಾನು ನನ್ನ ಗೆಳತಿಯ ವಿವಾಹದ ಪ್ರಸ್ತಾಪವನ್ನು, ಪತ್ರ ಮುಖೇನ ತಿಳಿಸಿದ್ದೆ. ಅಂದಿನ ಪರಿಸ್ಥಿತಿಯಲ್ಲಿ ಅವರು ವಿವಾಹದ ಬಗ್ಗೆ ಯೋಚಿಸಿರದ ಕಾರಣ ಅದು ಅಲ್ಲಿಗೇ ನಿಂತು ಹೋಯಿತು. ಜೊತೆಗೇ, ಹೊರರಾಜ್ಯಗಳ ಪ್ರವಾಸದಿಂದ ಹಿಂತಿರುಗಿದ ನಂತರ ಅವರಿಗೆ ತುಮಕೂರಿಗೆ ವರ್ಗಾವಣೆ ಆಗಿತ್ತು. ಶಿಕ್ಷೆಯ ವರ್ಗಾವಣೆ ತರಹ ಮಾಡಿದ ಈ ವರ್ಗಾವಣೆಯಿಂದ ಅವರು ಮನನೊಂದಿದ್ದರು. ತುಮಕೂರಿನಲ್ಲಿ ಒಂದು ವರ್ಷ ಕೆಲಸ ಮಾಡುವುದರೊಳಗೆ, ಕೃಷ್ಣಪ್ಪ ಮತ್ತು ಗೆಳೆಯರೊಂದಿಗೆ ಚರ್ಚಿಸಿ, ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ, *ಮುಂಗಾರು* ಪತ್ರಿಕೆಗೆ ಸೇರಿಕೊಂಡರು. ಆ ಪತ್ರಿಕೆ ಕೂಡಾ ಅಲ್ಪಾಯುಷಿಯಾಗಿತ್ತು. ಇದೇ ಸಂದರ್ಭದಲ್ಲಿ ರಾಯಚೂರಿನಲ್ಲಿ, ೧೯೮೫ರಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನವನ್ನು ದೇವಯ್ಯ ಹರವೆಯವರ ವೇದಿಕೆಯಲ್ಲಿ ನಡೆಸಲು ಶ್ರಮ ವಹಿಸಿದರು. ಎರಡು ದಿನಗಳ ಈ ಸಮ್ಮೇಳನದಲ್ಲಿಯೇ ಆಗಿನ ಜಿಲ್ಲಾ ಸಂಚಾಲಕರಾದ ದೇವೇಂದ್ರ ಸಾತ್ವಿಡಿಯವರ ಅಂತರಜಾತೀಯ ಸರಳ ವಿವಾಹವನ್ನು ಮಾಡಲಾಗಿತ್ತು. ಈ ಸಮ್ಮೇಳನ ಉತ್ತರ ಕರ್ನಾಟಕದ ಭಾಗದಲ್ಲಿ ದಸಂಸ ಭದ್ರ ಬೇರೂರುವಿಕೆಗೆ ತಳಹದಿಯಾಗಿತ್ತು.

ಕೆಲಸ ಬಿಟ್ಟಿದ್ದ ಮಂಗಳೂರು ವಿಜಯರವರು ಇಂದೂಧರ ಹೊನ್ನಾಪುರರವರು ನಡೆಸಲಾರಂಭಿಸಿದ *ಸುದ್ದಿ ಸಂಗಾತಿ* ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸತೊಡಗಿದರು. ಈ ಕಾರಣಗಳಿಂದಲೂ ಮತ್ತಿತರ ಕಾರಣಗಳಿಂದ *ಪಂಚಮ* ಪತ್ರಿಕೆಗೆ ನಡೆಸುವುದೇ ದುಸ್ತರವಾದ ಸ್ಥಿತಿ ಬಂತು. ತೀವ್ರತರವಾದ ಆಂತರಿಕ ಶಿಸ್ತಿನ ಪ್ರಶ್ನೆಯ ಫಲವಾಗಿ ದಸಂಸದಿಂದ ಹಲವಾರು ಪದಾಧಿಕಾರಿಗಳನ್ನು ಉಚ್ಚಾಟಿಸಿದ ಪಟ್ಟಿಯಲ್ಲಿ ವಿಜಯರವರ ಹೆಸರೂ ಇತ್ತು. ಆದರೆ, ವಿಜಯರವರ ಲೇಖನಿ ಈ ಎಲ್ಲಾ ಸಂಕಷ್ಟಗಳ ಮಧ್ಯೆ ಎಂದೂ ನಿಂತಿರಲಿಲ್ಲ. ಈ ಮಧ್ಯೆ 'ಸುದ್ದಿ ಸಂಗಾತಿ'ಯೂ ಸ್ಥಗಿತಗೊಂಡಿದ್ದರಿಂದಾಗಿ ಆ ದಿನಗಳಲ್ಲಿ ವಿಜಯರವರು ಕುಟುಂಬದ ನಿರ್ವಹಣೆ ಕಷ್ಟವಾದಂಥ ಸಂದರ್ಭದಲ್ಲಿ ಈ ಹಿಂದೆ ಸರ್ಕಾರಿ ಕೆಲಸಕ್ಕೆ ಸಲ್ಲಿಸಿದ್ದ ರಾಜೀನಾಮೆ ಪತ್ರವನ್ನು ಹಿಂತೆಗೆದುಕೊಳ್ಳಲು ಸಾಧ್ಯವಾದದ್ದರ ಫಲವಾಗಿ ಅವರು ಸುಮಾರು ೬ ವರ್ಷಗಳ ನಂತರ ಮತ್ತೆ ಕೆಲಸಕ್ಕೆ ಹಾಜರಾಗಿ ೨೦೧೪ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸಿದರು.

ಈ ಜಂಜಾಟದಲ್ಲಿಯೂ ಅವರು ಧನಂಜಯ ಖೀರ್ ಇಂಗ್ಲೀಷ್‌ನಲ್ಲಿ ಬರೆದ ಡಾ. ಅಂಬೇಡ್ಕರ್‌ರವರ ಜೀವನ ಸಾಧನೆಯ ಗ್ರಂಥವನ್ನು 'ಸಂಘರ್ಷ' ಎಂಬ ಹೆಸರಲ್ಲಿ ಕನ್ನಡಾನುವಾದ ಮಾಡಿದ್ದರು ಮತ್ತು ಈ ಗ್ರಂಥವನ್ನು 'ಕರ್ನಾಟಕದ ದಲಿತ ಚಳುವಳಿಯ ಅಪೂರ್ವ ಚೈತನ್ಯವಾಗಿದ್ದ ಪ್ರೊ. ಬಿ. ಕೃಷ್ಣಪ್ಪ ಅವರಿಗೆ' ಎಂದು ಅರ್ಪಣೆ ಮಾಡಿದ್ದರು. ಇದನ್ನು ಬಿಡುಗಡೆ ಮಾಡಿದಂದು (ದಿ. ೧೮.೧೨.೨೦೦೨) ಅದರ ಪ್ರಥಮ ಪ್ರತಿಯನ್ನು ಸಮಾರಂಭದಲ್ಲಿ ನನಗೆ ಕೊಟ್ಟಿದ್ದರು. ಸಮಾರಂಭದಲ್ಲಿ ವಿಜಯರವರು ಅಂಬೇಡ್ಕರ್ ಮತ್ತು ಕೃಷ್ಣಪ್ಪನವರ ಬಗ್ಗೆ ಮಾತನಾಡುತ್ತಾ ಭಾವುಕರಾಗಿ, ಕಣ್ಣೀರು ಹರಿಸಿದ್ದರು. ಇಂತಹ ಕಾರ್ಯಕರ್ತರು ಮತ್ತು ಪದಾಧಿಕಾರಿಗಳಿಂದಲೇ ದಸಂಸ ಕರುಳ ಬಳ್ಳಿಯ ಸಂಘಟನೆಯಾಗಿ ಕಟ್ಟಲು ಕೃಷ್ಣಪ್ಪನವರಿಗೆ ಸಾಧ್ಯವಾಯಿತೆಂದೇ ಭಾವಿಸಿದ್ದೇನೆ.

**(ಮುಂದುವರೆಯುವುದು)**

# ರಾಷ್ಟ್ರೀಯ ಆರೋಗ್ಯ ನೀತಿ: ಒಂದು ನೋಟ

-ಡಾ. ಸುಶಿ ಕಾಡನಕುಪ್ಪೆ



೨೦೧೫ನೇ ವರ್ಷದ ರಾಷ್ಟ್ರೀಯ ಆರೋಗ್ಯ ನೀತಿ ಕರಡು ಪ್ರತಿಯನ್ನು ಕೇಂದ್ರ ಸರ್ಕಾರ ಸಾರ್ವಜನಿಕರ ಅವಗಾಹನೆಗೆ ಬಿಡುಗಡೆ ಮಾಡಿದೆ. ದೇಶಕ್ಕೆ ಮೊದಲ ಬಾರಿಗೆ ರಾಷ್ಟ್ರೀಯ ಆರೋಗ್ಯ ನೀತಿಯು ೧೯೮೩ರಲ್ಲಿ ಘೋಷಿಸಲಾಗಿತ್ತು. ಅದನ್ನು ೨೦೦೨ರಲ್ಲಿ ಪರಿಷ್ಕರಿಸಲಾಯಿತು. ಅದಾದ ಸುಮಾರು ಹತ್ತು ವರ್ಷಗಳ ಬಳಿಕ ಎನ್‌ಡಿಎ ಸರ್ಕಾರವು ಹೊಸ ರಾಷ್ಟ್ರೀಯ ಆರೋಗ್ಯ ನೀತಿಯನ್ನು ಜಾರಿಗೆ ತರಲು ಮುಂದಾಗಿದೆ. ಯಾವುದೇ ದೇಶದ ರಾಷ್ಟ್ರೀಯ ಆರೋಗ್ಯ ನೀತಿಯ ಮುಖ್ಯ ಉದ್ದೇಶ ದೇಶದ ಪ್ರಜೆಗಳ ಆರೋಗ್ಯ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದೇ ಆಗಿದೆ. ಆರೋಗ್ಯವು ಅತಿಮುಖ್ಯವಾದ ಮಾನವ ಹಕ್ಕುಗಳಲ್ಲಿ ಒಂದಾಗಿದೆ. ಇದನ್ನು ದೊರಕಿಸಿಕೊಡುವ ಜವಾಬ್ದಾರಿಯು ಆ ದೇಶದ ಸರ್ಕಾರಕ್ಕಿರುತ್ತದೆ. ಆದರೆ ಆರೋಗ್ಯವೆಂಬುದು ಒಂದು ರಾಜಕೀಯ ವಿಷಯವಾಗಿ ಚರ್ಚೆಗೆ ಒಳಪಟ್ಟಿರುವ ಸಂದರ್ಭಗಳು ನಮ್ಮ ದೇಶದಲ್ಲಿ ವಿರಳ. *ಒಬಾಮ ಕೇರ್* ಎಂದೇ ಪ್ರಸಿದ್ಧವಾದ ಜನರ ಕೈಗೆಟುಕುವ ಆರೋಗ್ಯ ಸೇವೆ ಕಾಯಿದೆಯು ಅಮೇರಿಕಾ ಸಂಯುಕ್ತ ಸಂಸ್ಥಾನದ ರಾಜಕೀಯ ತಿರುವುಗಳಲ್ಲಿ ಮತ್ತು ಅಧ್ಯಕ್ಷೀಯ ಚುನಾವಣೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದನ್ನು ನಾವು ಗಮನಿಸಬಹುದು. ಆರೋಗ್ಯಕ್ಕೆ ಇಷ್ಟು ಪ್ರಮಾಣದ ಪ್ರಾಮುಖ್ಯತೆ ನಮ್ಮ ದೇಶದಲ್ಲಿ ಸಿಗಬಹುದೇ? ಏಕೆಂದರೆ, ಸಾಮಾಜಿಕ ಆರೋಗ್ಯವನ್ನು ಕೂಡ ಒಂದು ರಾಜಕೀಯ ಇಚ್ಛಾ ಶಕ್ತಿಯಾಗಿ ಇಟ್ಟುಕೊಂಡ ರಾಜಕಾರಣಿಗಳನ್ನಂತೂ ನಾವು ಇಂದಿನ ದಿನಗಳಲ್ಲಿ ನೋಡಿಲ್ಲ.

ನಮ್ಮ ದೇಶದ ಆರೋಗ್ಯ ವ್ಯವಸ್ಥೆಯಲ್ಲಿ ಖಾಸಗಿ ಆರೋಗ್ಯ ಜಾಲವು ಶೇಕಡ ೮೦ ರಷ್ಟು ಹೊರರೋಗಿಗಳಿಗೆ ಮತ್ತು ಶೇಕಡ ೬೦ ರಷ್ಟು ಒಳರೋಗಿಗಳಿಗೆ ಸೇವೆ ನೀಡುತ್ತಿದೆ. ಇದು ಸರ್ಕಾರ ಪ್ರಕಟಿಸಿರುವ ರಾಷ್ಟ್ರೀಯ ಆರೋಗ್ಯ ನೀತಿಯ ಕರಡು ಪ್ರತಿಯಲ್ಲಿರುವ ಅಂಕಿ ಅಂಶ. ಇದರರ್ಥ ಸರ್ಕಾರದ ಆರೋಗ್ಯ ವ್ಯವಸ್ಥೆ ಶೇಕಡ ೨೦ ಕ್ಕಿಂತ ಕಡಿಮೆ ವ್ಯಾಪ್ತಿಯಲ್ಲಿ ತನ್ನ ಸೇವೆಗಳನ್ನು ಜನರಿಗೆ ಒದಗಿಸುತ್ತಿದೆ. ಅಂದರೆ, ಸರ್ಕಾರ ಮೇಲುಗೈ ಸಾಧಿಸಲು ಸಾಧ್ಯವೇ ಇಲ್ಲವೆಂಬಂತಹ ಪರಿಸ್ಥಿತಿ ಇದು. ಇರುವ ಸರ್ಕಾರಿ ಆರೋಗ್ಯ ಸೇವೆ ಮುಖ್ಯವಾಗಿ ಹಳ್ಳಿಗಾಡು, ಗುಡ್ಡಗಾಡು ಮತ್ತು ಆದಿವಾಸಿ ಜನರ ಆರೋಗ್ಯ ಸುಧಾರಣೆಗಾಗಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕವಷ್ಟೇ ಕಾರ್ಯನಿರ್ವಹಿಸುತ್ತಿದೆ ಎನ್ನಬಹುದು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ನಮ್ಮ ಇಡೀ ದೇಶದ ಆರೋಗ್ಯ ಸೂಚ್ಯಾಂಶಗಳನ್ನು ಸುಧಾರಿಸಲು ಮುಖ್ಯ ಪಾತ್ರವಹಿಸುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆಯ ಅಡಿಯಲ್ಲಿ ೧೯೭೮ರಲ್ಲಿ ಇತರ ದೇಶಗಳೊಡನೆ ಭಾರತವು ಪ್ರಾಥಮಿಕ ಆರೋಗ್ಯ ಸೇವೆಯನ್ನು ಜಾರಿಗೆ ತರಲು ತೆಗೆದುಕೊಂಡ ನಿರ್ಧಾರದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಯಿತು. ವಿಶ್ವ ಸಂಸ್ಥೆಗಿಂತ ಮುಂಚೆಯೇ, ಈ ರೀತಿಯ ವ್ಯವಸ್ಥೆಯನ್ನು ದೇಶದೆಲ್ಲೆಡೆ ಜಾರಿಗೆ ತರಲು ಭಾರತದ ಭೋರ್ ಸಮಿತಿಯು ೧೯೪೬ರಲ್ಲಿ ಸಲಹೆ ನೀಡಿತ್ತು. ಆದರೆ ವಿಷಾದದ ಸಂಗತಿ ಎಂದರೆ, ಸರ್ಕಾರವು ದೇಶಕ್ಕೆ ಒಂದು ರಾಷ್ಟ್ರೀಯ ಆರೋಗ್ಯ ನೀತಿಯನ್ನು ಜಾರಿ ತಂದದ್ದು ೧೯೮೩ರಲ್ಲಿ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸೇವೆಯಿಂದಲೇ ದೇಶದ ಪ್ರಮುಖ ಆರೋಗ್ಯ ಸೂಚಕಗಳಾದ ತಾಯಿ ಮತ್ತು ಮಕ್ಕಳ ಸಾವಿನ ಮಿತಿ, ವಿಶ್ವ ಪರಿಮಿತಿಯಷ್ಟಲ್ಲದಿದ್ದರೂ ಗಣನೀಯವಾಗಿ ಕಡಿಮೆಯಾಗಿದ್ದನ್ನು ನಾವು ಗಮನಿಸಬಹುದು. ಆದರೆ ಶ್ರೀಲಂಕಾ ದೇಶಕ್ಕೆ ಹೋಲಿಸಿದರೆ ಈಗಲೂ ನಮ್ಮ ದೇಶದ ಆರೋಗ್ಯ ಸೂಚಕಗಳು ಶೋಚನೀಯ ಸ್ಥಿತಿಯಲ್ಲಿವೆ. ಇದಕ್ಕೆ ಬಹು ಮುಖ್ಯ ಕಾರಣ ಸರ್ಕಾರ ಆರೋಗ್ಯದ ಆಯವ್ಯಯಕ್ಕೆ ಮೀಸಲಿಟ್ಟಿರುವ ಅತಿ ಕಡಿಮೆ ಅನುದಾನ. ಒಟ್ಟು ರಾಷ್ಟ್ರೀಯ ಉತ್ಪಾದನೆಯ ಶೇಕಡ ೧.೦೪ ರಷ್ಟು ಮಾತ್ರ ಆರೋಗ್ಯಕ್ಕಾಗಿ ಮೀಸಲಿಡಲಾಗಿದೆ. ಇದು ದೇಶದ ಆರೋಗ್ಯ ವೆಚ್ಚದ ಶೇಕಡ ૩೦ ಕ್ಕಿಂತ ಕಡಿಮೆಯಾಗಿದ್ದು ಆರೋಗ್ಯವು ಖಾಸಗೀ ಆರೋಗ್ಯ ವಲಯದ ಪಾಲಾಗಿದೆ.



ಒಂದು ಸಂಸಾರ ಬಡತನಕ್ಕೆ ಜಾರಲು ಆಸ್ಪತ್ರೆಯ ಖರ್ಚು ಬಹು ಮುಖ್ಯ ಕಾರಣವಾಗಿದೆಯೆಂಬ ಅಂಶವನ್ನು ಸರ್ಕಾರ ತನ್ನ ಆರೋಗ್ಯ ನೀತಿಯ ಕರಡಿನಲ್ಲಿ ಒಪ್ಪಿಕೊಂಡಿದೆ. ಇದಕ್ಕೆ ಮುಖ್ಯ ಕಾರಣ ಆರೋಗ್ಯ ಸಮಸ್ಯೆಗಳಿಗೆ ಸಾರ್ವಜನಿಕರು ಖಾಸಗೀ ಆಸ್ಪತ್ರೆಗಳಿಗೆ ವ್ಯಯಿಸಬೇಕಾದ ಮೊತ್ತ. ವಿಮೆ ಆಧಾರಿತ ಆರೋಗ್ಯ ಸೇವೆಗಳ(ಉದಾ. ಯಶಸ್ವಿನಿ) ಮೇಲೆ ಹೂಡಲಾಗಿರುವ ಸರ್ಕಾರದ ಹಣವು ಖಾಸಗಿ ಆಸ್ಪತ್ರೆಗಳ ಬೊಕ್ಕಸಕ್ಕೆ ಸೇರುತ್ತಿದೆ. ಇದನ್ನೇ ಮುಂದುವರೆಸುವ ಮತ್ತು ಇನ್ನಷ್ಟು ವಿಮೆ ಆಧಾರಿತ ಸೇವೆಗಳನ್ನು ಸೃಷ್ಟಿಸುವ ಯೋಜನೆಗಳನ್ನು ಈಗಿನ ಎನ್‌ಡಿಎ ಸರ್ಕಾರದ ಕರಡು ಹೇಳುತ್ತಿದೆ. ಈ ವಿಮೆ ಆಧಾರಿತ ಸೇವೆಗಳನ್ನು ಬಡವರಲ್ಲದವರಿಗೂ ವಿಸ್ತರಿಸುವ ಪ್ರಸ್ತಾಪವಿದೆ. ಹಾಗೆಯೇ ಖಾಸಗಿ ಆರೋಗ್ಯ ವಲಯವು ೪೦ ಶತಕೋಟಿ ಡಾಲರ್‌ನಷ್ಟು ಬೆಲೆಯುಳ್ಳದ್ದಾಗಿದ್ದು ಇದು ೨೦೨೦ರ ವೇಳೆಗೆ ೨೮೦ ಶತಕೋಟಿ ಡಾಲರ್ ತಲುಪುವುದಾಗಿ ಹೇಳುವ ಈ ಆರೋಗ್ಯ ನೀತಿ ಕರಡು ಈ ಖಾಸಗಿ ವಲಯವನ್ನು ಮತ್ತಷ್ಟು ಪ್ರೋತ್ಸಾಹಿಸುವ ಮಾತಾಡಿದೆ. ಖಾಸಗಿ ಆರೋಗ್ಯ ವಲಯವು ಅತಿ ಹೆಚ್ಚು ವರಮಾನ ತರುವ ವಲಯವೆಂದು ಕೊಂಡಾಡುವ ಕರಡು, ಇದಕ್ಕೆ ಮತ್ತಷ್ಟು ಪುಷ್ಟಿ ನೀಡಲು ಮತ್ತು ಅದರಿಂದ ವಿದೇಶಿ ಆರೋಗ್ಯ ವಹಿವಾಟನ್ನು ಹೆಚ್ಚಿಸಲು ಉತ್ಸುಕವಾಗಿದೆ. ಖಾಸಗೀ ಆಸ್ಪತ್ರೆಗಳಿಗೆ ಸಾರ್ವಜನಿಕ ಸ್ವಾಧೀನ ಕಾಯಿದೆ ಅಡಿಯಲ್ಲಿ ರಿಯಾಯಿತಿಯಲ್ಲಿ ಜಾಗವನ್ನು ಕೊಡುವ, ರಿಯಾಯಿತಿ ದರದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಬೇಕಾಗುವ ಮೂಲಸೌಲಭ್ಯ ಇತ್ಯಾದಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಆಶಯ ವ್ಯಕ್ತ ಪಡಿಸಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶಿಕ್ಷಣ ಪಡೆದ ಬಹುಪಾಲು ಮಂದಿ ವೈದ್ಯರು ಮತ್ತು ಶುಶ್ರೂಷಾ ಪರಿಣಿತರು ಖಾಸಗೀ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವುದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಶಿಕ್ಷಣ ಪಡೆಯುತ್ತಿರುವವರಿಗೆ ರಿಯಾಯಿತಿ ಆಧಾರಿತ ಶಿಕ್ಷಣವನ್ನು ಒದಗಿಸುವುದಾಗಿ ಈ ಕರಡು ಹೇಳಿದೆ. ಇದರಿಂದ ಸರ್ಕಾರವು ಪರಿಣಿತರನ್ನು ಸೃಷ್ಟಿಸಿ ಅವರ ಸೇವೆಯನ್ನು ಖಾಸಗೀ ವಲಯಕ್ಕೆ ಒದಗಿಸುವ ಈ ನಿಲುವು ಸ್ವಲ್ಪವೂ ಜವಾಬ್ದಾರಿಯಿಲ್ಲದ್ದಾಗಿದೆ. ಬಡತನವೇ ಆರೋಗ್ಯ ಸಮಸ್ಯೆಗಳಿಗೆ ಮೂಲ ಕಾರಣವೆಂಬುದು ಈಗಾಗಲೇ ಸಂಶೋಧನೆಗಳಿಂದ ಸಾಬೀತಾಗಿದೆ. ಹೀಗಿದ್ದರೂ ತನ್ನ ಆರೋಗ್ಯ ನೀತಿಯಲ್ಲಿ ಈಗಾಗಲೇ ಸಮುದಾಯ ಆರೋಗ್ಯ ಸೇವೆಗಳಿಗೆ ಮೀಸಲಿಟ್ಟಿದ್ದ ૩೦.೫% ಹಣದಲ್ಲಿ ಮತ್ತಷ್ಟು ಕಡಿತ ಮಾಡುವ ಮತ್ತು ಖಾಸಗೀ ಆರೋಗ್ಯ ವಲಯಕ್ಕೆ ಎಲ್ಲಾ ರೀತಿಯ ಸಹಕಾರ ತೋರುವ ಸರ್ಕಾರದ ಧೋರಣೆ ವಿಷಾದನೀಯವೇ ಆಗಿದೆ.

ಆರೋಗ್ಯ ವಿಜ್ಞಾನಗಳಲ್ಲಿ ಪರಿಣಿತಿಯನ್ನು ದೊರಕಿಸಿಕೊಂಡ ವೈದ್ಯರು, ನರ್ಸ್‌ಗಳು ಮತ್ತು ದಂತ ವೈದ್ಯರಿಗೆ ಹಳ್ಳಿಗಳಲ್ಲಿ ಸೇವೆ ಸಲ್ಲಿಸಲು ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಗೊಳಿಸುವುದರ ಬಗ್ಗೆ ಎಲ್ಲಿಯೂ ಯೋಜನೆಗಳನ್ನು ಹೇಳಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಾತಂತ್ರ್ಯ ಬಂದಾಗಿನಿಂದ ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ವಹಿಸಿರುವ ಗಮನಾರ್ಹ ಪಾತ್ರವನ್ನು ಈ ಆರೋಗ್ಯ ಕರಡು ಗುರುತಿಸುತ್ತದೆ. ಆದರೆ ಈ ಕೇಂದ್ರಗಳಲ್ಲಿರುವ ಹಲವು ಸಮಸ್ಯೆಗಳನ್ನು ಗುರುತಿಸದೆ ಕೇವಲ ಖಾಸಗಿ ವಲಯದ ಯಶಸ್ಸನ್ನು ಹೊಗಳುವ ಕೆಲಸ ಮಾಡಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೇವಲ ವೈದ್ಯರಿಂದ ನಿರ್ವಹಿಸಲು ಸಾಧ್ಯವಿಲ್ಲವೆಂದು ಹೇಳುತ್ತಾ ಈ ಸರ್ಕಾರವು ಹಳ್ಳಿ, ಗುಡ್ಡಗಾಡು ಪ್ರದೇಶಗಳಲ್ಲಿ, ಅಲ್ಲಿಯ ಪ್ರಾಚೀನ ವೈದ್ಯ ಸಂಸ್ಕೃತಿಯನ್ನು ಗುರುತಿಸಿ ಬೆಳಸುವ ಯೋಜನೆಗಳನ್ನು ರಾಷ್ಟ್ರೀಯ ಆರೋಗ್ಯ ನೀತಿಯ ತನ್ನ ಕರಡಿನುದ್ದಕ್ಕೂ ಸಾರುತ್ತಾ ಬಂದಿದೆ. ಬಡವರು ಅತಿ ಹೆಚ್ಚು ಸಂಖ್ಯೆಯಲ್ಲಿ ಬದುಕುತ್ತಿರುವ ಹಳ್ಳಿಗಳಲ್ಲಿ ವೈದ್ಯರ ಸೇವೆಯನ್ನು

ಮೊಟಕುಗೊಳಿಸಿ, ಅಲ್ಲಿಗೆ ಈ 'ಆಯುಷ್' ಪರಿಣಿತರನ್ನು ಕರೆ ತರುವ ಬಗ್ಗೆ ಕರಡಿನುದ್ದಕ್ಕೂ ಹೇಳಿದೆ. ಅಂದರೆ. ಆಯುಷ್ ಪದ್ದತಿಯಂತೆ ಆಯಾ ಪ್ರದೇಶದ ಪ್ರಾಚೀನ ಬುಡಕಟ್ಟು ಸಂಸ್ಕೃತಿ ಉಪಯೋಗಿಸುವ ಸಂಶೋಧನಾ ರಹಿತ, ಪುರಾವೆಗಳಿಲ್ಲದ ಚಿಕಿತ್ಸೆಗಳನ್ನು ಪ್ರೋತ್ಸಾಹಿಸುವ ಮಾತುಗಳನ್ನಾಡಲಾಗುತ್ತಿದೆ. ಅಮೇರಿಕಾದಂತ ಮುಂದುವರಿದ ದೇಶಗಳಲ್ಲೂ ಇಂತಹ ಪುರಾವೆಗಳೇ ಇಲ್ಲದಂತಹ ವೈದ್ಯ ಚಟುವಟಿಕೆಗಳು ಇರುವುದನ್ನು ನಾವು ಕಾಣಬಹುದು. ಇಂತಹ ಅವೈಜ್ಞಾನಿಕ ಪದ್ಧತಿಗಳನ್ನು ಆಧುನಿಕ ವೈದ್ಯ ಪದ್ಧತಿಯಿಂದ ತೆಗೆದು ಹಾಕುವಂತೆ ಅಲ್ಲಿಯ ವೈದ್ಯ ಮಂಡಳಿಗಳು ಕಾನೂನಿನ ಸಮರ ನಡೆಸಿ ತಕ್ಕ ಮಟ್ಟಿಗೆ ಯಶಸ್ವಿಯಾಗಿವೆ. ಜಾನ್ ಹಾಪ್ಕಿನ್ಸ್ ನಂತಹ ಪ್ರಸಿದ್ಧ ವಿಶ್ವವಿದ್ಯಾನಿಲಯವು ಅರ್ಬುದ ರೋಗದ ವಿರುದ್ಧದ ಆಯುರ್ವೇದದ ಚಿಕಿತ್ಸಾ ಕ್ರಮಗಳನ್ನು ಹಲವಾರು ವರ್ಷಗಳ ಸಂಶೋಧನೆಗೆ ಒಳಪಡಿಸಿದಾಗ ಯಾವುದೇ ಪುರಾವೆ ದೊರಕಲಿಲ್ಲ. ಇಂತಹ ಚಿಕಿತ್ಸಾ ಕ್ರಮಗಳನ್ನು ಜನರನ್ನು ಮೋಸ ಮಾಡುವ ಅಪವಿಜ್ಞಾನ ಎಂದು ಪ್ರಪಂಚದ ವೈದ್ಯ ಲೋಕವು ಪುರಾವೆಗಳ ಮೂಲಕ ತಿರಸ್ಕರಿಸಿರುವ ಸಮಯದಲ್ಲಿ ನಮ್ಮ ದೇಶದ ಆರೋಗ್ಯ ನೀತಿಯು ಪುರಾವೆಗಳೇ ಇಲ್ಲದ ಆಯುಷ್ ಪದ್ದತಿಗಳನ್ನು ದೇಶಾದ್ಯಂತ ಬಡವರಿಗೆ ಚಿಕಿತ್ಸೆ ಕೊಡುವ ಮಾದರಿಯನ್ನಾಗಿ ರೂಪಿಸಲು ಹೊರಟಿದೆ. ಆಯುಷ್ ಪದ್ದತಿಯನ್ನು ಇಡೀ ವಿಶ್ವಕ್ಕೆ ಸಾಧಿಸಿ ತೋರಿಸುವ ಕೆಲಸವಾಗಬೇಕಿದೆ ಎಂದು ಕರಡಿನಲ್ಲಿ ಘೋಷಿಸಲಾಗಿದೆ. ಆದರೆ ಇದು ಬಡವರಿಗೆ ಮಾತ್ರ ದೊರಕುವ ಹಾಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮೀಸಲಿಟ್ಟಿರುವ ಗುಟ್ಟೇನು? ಬಡವರಿಗೆ ಆಧುನಿಕ ವೈದ್ಯಕೀಯ ಚಿಕಿತ್ಸಾ ಕ್ರಮಗಳು ದೊರಕದಿದ್ದರೂ ಪರವಾಗಿಲ್ಲ; ಆ ಜಾಗವನ್ನು ಆಯುಷ್ ತುಂಬುವಂತೆ ಯೋಜನೆಗಳನ್ನು ಹಾಕಲಾಗಿದೆ. ಈಗಾಗಲೇ ಖಾಲಿ ಇರುವ ವೈದ್ಯ, ದಂತ ವೈದ್ಯ, ಅರೆವೈದ್ಯ ಹುದ್ದೆಗಳನ್ನು ತುಂಬುವ ಮಾತನಾಡದೆ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಆಯುಷ್ ಪರಿಣಿತರಿಗೆ ಕೆಲಸ ಕೊಡುವ ಯೋಜನೆಗಳನ್ನು ನಿರೂಪಿಸಲಾಗಿದೆ. ಇದರಿಂದ ಸರ್ಕಾರ ಬಡವರಿಗೆ ಕೊಡುವ ವೈದ್ಯಕೀಯ ಸೇವೆ ಕೇವಲ ಆಯುಷ್‌ಗೆ ಸೀಮಿತವಾಗುವ ಸಾಧ್ಯತೆಯಿದೆ. ಬಡವರು ಅನಾರೋಗ್ಯದಿಂದ ಬಳಲುವಾಗ ಆಯುಷ್ ಯಾವುದೇ ರೀತಿಯಿಂದಲೂ ಸಹಕಾರಿಯಾಗಲಾರದು. ಅನಾರೋಗ್ಯ ಮತ್ತಷ್ಟು ಉಲ್ಬಣಿಸುತ್ತದೆಯಷ್ಟೆ ಉಲ್ಬಣಗೊಂಡ ತೀವ್ರತರ ರೋಗಗಳಿಂದ ಮುಕ್ತಿ ಪಡೆಯಲು ಬಡವರು ದುಡ್ಡು ಕೊಟ್ಟು ಖಾಸಗೀ ಆಸ್ಪತ್ರೆಗಳಿಗೆ ಹೋಗಬೇಕು ಎನ್ನುವ ಪರಿಸ್ಥಿತಿ ಸೃಷ್ಟಿ ಮಾಡುವ ಅಪಾಯ ಈ ಆರೋಗ್ಯ ನೀತಿಯಲ್ಲಿದೆ.

ಇದರ ಜೊತೆಗೆ ಕರ್ನಾಟಕ ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗೀಕರಣಗೊಳಿಸುವ ಯೋಚನೆ ಮಾಡುತ್ತಿರುವುದು ಇನ್ನೂ ಗಾಬರಿ ಹುಟ್ಟಿಸುವ ಸಂಗತಿಯಾಗಿದೆ. ಪ್ರಜೆಗಳಿಗೆ ಆರೋಗ್ಯವನ್ನು ನೀಡುವುದು ಸರ್ಕಾರದ ಮಹತ್ತರವಾದ ಜವಾಬ್ದಾರಿ. ಆದರೆ ತನ್ನ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗಳಿಗೆ ರವಾನೆ ಮಾಡುವ ಸರ್ಕಾರದ ಹೇಡಿತನ, ಸ್ವಾರ್ಥಭರಿತ ಹೆಜ್ಜೆಗಳು ನಮ್ಮನ್ನು ಇನ್ನೂ ಕುಸಿಯುವಂತೆ ಮಾಡಿವೆ. ಗ್ರಾಮಗಳ ಸ್ವರಾಜ್ಯ ಕಲ್ಪನೆಯಿಂದ ಸೃಷ್ಟಿಯಾದ ಗ್ರಾಮಪಂಚಾಯತಿಗಳು ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೆರವಾಗಬಲ್ಲವು. ಸರ್ಕಾರ ಗ್ರಾಮಪಂಚಾಯತಿಗಳನ್ನು ಬಲಪಡಿಸುವ ಯಾವ ಕ್ರಮಗಳನ್ನೂ ಪ್ರಕಟಿಸಿಲ್ಲ. ಖಾಸಗೀ ಸಂಸ್ಥೆಗಳ ಬೊಕ್ಕಸವನ್ನು ತುಂಬಲು ಈಗ ಬಡವರನ್ನೂ ಬಿಡದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಖಾಸಗೀಕರಣ ನೀತಿಯನ್ನು ವಿಸ್ತರಿಸಿರುವ ಯೋಚನೆ ಯಾವ ರಾಜಕಾರಣಿಗೂ ಆರೋಗ್ಯದ ವಿಷಯದಲ್ಲಿ ರಾಜಕೀಯ ಇಚ್ಛಾಶಕ್ತಿಯಿಲ್ಲವೆಂಬುದನ್ನು ಮತ್ತೆ ಸಾಬೀತು ಪಡಿಸಿದೆ. ವಿರೋಧ ಪಕ್ಷದವರೂ ಇದರ ಬಗ್ಗೆ ಚಕಾರ ಎತ್ತದಿರುವುದು ಆಶ್ಚರ್ಯ.

**(ಲೇಖಕಿ ಸುಶಿ ಅವರು ಬೆಂಗಳೂರಿನ ಖಾಸಗಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯೊಂದರ ಸಮೂಹ ದಂತವೈದ್ಯಕೀಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿದ್ದಾರಲ್ಲದೆ, ತಮಿಳ್ನಾಡಿನಲ್ಲಿನ ರಾಜೀವ್‌ಗಾಂಧಿ ಯುವಜನ ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆಯಲ್ಲಿ ಜೀವನ ಕೌಶಲ್ಯಗಳ ಬಗೆಗಿನ ಸಲಹಾಕಾರರೂ ಆಗಿದ್ದಾರೆ)**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮುದುಕರು *ಹಿಂದೂ* ಪತ್ರಿಕೆಯನ್ನು ತಲೆಯಿಂದ ಬುಡದವರೆಗೆ ಓದುವಂತೆ ನಾನೂ 'ಹೊಸ ಮನುಷ್ಯ' ಪತ್ರಿಕೆಯನ್ನು ಮೊದಲ ಪುಟದ ಮೊದಲ ಅಕ್ಷರದಿಂದ ಕೊನೆಯ ಪುಟದ ಕೊನೇ ಅಕ್ಷರದವರೆಗೂ ಓದುತ್ತೇನೆ. ಕಾರಣ, ಪತ್ರಿಕೆ ಅಷ್ಟು ಕುತೂಹಲಕಾರಿ ವಿಷಯಗಳನ್ನು ಒಳಗೊಂಡಿದ್ದು ಎಲ್ಲವನ್ನೂ ನಿಷ್ಪಕ್ಷಪಾತವಾಗಿ ನೋಡುವ ಗುಣವನ್ನು ಹೊಂದಿದೆ. ಗಂಗಾಧರ ಪದಕಿಯವರ ಬಗ್ಗೆ ಕೇಳಿದ್ದೆನಾದರೂ ಏಪ್ರಿಲ್ ಸಂಚಿಕೆಯಲ್ಲಿ 'ನಮ್ಮ ಸಮಾಜವಾದಿಗಳು' ಅಂಕಣದಡಿ ಬಂದ ಅವರ ಪರಿಚಯ ಲೇಖನದಿಂದ ಹೆಚ್ಚು ಮಾಹಿತಿ ದೊರೆತು ಅವರ ಬಗ್ಗೆ ಮೆಚ್ಚುಗೆ ಮೂಡಿತು. 'ಜಾಲಾರ ಹೂವು ಮತ್ತು ಇತರ ಪ್ರಬಂಧಗಳು' ಕುರಿತ ಪುಸ್ತಕಾವಲೋಕನ ವಸ್ತುನಿಷ್ಠವಾಗಿದ್ದು, ಸಮತೋಲನದಿಂದ ಕೂಡಿದೆ.

ವೀರಪ್ಪ ಮೊಯ್ಲಿಯರಿಗೆ ಸರಸ್ವತಿ ಸಮ್ಮಾನ್ ದೊರೆತ ಸಂಬಂಧವಾಗಿ ನೀವು ಬರೆದಿರುವಂತೆ ಬರೆಯಲು–ಅದರಲ್ಲಿ ನನ್ನನ್ನು ಸ್ವಲ್ಪ ತಮಾಷೆ ಮಾಡಿದ್ದರೂ ಪರವಾ ಇಲ್ಲ–ನಿಜವಾಗಿ ನೈತಿಕ ಧೈರ್ಯ ಬೇಕು.

**–ಹಂಪನಾ,** ಬೆಂಗಳೂರು

ಏಪ್ರಿಲ್ ಸಂಚಿಕೆ ಮುಖ್ಯವೆನಿಸುವ ಲೇಖನಗಳನ್ನೊಳಗೊಂಡು ಸಮೃದ್ಧವಾಗಿ ಬಂದಿದೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಲೋಹಿಯಾರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿವರಿಸುತ್ತಾ, ಅರ್ಥಪೂರ್ಣವಾಗಿಯೂ, ಪರಿಣಾಮಕಾರಿಯಾಗಿಯೂ ಮೂಡಿ ಬಂದಿದೆ. ಯಾವುದೇ ಕಾರಣಕ್ಕೆ ಪತ್ರಿಕೆ ನಿಲ್ಲಿಸಬೇಡಿ. ಇಂದಿನ ಸಂದರ್ಭದಲ್ಲಿ ಪತ್ರಿಕೆ ಮುಖ್ಯ ಪಾತ್ರ ವಹಿಸುತ್ತಿದೆ.

**–ಚಂಪಾ,** ಬೆಂಗಳೂರು

ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಯಾರನ್ನುದ್ದೇಶಿಸಿದೆಯೋ ತಿಳಿಯದಾಗಿದೆ! ಅಧಿಕಾರ ಸ್ವೀಕರಿಸಿದೊಡನೆ ತಮ್ಮ ಅಧಿಕೃತ ಕಛೇರಿಯಲ್ಲಿ ಬ್ರಾಹ್ಮಣ ಪುರೋಹಿತರಿಂದ ಪೂಜೆ ಮಾಡಿಸಿ ಅವರಿಂದ ತೀರ್ಥ–ಪ್ರಸಾದ ಸ್ವೀಕರಿಸಿದ ಮುಖ್ಯ ಮಂತ್ರಿಗಳೊಬ್ಬರು ಆಡುವ ಮತ್ತು ಮಾಡುವ ಸಾಮಾಜಿಕ ನ್ಯಾಯಕ್ಕೇನಾದರೂ ಅರ್ಥವಿದೆಯೇ? ಎಲ್ಲವೂ ಅಧಿಕಾರ ಭದ್ರ ಮಾಡಿಕೊಳ್ಳುವ ರಾಜಕೀಯ ತಂತ್ರಗಳಷ್ಟೇ. ಸಮಾಜವಾದ–ಗಿಮಾಜವಾದವೆಲ್ಲ ಬರೀ ಲೊಳಲೊಟ್ಟೆಯಷ್ಟೆ.

**–ಧನಂಜಯ ಬಿ.ಸಿ.** ಮೈಸೂರು

ಏಪ್ರಿಲ್ ಸಂಚಿಕೆಯಲ್ಲಿನ ಸಮಕಾಲೀನ ಅಂಕಣದ ಎಲ್ಲ ಲೇಖನಗಳೂ ಅಂಬೇಡ್ಕರ್ ಹಿಂದೆಯೇ ಹೇಳಿ ದುಃಖಿಸಿದ್ದ ಮಾತುಗಳನ್ನು ಪುನರಾವರ್ತಿಸಿವೆಯಷ್ಟೆ. ಆ ಮಾತುಗಳೆಂದರೆ, ಮೀಸಲಾತಿಯ ಅನುಕೂಲ ಪಡೆದ ವಿದ್ಯಾವಂತ ದಲಿತರು ತಮ್ಮ ಅನಕ್ಷರಸ್ತ ಸೋದರ ದಲಿತರನ್ನು ಮೇಲೆತ್ತುವ ಕಾರ್ಯದಲ್ಲಿ ತೊಡಗುತ್ತಾರೆ ಎಂಬ ನನ್ನ ನಂಬಿಕೆಯನ್ನು ಹುಸಿಗೊಳಿಸಿ ಮೋಸ ಮಾಡಿದ್ದಾರೆ ಎಂಬುದಾಗಿದೆ. ರಾಜೇಂದ್ರ ಚೆನ್ನಿಯವರು ಸರಿಯಾಗಿ ಗುರುತಿಸಿರುವಂತೆ ಇಂದು ಅಂಬೇಡ್ಕರ್ ದಲಿತ ಎಂಬುವವರು ಯಾರಿದ್ದಾರೆ/ ಎಲ್ಲಿದ್ದಾರೆ?

**–ಆರ್. ಕಾಂತರಾಜು,** ಹೊಸಪೇಟೆ

ದಲಿತ ಸಂಘಟನೆಗಳನ್ನು ಕುರಿತ ವಾಸುದೇವ ಬೆಳ್ಳೆಯವರ ಲೇಖನ ಈ ಸಂಘಟನೆಗಳ ಅವನತಿಯ ಚರಿತ್ರೆಯನ್ನು ಸರಿಯಾಗಿ ಗುರುತಿಸಿದೆ. ಇಂದು ಬಹಳಷ್ಟು ದಲಿತ ಸಂಘಟನೆಗಳು ಸರ್ಕಾರದ ದಲಿತ ಮಂತ್ರಿವರ್ಯರ ಅನಧಿಕೃತ ಪರಿವಾರಗಳಾಗಿ ಮಾರ್ಪಟ್ಟಿವೆ.

**–ಟಿ. ನಾರಾಯಣ ಸ್ವಾಮಿ,** ಹೊಸಕೋಟೆ

ವೀರಪ್ಪ ಮೊಯ್ಲಿಯವರಿಗೆ ಸರಸ್ವತಿ ಸಮ್ಮಾನ್ ಸಂದಿರುವ ಬಗ್ಗೆ ಬರೆಯುತ್ತಾ, ಅಡಿಗರಿಗೂ ಈ ಸಮ್ಮಾನ್ ದೊರೆತಿತ್ತು ಎಂದು ಬರೆದಿದ್ದೀರಿ. ಆದರೆ ಅಡಿಗರಿಗೆ ಸಂದಿದ್ದು ಕಬೀರ್ ಸಮ್ಮಾನ್. ಆಗ ಸರಸ್ವತಿ ಸಮ್ಮಾನ್ ಇರಲಿಲ್ಲ.

**–ಕೆ.ವಿ. ಅಕ್ಷರ,** ಹೆಗ್ಗೋಡು.

(ಈ ಲೋಪಕ್ಕಾಗಿ ಕ್ಷಮೆ ಇರಲಿ–ಸಂ)

## ಜಾತಿ ವಿನಾಶವೋ, ಸಮಾನತೆಯೋ? : ಕೆಲವು ಪ್ರತಿಕ್ರಿಯೆಗಳು

### ೧. ಜಾತಿಗಳು ಸಾಮಾಜಿಕ–ಸಾಂಸ್ಕೃತಿಕ ವೈವಿಧ್ಯದ ಪ್ರತೀಕ

'ಸಮಾಜವಾದದ ಗುರಿ: ಜಾತಿ ವಿನಾಶವೋ, ಜಾತಿ ಸಮಾನತೆಯೋ? ಸ್ಪಷ್ಟತೆ ಬೇಕಿದೆ' ('ಹೊಸ ಮನುಷ್ಯ'–ಏಪ್ರಿಲ್ ೨೦೧೫) ಎಂಬ ತಮ್ಮ ಅನಿಸಿಕೆಯಲ್ಲಿ ಬಿ. ರಾಜೇಶ ಅವರು ಅತ್ಯಂತ ಪ್ರಸ್ತುತ ಪ್ರಶ್ನೆಯನ್ನೆತ್ತಿದ್ದಾರೆ. ಜಾತಿಯನ್ನು ಆಮೂಲಾಗ್ರವಾಗಿ ನಷ್ಟಪಡಿಸಬೇಕು ಎಂದು ಅಭಿಪ್ರಾಯ ಪಟ್ಟವರು ಡಾ. ಬಿ.ಆರ್.ಅಂಬೇಡ್ಕರ್ ಅವರೇ ಹೊರತು ಸಮಾಜವಾದಿಗಳಲ್ಲ. ಸಮಾಜವಾದದ ಕೇಂದ್ರ ಬಿಂದು ಸಮಾನತೆಯೇ ಆಗಿರುವುದರಿಂದ ಜಾತಿಗಳ ನಡುವೆ ಸಮಾನತೆ ಸಾಧಿಸುವುದು ಸಮಾಜವಾದದ ಗುರಿಯಾಗುತ್ತದೆಯೇ ಹೊರತು ಜಾತಿ ವಿನಾಶವಲ್ಲ.

ಹಾಗೆ ನೋಡಿದರೆ ಮೊದಲಿಗೆ "ಜಾತಿ ಜಾತಿಗಳ ನಡುವೆ ಭೇದವನ್ನು ಉಳಿಸಿಕೊಂಡೇ ಸಮಾನತೆಯನ್ನು ಉಂಟು ಮಾಡುವ ದಿಕ್ಕಿನಲ್ಲಿ ಆಡುವ

ಮಾತುಗಳು ನಿರರ್ಥಕ. ಜಾತಿಗಳು ನಾಶವಾಗಬೇಕು, ಅವುಗಳ ನಾಮಾವಶೇಷಗಳೂ ಉಳಿಯಕೂಡದು" ಎಂದು ಹೇಳಿದ ಲೋಹಿಯಾ ಕೂಡ 'ಮಾರ್ಕ್ಸ್, ಗಾಂಧಿ ಎಂಡ್ ಸೋಷಲಿಜಂ' ಎಂಬ ತಮ್ಮ ಪುಸ್ತಕದ ಮುನ್ನುಡಿಯಲ್ಲಿ "ವಿಶೇಷ ಅವಕಾಶಗಳ ಹೊರತು ಹಿಂದುಸ್ತಾನದ ಜಾತಿಗಳು ಕರಗುವುದಿಲ್ಲ, ವಿಶೇಷ ಅವಕಾಶಗಳೇ ಜಾತಿಯನ್ನು ನಿರ್ಮೂಲ ಮಾಡುತ್ತವೆ" ಎಂದು ಹೇಳುತ್ತಾರೆ.

ಆದರೆ ಜಾತಿ ಆಧಾರಿತ ಮೀಸಲಾತಿ ಹಿಂದುಳಿದ ಜಾತಿಗಳ ಜನರನ್ನು ತಮ್ಮತಮ್ಮ ಜಾತಿಗಳಿಗೆ ಅಂಟಿಕೊಳ್ಳುವ ಹಾಗೆ ಮಾಡಿ ಅವರ ಜಾತಿ ಬದ್ಧತೆಯನ್ನು ಗಟ್ಟಿಗೊಳಿಸುತ್ತದೆ. ಈ ಜಾತಿಗಳಿಗೆ ಮೀಸಲಾತಿಯಿಂದಾಗಿ ಅವಕಾಶಗಳು ದೊರೆತು ಅವು ಕೂಡ ಮೇಲ್ಜಾತಿಗಳಿಗೆ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮನಾಗುವ ಮೂಲಕ ಸಾಮಾಜಿಕವಾಗಿಯೂ ಸಮನಾಗುತ್ತವೆಯೇ ಹೊರತು ಅವು ತಮ್ಮ ಜಾತಿಯ ಜಾಡನ್ನು ಕಳೆದುಕೊಳ್ಳುವುದಿಲ್ಲ.

ವಿಶೇಷ ಅವಕಾಶಗಳು ಜಾತಿಗಳನ್ನು ನಷ್ಟ ಪಡಿಸುವುದು ಸಾಧ್ಯವಿಲ್ಲವಾದರೂ ಅವು ಜಾತಿಗಳ ನಡುವಣ ಅಸಮಾನತೆಗಳನ್ನು ಕಡಿಮೆ ಮಾಡುತ್ತವೆ ಹಾಗೂ ಅವುಗಳಲ್ಲಿ ಹೆಚ್ಚಿನ ಸಮಾನತೆಯನ್ನು ತರುತ್ತವೆ ಎನ್ನುವುದು ಖಚಿತ. ಜೊತೆಗೆ, ಸಮಾಜವಾದ ಎಂದರೆ ಏಕರೂಪತೆಯಲ್ಲ, ವೈವಿಧ್ಯತೆ ಎನ್ನುವುದಾದರೆ, ಜಾತಿಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈವಿಧ್ಯತೆಯ ಘಟಕಗಳಾಗಿ ಉಳಿದುಕೊಳ್ಳುವುದರಲ್ಲಿ ಸಮಾಜವಾದಿಗಳಿಗೆ ಯಾವ ಅಭ್ಯಂತರವೂ ಇರಲಾರದು

**–ಬಾಪು ಹೆದ್ದೂರಶೆಟ್ಟಿ,** ಬೆಂಗಳೂರು

## ೨. ನೈಜ ಸಮಾಜವಾದಿಗಳ ಸಂಖ್ಯೆ ಬಯಲಾಗಲಿ

'ಜಾತಿಯಲ್ಲಿ ಚಲನೆ ಇಲ್ಲ, ವರ್ಗದಲ್ಲಿ ಚಲನೆ ಇದೆ' ಎಂದು ನಮಗೆ ಹೇಳಿಕೊಟ್ಟವರೇ ಡಾ. ರಾಮಮನೋಹರ ಲೋಹಿಯಾರವರು. ಮಾನವ ಮಂಟಪ ಲೋಹಿಯಾ ವಿಚಾರಧಾರೆಯ ತಾತ್ತ್ವಿಕತೆಯ ಮೇಲೆ ನಿಂತಿರುವಂತಹ ಒಂದು ಸಂಸ್ಥೆ. ಅದರ ಸಲಹೆ–ಸೂಚನೆಗಳು ಲೋಹಿಯಾ ಚಿಂತನೆಗನುಗುಣವಾಗಿದ್ದರೆ ಚೆನ್ನ. ಅಂತರ್ಜಾತೀಯ ಪ್ರೇಮ ವಿವಾಹವಾದವರೆಲ್ಲ ನಮ್ಮಲ್ಲಿ ಹಲವರು ಅಂದುಕೊಂಡಿರುವಂತೆ ಮಹಾನ್ 'ಕ್ರಾಂತಿಕಾರಿ' ಆದವರೇನಲ್ಲ. ಹಾಗೆಯೇ ಸ್ವಜಾತಿ ಮದುವೆಯಾದವರೆಲ್ಲ ಒಣ ಸಂಪ್ರದಾಯವಾದಿಗಳೂ ಅಲ್ಲ. ಅಂತರ್ಜಾತಿ ಮದುವೆಯಾದ ಅನೇಕರಲ್ಲಿ ಕೋಮುವಾದಿಗಳೂ ಇದ್ದಾರೆ. ಪರಮ ಜಾತಿವಾದಿಗಳೂ ಇದ್ದಾರೆ ಹಾಗೆಯೇ ಗೊಡ್ಡು ನಂಬಿಕೆ ಹೊತ್ತವರೂ ಇದ್ದಾರೆ.

ತಮ್ಮ ಮದುವೆಯ ಸಂದರ್ಭದಲ್ಲಿ ವ್ಯಾವಹಾರಿಕ ಸಂಗತಿಗಳನ್ನು, ಲಾಭ–ನಷ್ಟಗಳ ಲೆಕ್ಕಾಚಾರ ಮಾಡದೆ ನಮ್ಮ ಬದುಕು ನಮ್ಮದು ಎಂದು ಭಾವಿಸಿ ಮದುವೆಯಾದ ಅನೇಕ ದಂಪತಿಗಳಿಗೆ ಸಮಾಜವಾದ ಒಂದು ಚಿಂತನಾಕ್ರಮವಾಗಿ ಗೊತ್ತಿರಲಿ ಗೊತ್ತಿಲ್ಲದಿರಲಿ, ಅದು ಅವರ ಬದುಕಿನ ಭಾಗವಾಗಿ ಹೋಗಿದೆ. ಅದು ಅವರ ಬದುಕಿನ ಕಾಮನ್‌ಸೆನ್ಸ್ ಕೂಡ ಆಗಿದೆ. ಅವರು ಜಾತಿರಹಿತ ಸಮಾಜದೆಡೆಗಿನ ತಮ್ಮ ಕಾಣಿಕೆಯಾಗಿ ತಮ್ಮತಮ್ಮ ಜಾತಿಗಳನ್ನು ಘೋಷಿಸದಿರುವುದೇ ಬದುಕಿನ ಧೀಮಂತಿಕೆ ಎಂದು ಭಾವಿಸಿ ಮುನ್ನಡೆಯಬೇಕಾಗಿದೆ.

ಜಾತಿರಹಿತ ಸಮಾಜ ನೈಸರ್ಗಿಕವಾದುದು. ಜಾತಿ ಸಹಿತ ಸಮಾಜ ಕೃತಕವಾದುದು. ಹಾಗಾಗಿ ಸಜಾತೀಯ ವಿವಾಹಗಳೂ ಕೃತಕವಾದವುಗಳೇ. ಈ ಕೃತಕತೆಯನ್ನು ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಧಿಕ್ಕರಿಸಿರುವವರು ಜಾತಿರಹಿತ ಸಮಾಜದ ಕನಸನ್ನು ಕಾಣುವವರೇ ಆಗಿದ್ದರೆ ಅವರು ಜನಗಣತಿಯ ಸಂದರ್ಭದಲ್ಲಿ ತಮ್ಮ ಜಾತಿಯನ್ನು ಘೋಷಿಸದಿರುವ ಸಂಕಲ್ಪ ಮಾಡಬಲ್ಲವರಾಗಿರುತ್ತಾರೆ. ಆ ಮೂಲಕ ಕರ್ನಾಟಕದಲ್ಲಿ ಜಾತಿರಹಿತ ಸಮಾಜ ನಿರ್ಮಾಣವನ್ನು ಬಯಸುವ ನೈಜ ಸಮಾಜವಾದಿಗಳು ಎಷ್ಟು ಸಂಖ್ಯೆಯಲ್ಲಿದ್ದಾರೆ ಎನ್ನುವುದಾದರೂ ಬಯಲಾಗಬಹುದು.

**–ಡಾ. ನಿತ್ಯಾನಂದ ಬಿ ಶೆಟ್ಟಿ,** ತುಮಕೂರು

## ೩. ಮಾನವ ಮಂಟಪದ ಹೆಸರಲ್ಲಿ ಈ ಗೊಂದಲ ಬೇಡ

ಕರ್ನಾಟಕದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಜಾತಿ ಗಣತಿ ವೇಳೆ ಎಲ್ಲ ಜಾತಿಯ ಮುಖಂಡರು, ರಾಜಕಾರಣಿಗಳು ತಮ್ಮ ಜಾತಿಯ ಜನರಿಗೆ ಜಾತಿ ಹಾಗೂ ಧರ್ಮದ ಕಾಲಂನಲ್ಲಿ ತಮ್ಮ ಜಾತಿ ಧರ್ಮವನ್ನು ನಿಖರವಾಗಿ ನಮೂದಿಸುವಂತೆ ಮಾಧ್ಯಮಗಳ ಮೂಲಕ, ಜಾತಿ ಸಭೆಗಳ ಮೂಲಕ ಕರೆ ನೀಡಿದ್ದಾರೆ. ಅದು ಸವಲತ್ತು, ರಾಜಕೀಯ ಸ್ಥಾನಮಾನದ ಲೆಕ್ಕಾಚಾರ. ಅದು ಆಯಾ ಜಾತಿಗಳ, ಜಾತಿ ಮುಖಂಡರುಗಳ ತೀರ್ಮಾನ.

ಆದರೆ ಇದೇ ಸಂದರ್ಭದಲ್ಲಿ ನಮ್ಮ ಕೆಲವು ಗೆಳೆಯರು ತುಮಕೂರು ಮಾನವ ಮಂಟಪ ಎಂಬ ಹೆಸರಿನಡಿ ಅಂತರ್ಜಾತಿ, ಅಂತರ್‌ಧರ್ಮೀಯ ವಿವಾಹವಾದ ಪತಿ–ಪತ್ನಿ ನಿಖರವಾಗಿ ತಮ್ಮ ಜಾತಿ, ಧರ್ಮ ದಾಖಲಿಸಿ ಎಂದು ಪತ್ರಿಕಾ ಪ್ರಕಟಣೆ ನೀಡಿರುವುದು ಇನ್ನೊಂದು ಜಾತಿಯ ಮುಖಂಡರು ಜಾತಿ ನಮೂದಿಸಲು ಕರೆ ನೀಡಿದಂತಿದೆ ಎಂದು ಹೇಳಲು ವಿಷಾದಿಸುತ್ತೇವೆ.

'ಮಾನವ ಮಂಪಟ' ರೂಪುಗೊಂಡಿರುವುದು ಜಾತಿಯ ನೆಲೆಯಲ್ಲಿ ಅಲ್ಲ. ಜಾತಿ ವಿನಾಶದ ನೆಲೆಯಲ್ಲಿ ಎಂಬುದನ್ನು ತುಮಕೂರು ಗೆಳೆಯರು ಮರೆತಂತಿದೆ. ಜಾತಿ ಪದ್ಧತಿಯ ಹುಟ್ಟಡಗಿಸಲು, ಜಾತಿಯನ್ನು ಸಾರಾಸಗಟಾಗಿ ಕಿತ್ತೊಗೆಯಲು ಜಾತಿ ವಿನಾಶ ಎಂಬ ಪರಿಕಲ್ಪನೆಯಲ್ಲಿ ಅಂತರ್ಜಾತಿ, ಅಂತರ್ ವ್ಯವಹಾರಿಕ ಮತ್ತು ವಾಸ್ತವದ ಸಂಗತಿಗಳ ಹಿನ್ನೆಲೆಯಲ್ಲಿ ಬಹುಮುಖ್ಯ ಎಂದು ಇವರು ತಮ್ಮ ಕರೆಯಲ್ಲಿ ನೀಡಿರುವ ನಾಲ್ಕು ಕಾರಣಗಳು ಅಸಂಗತವಾಗಿವೆ.

೧. ಪ್ರೊ. ರವಿವರ್ಮಕುಮಾರ್ ಅವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಅಂತರ್ಜಾತಿ ವಿವಾಹವಾದವರ ಮಕ್ಕಳಿಗೆ ಶೇ.೧ರ ಶೈಕ್ಷಣಿಕ, ಉದ್ಯೋಗ ಮೀಸಲಾತಿಗೆ ಶಿಫಾರಸ್ಸು ಮಾಡಿದ್ದು, ಆ ಮೀಸಲಾತಿಗಾಗಿ ಹೋರಾಡಲು ಜಾತಿ, ಧರ್ಮಗಳ ದಾಖಲಾತಿ ಮುಖ್ಯ ಎಂದು ಹೇಳಲಾಗಿದೆ.

ಜಾತಿ ಗಣತಿ ಕಾಲಂನಲ್ಲಿ ಜಾತಿ ನಮೂದಿಸಿಯೇ ಹೋರಾಡಬೇಕೆ? ಅಂತರ್ಜಾತಿ, ಅಂತಧರ್ಮೀಯ ವಿವಾಹಿತರು ಎಂದು ನಮೂದಿಸಿದರೆ ಹೋರಾಟ ಸಾಧ್ಯವಿಲ್ಲವೆ?

೨. ಕರ್ನಾಟಕದಲ್ಲಿ ಜಾತಿಯಾಚೆಗೆ ಚಲಿಸಿದ ಜಾತ್ಯತೀತ ಜನಗಣತಿ ಸಂಖ್ಯಾ ಪ್ರಮಾಣ ಗೊತ್ತಾಗಲಿದೆ ಹಾಗೂ ತಮ್ಮ ಜಾತಿ ಧರ್ಮಗಳ ಕೂಪದಿಂದ ಆಚೆಗೆ ಚಲಿಸಿದವರ ಸಾಮಾಜಿಕ ಚಹರೆ ದಾಖಲಾಗುತ್ತದೆ ಎಂದು ಹೇಳಲಾಗಿದೆ.

ಇವರೇ ಹೇಳಿರುವಂತೆ ಜಾತಿ ಕೂಪದಿಂದ ಆಚೆ ಚಲಿಸಿ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ತಮ್ಮನ್ನು ಅರ್ಪಿಸಿಕೊಂಡವರಿಗೆ ಮತ್ತೆ ಜಾತಿ ನಮೂದಿಸಿ ಎಂದರೆ ತಪ್ಪಾಗುವುದಿಲ್ಲವೆ? ಅವರನ್ನು ದಿಕ್ಕು ತಪ್ಪಿಸಿ ದಂತಾಗುವುದಿಲ್ಲವೆ?

೩. ಗಂಡನ ಜಾತಿಯ ಮೂಲಕ ಗುರುತಿಸಿಕೊಳ್ಳುವ ಲಿಂಗ ಅಸಮಾನತೆಯ ಸಾಮಾಜಿಕ ಗುಲಾಮಗಿರಿಗೆ ಇತಿಶ್ರೀ ಹಾಡಲು ಎಂಬುದು.

ನಾವು ಜಾತಿ–ಧರ್ಮಗಳನ್ನೇ ನಿರಾಕರಿಸಿ ಮದುವೆಯಾದ ಮೇಲೆ, ಗಂಡನ ಜಾತಿಯನ್ನು ಗುರುತಿಸಿಕೊಳ್ಳುವ ಸಂದರ್ಭವೆಲ್ಲಿಂದ ಬಂತು? ಹಾಗೆ ಗುರುತಿಸಿಕೊಳ್ಳುವುದು ಜಾತಿಯ ಸವಲತ್ತು ಪಡೆಯಬೇಕೆಂಬುವವರಿಗೆ ಮಾತ್ರ ಅಗತ್ಯವಿರಬಹುದು. ಜಾತಿ ಬಿಡುವ ಮುನ್ನ ಈ ಬಗ್ಗೆ ಯೋಚಿಸಬೇಕಾಗುತ್ತದೆ.

೪. ತಾವು ಅಂತರ್ಜಾತಿ, ಅಂತರ್‌ಧರ್ಮೀಯ ವಿವಾಹಿತ ಎಂದು ಹೇಳಿಕೊಳ್ಳಲು ಹಿಂಜರಿಯುವ ಪರಿಸ್ಥಿತಿಯನ್ನು ಬದಲಿಸಲು, ಸ್ವಜಾತಿ ಧರ್ಮ ಬಹಿಷ್ಕಾರ ಮುಂತಾದವುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಎಂಬುದು.

ನಮಗೆ ಅಂತರ್ಜಾತಿ, ಅಂತರ್‌ಧರ್ಮೀಯ ವಿವಾಹಿತರು ಎಂದು ಹೇಳಿಕೊಳ್ಳಲು ಹಿಂಜರಿಯುವ, ಬಹಿಷ್ಕಾರ–ಹಲ್ಲೆಗಳ ಭಯ ಇದ್ದವರು ಅಂತರ್ಜಾತಿ, ಅಂತರ್‌ಧರ್ಮೀಯ ವಿವಾಹವನ್ನೇ ಆಗುತ್ತಿರಲಿಲ್ಲ ಅಲ್ಲವೇ? ಜಾತಿಯನ್ನು ಧಿಕ್ಕರಿಸಿ ನಿಂತವರಿಗೆ ಇದು ಬಹುದೊಡ್ಡ ಪ್ರಶ್ನೆಯೇ ಅಲ್ಲ.

ಒಟ್ಟಾರೆಯಾಗಿ ತುಮಕೂರು ಗೆಳೆಯರು ತಮಗೆ ಬೇಕೆನಿಸಿದ್ದರೆ ತಂತಮ್ಮ ಜಾತಿಗಳನ್ನು ದಾಖಲಿಸಲು ಸ್ವತಂತ್ರರಿದ್ದರು. ಆದರೆ ಜಾತಿ ವಿನಾಶದ ಪರಿಕಲ್ಪನೆಯಲ್ಲಿ ಒಡಮೂಡಿದ 'ಮಾನವ ಮಂಟಪ'ದ ಹೆಸರಿನಲ್ಲಿ ಕರೆ ನೀಡಿದ್ದು ಸರಿಯಲ್ಲ.

**–ರವಿಚಂದ್ರ ಚಿಕ್ಕೆಂಪಿಹುಂಡಿ**

*ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್,* ಮೈಸೂರು

## . ೪. ಇವರು ತಮ್ಮನ್ನು 'ಮನುಷ್ಯರು' ಎಂದೂ ಗುರುತಿಸಿಕೊಳ್ಳಬಾರದು

ಬೆಂಗಳೂರಿನ 'ಮಾನವ ಮಂಟಪ'ದ ಸಭೆಯಲ್ಲಿ ತುಮಕೂರಿನ ಗೆಳೆಯರು ಒತ್ತಾಯಿಸಿದ್ದು, ಆ ಮೊದಲೇ ಸಭೆ ಸೇರಿ ತಾವು ಒಮ್ಮತಕ್ಕೆ ಬಂದಿದ್ದ ತೀರ್ಮಾನಗಳನ್ನಷ್ಟೆ. ಇರಲಿ, ಬಿ. ರಾಜೇಶ್ ತರಹದವರಿಗೆ ನಾನೊಂದು ಪ್ರಶ್ನೆಯನ್ನು ಕೇಳುವೆ: ಹೌದು, ಅಂತರ್ಜಾತಿ ವಿವಾಹಿತರಿಗೆ ಅವರ 'ಜಾತಿ'ಗಳನ್ನು ಬರೆಸುವಂತೆ ಕೇಳಿಕೊಳ್ಳುವುದರಿಂದ ಅವರಿಗೆ ನಾವು ತತ್ವಭ್ರಷ್ಟರಂತೆ ಕಂಡುಬಂದಲ್ಲಿ, 'ಜಾತ್ಯತೀತತೆಯ' ಮಡಿ ಕೆಡಿಸುವವರಂತೆ ಕಾಣಿಸಿದಲ್ಲಿ, ಇವರಂಥವರು ತಮ್ಮನ್ನು 'ಮನುಷ್ಯ'ರೆಂದೂ ಗುರುತಿಸಿಕೊಳ್ಳಬಾರದು. ಯಾಕೆಂದರೆ 'ಜಾತಿ' ಎನ್ನುವುದು ತೊರೆದುಬಿಡಬೇಕಾದ 'ಹೀನ' ಪದ, ಪದಾರ್ಥ ಎಲ್ಲ ಆಗಿರುವಂತೆಯೇ ಸಕಲ ಸೃಷ್ಟಿಯನ್ನು ನಾಶಗೈದು ಆಧುನಿಕ ರಾಕ್ಷಸ ನಾಗರಿಕತೆಯನ್ನು ಕಟ್ಟಿರುವ 'ಮನುಷ್ಯ' ಕೂಡ ವರ್ಜ್ಯವೇ, 'ಹೀನ'ವೇ. ಅದನ್ನು ತೊರೆದು ತಮ್ಮನ್ನು 'ಮೊಲ, ನರಿ, ನಾಯಿ ಅಥವಾ ಅಮಾಯಕ ಮೃಗ' ಎಂದು ಗುರ್ತಿಸಿಕೊಂಡರೆ ಮಾತ್ರ ಇವರ ಗ್ರಹಿಕೆ, ವಾದ ಸುಸಂಗತ ತಳಹದಿಯ ಮೇಲೆ ನಿಲ್ಲುವಂತಾಗುತ್ತದೆ.

**–ಕೆ.ಪಿ. ನಟರಾಜ,** ತುಮಕೂರು

ಯುವ ಸಮಾಜವಾದಿ ಚಿಂತನ ವೇದಿಕೆ

# ಬೆಳಕು ಬೆಳ್ಳನೆ ಬಿಳುಚಿಕೊಳ್ಳುತ್ತಿದೆ...

–ಹೆಚ್.ಎಸ್. ರಾಮನ ಗೌಡ



**ನಾ**ನು ಬಿಕಾಂ ಅಂತಿಮ ವರ್ಷದಲ್ಲಿದ್ದಾಗ ನಮ್ಮ ಗುರುಗಳು ಓಡುವುದರ ಬಗ್ಗೆ ಹೇಳಿತ್ತಿದ್ದರು. "ಇದು ಸ್ಪರ್ಧೆಯ ಕಾಲ ನೀವು ಇದರಲ್ಲಿ ಒಬ್ಬ ಸ್ಪರ್ಧಾಳು. ಗೆಲ್ಲಬೇಕಾದರೆ ಓಡಬೇಕು. ಎಲ್ಲವನ್ನು ಎಲ್ಲರನ್ನು ಹಿಂದೆ ಹಾಕಿ ಜೀವನದ ಉಸಿರಿರುವವರೆಗೂ ಓಡಬೇಕು". ಎಂದು ಪದೇಪದೇ ಹೇಳುತ್ತಿದ್ದರು. ನಾವುಗಳು ಇದ್ದರೂ ಇದ್ದೀತು ಎಂದು ನಮ್ಮ ನಮ್ಮ ದಿನನಿತ್ಯದ ಕ್ರಿಯಾ ಕರ್ಮಗಳೆಲ್ಲವನ್ನು ಆ ಓಟದಲ್ಲಿಯೇ ನಡೆಸಿಬಿಡುತ್ತಿದ್ದೆವು.

ಬಿಕಾಂ ಮುಗಿದ ಮೇಲೆ ಒಂದು ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಾಗ ಆ ಕಂಪನಿಯವರೂ ನಮ್ಮ ಗುರುಗಳ ಪಾಠವನ್ನು ಇನ್ನಷ್ಟು ಸುಂದರವಾಗಿ ಹೇಳಿ ಇಂತಿಷ್ಟು ಓಟಕ್ಕೆ ಇಂತಿಷ್ಟು ಬೋನಸ್ ಎಂದೆಲ್ಲಾ ಹುರುಪು ತುಂಬಿಸಿ ನಮ್ಮನ್ನು ಹುಚ್ಚು ಕುದುರೆಯಾಗಿಸುತ್ತಿದ್ದರು. ಅವ್ವ ಅಪ್ಪ ಜಾತ್ರೆ ಹಬ್ಬಹರಿದಿನಗಳಲ್ಲಿ ಊರಿಗೆ ಬಾ ಎಂದಾಗ "ನೀವು ಮಾಡುದು ನನಗ ಗೊತ್ತೈತಿ ಅದ ಸಿಹಿ ಅಡಗಿ ಮಾಡುದು... ನಾಲ್ಕ ದಿವಸ ಕುಂತ ತಿನ್ನುದು. ಇದಕ್ಕ ನನ್ನ ಕೆಲಸ ಬಿಟ್ಟ ಬರಬೇಕಾ? ಟೈಮು ಹಾಳು, ದುಡ್ಡು ಹಾಳು ನಾ ಬರುದಿಲ್ಲಾ" ಎಂದು ಬಿರುಸಾಗಿ ಆಡಿದ್ದಿದೆ. ಮತ್ತೆ ಅದನ್ನು ಓಡುತ್ತ ಮರೆತಿದ್ದೂ ಇದೆ.

ಹೀಗೆ ಓಡುತ್ತಲೆ ಮುಗ್ಗರಿಸಿ ಬಿದ್ದು ಸುಧಾರಿಸಿಕೊಳ್ಳುತ್ತಿರುವಾಗ ರಜನಿ ಭಕ್ಷಿಯವರ 'ಬಾಪು ಕುಟಿ' ಪುಸ್ತಕ ಓದುತ್ತಾ ಕುಳಿತಾಗ ಓದುತ್ತಿದ್ದ ಕಟ್ಟೆಯ ಹಿಂದೆಯೇ ಡಿ.ಎಸ್.ಎನ್‌ರ ಮಾತುಗಳು ಹಾಗೆ ಕಿವಿಯೋಳು ಸೇರಿಕೊಂಡವು. ಅದು ನಡೆದಿದ್ದು ಕುಪ್ಪಳ್ಳಿಯ ಸಮಾಜವಾದಿ ಶಿಬಿರದಲ್ಲಿ. ಅವರ ಮಾತಿನ ಸಾಲುಗಳು 'ನಮ್ಮ ವೇಗಕ್ಕೆ ಅರ್ಥವಿಲ್ಲ. ನಾವು ಓಡುತ್ತಾ ಓಡುತ್ತಾ ಯಾಕೆ ಓಡುತ್ತಿದ್ದೇವೆ ಎನ್ನುವುದನ್ನೆ ಮರೆತಿದ್ದೇವೆ. ಅದಕ್ಕೊಂದು ಅಂತಿಮ ಗುರಿಯಂತು ಇಲ್ಲವೆ ಇಲ್ಲ. ಇಂದು ವಿಪರೀತ ದುರಾಶೆ ಬೆಳೆಯುತ್ತಿದೆ. ಇದು ಅನೇಕ ಸಾಮಾಜಿಕ ಮತ್ತು ವೈಯಕ್ತಿಕ ತಳಮಳಗಳಿಗೆ, ಅಶಾಂತಿಗೆ ಹಿಂಸೆಗಳಿಗೆ ಮತ್ತು ಸುಖಲೋಲುಪ ವಿಕೃತಿಗಳಿಗೆ ಕಾರಣವಾಗುತ್ತಿದೆ. ಇದು ಸಮಾಜವೊಂದು ಎಲ್ಲ ಸೂಕ್ಷ್ಮತೆಗಳನ್ನು ಸಂವೇದನಾಶೀಲತೆಯನ್ನು ಕಳೆದುಕೊಂಡ ಸೂಚನೆ' ಎಂದಿದ್ದರು.

ಆಗ ಕುಂಟುತ್ತಾ ಬೆಂಗಳೂರಿನ ಗಗನವನ್ನೆ ಮುಟ್ಟಹೊರಟ ಕಟ್ಟಡಗಳ ಮಧ್ಯೆ ಅ ಕಲ್ಲು ಬೆಂಚಿನ ಮೇಲೆ ಕುಳಿತು ತಿಂಗಳುಗಳನ್ನೆ ಕಳೆದೆ. ಕನಸ ಹೊತ್ತು ಓಡುತ್ತಲೆ ಬರುವ ಗೆಳೆಯರು ಕನಸೆ ಇಲ್ಲದ ನಿರ್ಗತಿಕರು ಎಲ್ಲರನ್ನು ನೋಡುತ್ತಿದ್ದೆ. ನೋಡುವ ಮುಖವನ್ನು ಓದಲು ಕಲಿಸಿದವರು ಗಾಂಧಿ. ನನಗಾಗ ಅನಿಸಿದ್ದು: ಇಷ್ಟು ಈ ಓಟ ಯಾರಿಗಾಗಿ? ಈ ಓಟ ಉಂಟು ಮಾಡುತ್ತಿರುವ ಎಲ್ಲ ಅನಾಹುತಗಳು ಅಭಿವೃದ್ಧಿಯ ಹೆಸರಲ್ಲಿ, ನಡೆಯುವ ಎಲ್ಲವೂ ಯಾಕಿಷ್ಟು ಉಸಿರನ್ನು ಬಿಗಿಯಾಗಿಸುತ್ತವೆ, ಯಾಕೆ ಮಗ್ಗುಲನ್ನು ಬದಲಿಸದಷ್ಟು ಜಡವಾಗಿದೆ? ಈ ಪ್ರಶ್ನೆಗಳು ಎದುರಾದಾಗ ನನಗೆ ಬೆಳಕಾಗಿ ಕಂಡಿದ್ದು, ಚಲನೆಯಾಗಿ ತೋರಿದ್ದು ಕೃಷಿ ಬದುಕು. ಅದಕ್ಕೆ ಚೇತನವಾಗಿ ದೊರೆತವರು ಹಲವರಿದ್ದಾರೆ. ಅವರಿಗೆಲ್ಲ ಶರಣು.

ಕೃಷಿ ಎಂದ ಮಾತ್ರಕ್ಕೆ ನೇಗಿಲು ಹೂಡಿ ಬೆಳೆತೆಗೆಯುವಷ್ಟಕ್ಕೆ ಸೀಮಿತವಾಗಿದೆ ಎಂದಲ್ಲ. ಗಾಂಧಿಯವರು ಹೇಳಿದ ಸ್ವರಾಜ್ಯದ ಕನಸೂ ಅದರೊಂದಿಗಿದೆ. ಚೆನ್ನಿಯವರು ಆ ಕನಸನ್ನು ಬಲು ಚಂದವಾಗಿ ಹಿಡಿದಿಟ್ಟಿರುವುದು ಹೀಗೆ: 'ಇದು ವಸಾಹತುಶಾಹಿಯಿಂದ ಮುಕ್ತವಾದ, ಈ ನೆಲದ ಎಲ್ಲ ಸಮುದಾಯಗಳು ಕ್ರಿಯಾಶೀಲವಾಗಿ ಭಾಗವಹಿಸಬಹುದಾದ, ಬಂಡವಾಳದ ಕ್ರೂರ ಹಿಡಿತದಿಂದ ಮುಕ್ತವಾದ, ಪ್ರಜೆಗಳಿಗೇ ಅನ್ಯವಾಗಿಬಿಡುವ ವಿಕೇಂದ್ರೀಕೃತ ಪ್ರಭುತ್ವವಿಲ್ಲದ ವ್ಯವಸ್ಥೆ ಹಾಗೂ ಪ್ರತಿ ಒಬ್ಬ ವ್ಯಕ್ತಿಯು ತನ್ನ ಭಯಕ್ಕೆ ಲಾಲಸೆ ಹಾಗೂ ವೈಚಾರಿಕತೆಯ ಮೇಲೆ ನಿಯಂತ್ರಣ ಹೊಂದಬಹುದಾದ ಸ್ಥಿತಿ'

ಬೆಂಗಳೂರಿನ ಬೀದಿಯಿಂದ ನಮ್ಮೂರ ಹಳ್ಳಿಯ ಹಾದಿ ಹಿಡಿದೆ. ಹೊಲಗಳಿಗೆ ನಡೆಯುತ್ತ ಅವ್ವ ಅಪ್ಪರ ದುಃಖದ ಮುಖಗಳನ್ನು ಅಜ್ಜ ಅಮ್ಮರ ಕತೆಗಳನ್ನು ಅಕ್ಕ ತಂಗಿಯರ ಮಾತು ಕನಸುಗಳನ್ನು ಕೇಳುತ್ತ ಒಂದು ಕೈಯಿಂದ ಶಹರಿನ ಮುಖವನ್ನು ಅಳಿಸುತ್ತಾ ಒಂದು ಕೈಯಿಂದ ಹಳ್ಳಿಯ ಪುಟಗಳನ್ನು ತಿರುವುತ್ತಿರುವಾಗಲೇ ಐದು ವರುಷಗಳು ಉರುಳಿದ್ದೆ ತಿಳಿದಿಲ್ಲ. ಈ ಐದು ವರುಷಗಳಲ್ಲಿಯ ನೆನಪುಗಳನ್ನು ಬಿಚ್ಚಿದಾಗ ಹುರುಪಿಂದ ಬಂದ ನಾನು ಅಷ್ಟೇನು ಸುಖವನ್ನಾಗಲಿ ಅಥವಾ ದುಃಖವನ್ನಾಗಲಿ ಅನುಭವಿಸಿಲ್ಲ. ವಿಚಿತ್ರ ಧೈರ್ಯ, ಹಟದಲ್ಲಿ ದೇವರ ಮೇಲಿನ ಮುಕ್ಕಾಗದ ಭಕ್ತಿಯಲ್ಲಿ ಕಳೆದಿದ್ದಿದೆ. ಅಕಾಲದ ಮಳೆ, ಬರಗಾಲ ಕಂಡು ಕೇಳರಿಯದ ರೋಗಗಳು, ಬೆಳೆಗಾಗಿಯೇ ಮಾಡಿದ ಸಾಲಗಳು ಪ್ರತಿ ಒಂದಕ್ಕೂ ಅರ್ಜಿ ಹಿಡಿದು ಅಲೆಯುವ ಮುಖಗಳು ಹೀಗೆ ದೊಡ್ಡ ಪಟ್ಟಿಯೇ ಇದೆ. ಇವೆಲ್ಲ ಮೈ ತುಂಬಿ ಹೊರಚಲ್ಲುತ್ತಿರುವಾಗಲೂ ರೈತ ಇದೆಲ್ಲ ಸಹಜವೇ ಎಂಬಂತೆ ಬದುಕುತ್ತ ಇಂದಲ್ಲ ನಾಳೆಯ ಕನಸುಗಳ ಕಾಣುತ್ತಾನೆ. ಇವರಲ್ಲಿ ನಾನೂ ಒಬ್ಬ.

ಹೀಗೆಲ್ಲಾ ಹೇಳಿದ ಮಾತ್ರಕ್ಕೆ ನಾನೇನು ಧೃತಿಗೆಟ್ಟು ರೈತನಾಗುವ ನಿರ್ಧಾರ ಕೈ ಬಿಟ್ಟಿಲ್ಲ. ಅದು ದಿನದಿಂದ ದಿನಕ್ಕೆ ಗಟ್ಟಿಯಾಗುತ್ತದೆ. ಇದೆ ಕಟ್ಟಿಕೊಂಡ ಕನಸುಗಳಿಗೆ ವಾಸ್ತವದ ಹಂಗಿರಲಾರದು. ವಾಸ್ತವವು ನಮ್ಮನ್ನು ಚಿಂತಿಸುವಂತೆ, ಶ್ರಮಿಸುವಂತೆಯೂ ಮಾಡುತ್ತದೆ. ಮತ್ತೆ ಪ್ರಾಮಾಣಿಕತೆಯನ್ನು ಬೇಡುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ರೈತನನ್ನು ಹಂಗಿನಲ್ಲಿ ಬದುಕುವಂತೆ ಮಾಡಲಾಗುತ್ತಿದೆ. ಸದ್ಯದ ಹಂಗಿಲ್ಲದೆ ಬದುಕುತ್ತಾನೆ ಎಂದು ಹೇಳುವ ಧೈರ್ಯ ನಾನಗಾಗುತ್ತಿಲ್ಲ. ಹಂಗಿಲ್ಲದೆ ಬದುಕುತ್ತಿರುವವರ ಉದಾಹರಣೆಗಳನ್ನು ಕೊಡಬಹುದಾದರು ಬೆರಳೆಣಿಕೆಯಷ್ಟು ಮಾತ್ರ.

ಮೊನ್ನೆ ಗೆಳೆಯ ಅಪೂರ್ವ ಮಾನ್ಯ ಪ್ರಧಾನ ಮಂತ್ರಿಯವರು ಜಾರಿಗೆ ತರುತ್ತಿರುವ ಭೂಸ್ವಾಧೀನ ಮಸೂದೆ ಬಗ್ಗೆ ಮಾತನಾಡುತ್ತ ಬಟ್ಟೆ ಇಲ್ಲದ ರೈತನಿಗೆ ಗುರುತಾದ ಹೊಲದ ಚಹರೆಯನ್ನು ಸರ್ಕಾರ ಅಳಿಸ ಹೊರಟಂತಿದೆ ಎಂದಿದ್ದ. ಹೌದು ರೈತ, ನನ್ನ ಹೊಲ ಮನೆ ಮಕ್ಕಳು ಎಂದೆಲ್ಲಾ ಇರುತ್ತಿದ್ದವನು ಮಕ್ಕಳು ಪಟ್ಟಣ ಸೇರುತ್ತಿರುವ ಹೊತ್ತಲ್ಲಿ ಅವನ ಗುರುತನ್ನೇ ಕಸಿಯುತ್ತಿರುವ ಸರಕಾರಕ್ಕೆ ಏನೆಂದು ಹೇಳುವುದು? ಭಾವನಾತ್ಮಕವಾಗಿ ಮಾತನಾಡುತ್ತಲೆ ನಮ್ಮ ಸುಲಿಯುತ್ತಿರುವ ಮಾನ್ಯ ಪ್ರಧಾನ ಮಂತ್ರಿಯವರು ಸ್ಮಾರ್ಟ್ ಸಿಟಿ, ಎಸ್.ಇ.ಝುಡ್‌ಗಳು ಅಣುಸ್ಥಾವರಗಳು ರೈತನ ಸಮಾಧಿಯಾಗಿಸಿದೆ. ಅದರ ಅಡಿಪಾಯದ ಮೇಲೆ ಕಟ್ಟಡ ಕಟ್ಟುವಂತೆ ಕಾಣುತ್ತಿದೆ. ತಾವೋ ಪದ್ಯವೊಂದರ ಈ ಸಾಲುಗಳು ನೆನಪಾಗುತ್ತಿದೆ:

*ಆಗ ಬೆಳಕು ಎಷ್ಟು ಹೊಳಪಿತ್ತು*
*ಕತ್ತಲು ಎಷ್ಟು ಕಪ್ಪಗಿತ್ತು.*

ಆದರೆ ಕತ್ತಲನ್ನು ಬೆಳಕಾಗಿಸುವ ಬೆಳಕನ್ನು ಇನ್ನಷ್ಟು ಬಿಳುಚುವಂತೆ ಮಾಡುವ ಅಕಾಲದಲ್ಲಿದ್ದೇವೆ ನಾವು. ಆದರೆ ಇದರ ನಡುವೆಯೂ ಅಲ್ಲಲ್ಲಿ ಬೆಳಕಿನ ಕಿರಣಗಳು ಕಾಣುತ್ತಿವೆ ಎಂಬುದು ಸಮಾಧಾನದ ಸಂಗತಿ.



**(ಸಮಾಜವಾದಿ ಒಲವುಳ್ಳ ರಾಮನಗೌಡ ಮೂಲತಃ ನವಲಗುಂದ ಸೀಮೆಯ ಬಡ ಕೃಷಿಕ ಕುಟುಂಬದಿಂದ ಬಂದ ಹುಡುಗ. ಜೀವನೋಪಾಯಕ್ಕಾಗಿ ಕೃಷಿಕೂಲಿಯಲ್ಲದೆ ಮನೆಗಳಿಗೆ ಸುಣ್ಣ ಬಣ್ಣ ಮಾಡುವ ಕೆಲಸಗಳಲ್ಲೂ ತೊಡಗಿಕೊಂಡಿರುವ ಈತನಿಗೆ ಸಾಹಿತ್ಯದ ಬಗ್ಗೆಯೂ ವಿಶೇಷ ಒಲವಿದೆ.)**

## ಪತ್ರಿಕೆಯ ಚಂದಾ ವಿವರ

**ಪ್ರಿಯ ಓದುಗರೇ,**

**'ಹೊಸ ಮನುಷ್ಯ' ಪತ್ರಿಕೆಗೆ ಈ ತಿಂಗಳಿಂದ ಅದರ ಐದನೇ ಸಂಪುಟದವರೆಗೆ, ಅಂದರೆ 2016ರ ಜುಲೈ ಸಂಚಿಕೆವರೆಗೆ ಒಟ್ಟು ಚಂದಾ ರೂ. 200/–. ಈ ಮೊತ್ತವನ್ನು *ಸಂಪಾದಕರು, ಹೊಸ ಮನುಷ್ಯ*–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು. ದೂರವಾಣಿ ಸಂಖ್ಯೆ, ಈ ಮೇಲ್ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ–ಸಂ.**

**ಸಮಕಾಲೀನ**

# ಬದನವಾಳು ಸತ್ಯಾಗ್ರಹವೂ, ಸ್ವರಾಜ್ಯವೂ....


ಪ್ರಸನ್ನ ಅವರ 'ಸುಸ್ಥಿರ ಬದುಕು' ಕುರಿತ ರಾಷ್ಟ್ರೀಯ ಸಮಾವೇಶ ಬದನವಾಳುವಿನಲ್ಲಿ ಮುಗಿದಿದೆ. ಯಶಸ್ವಿಯಾಗಿಯೂ ಮುಗಿದಿದೆ ಎಂದು ಪತ್ರಿಕೆಗಳೂ ಹೇಳುತ್ತಿವೆ, ಗೆಳೆಯರೂ ಹೇಳುತ್ತಿದ್ದಾರೆ. ಪ್ರಸನ್ನ ಒಳ್ಳೆಯ ಮಾಧ್ಯಮ ನಿರ್ವಾಹಕರು; ಹಾಗೇ ಬಹು ಒಳ್ಳೆಯ ರಂಗ ನಿರ್ವಾಹಕರೂ ಕೂಡ. ಹಾಗಾಗಿ ಅದು ನಿರ್ವಹಣೆಯ ದೃಷ್ಟಿಯಿಂದ ಯಶಸ್ವಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅದಕ್ಕಾಗಿ ಪ್ರಸನ್ನರನ್ನು ಮೊದಲಿಗೆ ಅಭಿನಂದಿಸಬೇಕು.

ಪ್ರಸನ್ನ ಅವರ ಎಂದಿನ ಎಲ್ಲ ಸಾಹಸಗಳಂತೆಯೇ ಇದು ರಾಷ್ಟ್ರೀಯ ಸಮಾವೇಶ. ಅದು ಅಂತಾರಾಷ್ಟ್ರೀಯ ಆಗದಿದ್ದುದು ನಮ್ಮ ಪುಣ್ಯ. ಪ್ರಸನ್ನ ತಮ್ಮ ಹಲವು ಜಿಗಿತಗಳ(ಇತ್ತೀಚಿನದು ಗಜೇಂದ್ರ ಗಡದಿಂದ ಬದನವಾಳುವಿಗೆ!) ಸಾಹಸಮಯ ಬದುಕಿನ ಭಾಗವಾಗಿ ರೂಢಿಸಿಕೊಂಡ ಎಲ್ಲ ಸಂಪರ್ಕಗಳನ್ನೂ ಬಳಸಿ ಬದನವಾಳುವನ್ನು ಕೆಲವು ದಿನಗಳ ಮಟ್ಟಿಗಾದರೂ ಒಂದು ಕುತೂಹಲದ ಕೇಂದ್ರವನ್ನಾಗಿಸಿದರು. ಪತ್ರಿಕೆ ಓದುವ ಎಲ್ಲರೂ 'ಸುಸ್ಥಿರ ಬದುಕು' ಎಂಬ ಪರಿಕಲ್ಪನೆ ಬಗ್ಗೆ ಕುತೂಹಲ ತಾಳಿದರು. ಕುತೂಹಲ ಮಿತಿ ಮೀರಿದವರು ಬದನವಾಳುವಿಗೂ ಹೋದರು. ಇವರ ಜೊತೆಗೆ ಈ ಹಿಂದೆ ಹಲವು ರೀತಿಯ ಚಳುವಳಿಗಳನ್ನು ಮಾಡಿ ಸೋತು ಸುಣ್ಣವಾದವರು, ಇದರಿಂದೇನಾದರೂ ಆಗುತ್ತದೇನೋ ಎಂಬ ಆಸೆಯಿಂದ ಅಲ್ಲಿ ಸೇರಿದರು. ಜೊತೆಗೆ ಜಾಗತೀಕರಣದ ಬದುಕಿನ ಕ್ರಮಗಳಿಂದ ಬೇಸತ್ತು ದಿಕ್ಕುಗಾಣದವರಾಗಿದ್ದ ಸಾಮಾನ್ಯ ಜನರೂ ಅಲ್ಲಿಗೆ ಹೋದರು. ಪ್ರಸನ್ನ, ಅವರಿಗೆಲ್ಲ ಒಂದು ಹೊಸ ಶಬ್ದದ ಮೋಡಿಯಲ್ಲಿ ಕನಸು ಕಟ್ಟಿಕೊಟ್ಟರು. ಆ ಕನಸಲ್ಲಿ ಅಲ್ಲಿ ಸೇರಿದ್ದ ಜನ ಸಂಭ್ರಮಿಸಿದರು.

ಆದರೆ ಪ್ರಶ್ನೆ ಈ ಕನಸು ಅಲ್ಲಿಗೆ ಹೋದವರ, ಅದರ ಬಗ್ಗೆ ಕುತೂಹಲ, ಆಸಕ್ತಿ ತಾಳಿದವರ ಪಾಲಿಗೆ ಕೇವಲ ಒಂದು ದಿನದ ಕನಸಾಗಿ, ಸಂಭ್ರಮದ ನೆನಪಾಗಿ ಉಳಿಯುವುದೋ ಅಥವಾ ಅದು ನನಸಾಗುವ ಸಾಧ್ಯತೆಗಳನ್ನು ತನ್ನ ಒಡಲಿಲ್ಲಿ ಹೊತ್ತುಕೊಂಡಿದೆಯೋ ಎಂಬುದು. ಏಕೆಂದರೆ ಇಂತಹ ಆಸೆ ಹುಟ್ಟಿಸುವ 'ಈವೆಂಟ್'ಗಳು ಸ್ವಾತಂತ್ರ್ಯ ಹೋರಾಟದ ಕನಸುಗಳು ಭಗ್ನಗೊಳ್ಳಲಾರಂಭಿಸಿದ ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಕಣ್ಮುಂದೆಯೇ ಬಹಳ ನಡೆದುಹೋಗಿವೆ; ನಮ್ಮನ್ನು ನಿರಾಶೆ-ಹತಾಶೆಗಳಲ್ಲಿ ಮುಳುಗಿಸಿವೆ. ಇತ್ತೀಚಿನ ಈವೆಂಟ್ ಅಂದರೆ 'ಆಂ ಆದ್ಮಿ ಪಾರ್ಟಿ' ಎಂಬ ಭಗ್ನಗೊಂಡ ಕನಸು. ಇದೊಂದನ್ನೇ ಪರಿಶೀಲಿಸಿ ನೋಡಿದರೆ ನಮಗೆ ಗೊತ್ತಾಗುವುದು, ನಮ್ಮ ನಿರಾಶೆ-ಹತಾಶೆಗೆ ಕಾರಣವಾದದ್ದೆಂದರೆ, ಅದು ನಿಜವಾಗಿಯೂ ನಮ್ಮದಾಗದೆ ಅಥವಾ ನಮ್ಮದನ್ನಾಗಿ ಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡದೆ ನಮ್ಮದೆಂದು ಭಾವಿಸಿದ್ದು. ಇದು ನಮ್ಮ ಮಧ್ಯಮ ವರ್ಗದ ಸುಲಭ ಕನಸುಗಾರಿಕೆಯ ದುರಂತಗಳ್ಲೊಂದು

ಮೊನ್ನೆ ಸಮಾನ ಮನಸ್ಕರೇ ಆದ ಗೆಳೆಯರೊಬ್ಬರು ಕರೆ ಮಾಡಿ ನನಗೊಂದು ಪ್ರಶ್ನೆ ಕೇಳಿದರು. "ಈ ಬದನವಾಳು ಸತ್ಯಾಗ್ರಹ ಪ್ರಸನ್ನ ಅವರ ಸಂದರ್ಶನವೊಂದು ಈ ಭಾನುವಾರದ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆಯಲ್ಲಾ, ಅದರ ಜೊತೆಗಿರುವ ಪ್ರಸನ್ನ ಅವರ ಫೋಟೋ ನೋಡಿದಿರಾ? ಅವರ ಆ ಫೋಟೋ, ಆ ಭಂಗಿಗಳನ್ನು ನೋಡಿದರೆ ಇದೊಂದು ನೆಲಬಿಟ್ಟು ಮೇಲೇಳಲಾಗದ ಆಂದೋಲನ ಅಂತ ತಕ್ಷಣ ನಿಮಗೆ ಅನ್ನಿಸಿಬಿಡುವುದಿಲ್ಲವೇ?' ಅವರ ಮಾತುಗಳ ಹಿಂದಿದ್ದ ನೇರ ಪ್ರಶ್ನೆ: ಸುಸ್ಥಿರ ಬದುಕು ಅಂದರೆ, ಹ್ಯಾಪಮೋರೆಯನ್ನು ಸೃಷ್ಟಿಸುವ ವ್ರತನಿಷ್ಠ ಬಡತನದ ಬದುಕೆ? ನಿಜವಾಗಿ ಇವರ ಹಿಂದೆ ಹೋಗಬಯಸುವವರೆಷ್ಟು ಜನ? ಗಾಂಧಿಯಂತಹ ಗಾಂಧಿಯೇ ತಮ್ಮೆಲ್ಲ ಸಂದರ್ಭದ ಚಿತ್ರಗಳಲ್ಲೂ ಸುಖ-ನೆಮ್ಮದಿ-ಸ್ಫೂರ್ತಿಗಳನ್ನು ಸೂಸುತ್ತಿದ್ದರಲ್ಲವೇ? ಏನೇ ಆಗಲಿ, ಇಂದು ನಮಗೆ ಬೇಕಿರುವುದು, ಗಾಂಧಿ ಅಥವಾ ಮರಿ ಗಾಂಧಿಗಳ ಪುನರುತ್ಪಾದನೆಯಲ್ಲ. ಬದಲಿಗೆ, ಇಂದಿಗೆ ಬೇಕಾದ, ಇಂದಿಗೆ ಸಲ್ಲುವ ಗಾಂಧಿಯನ್ನು ಕಂಡುಕೊಳ್ಳುವುದು. ಅಂದರೆ ಮನುಷ್ಯ ಜಾಗದಲ್ಲಷ್ಟೇ ಅಲ್ಲದೆ ಕಾಲದಲ್ಲೂ ಬದುಕುತ್ತಾನೆಂದು ಅರಿತು ಅವನ ಸಾಮಾನ್ಯ ಆಸೆ-ಆಕಾಂಕೆಗಳನ್ನು ಮಾನ್ಯ ಮಾಡುವಂತಹ ಒಂದು ಮಧ್ಯಮ ಮಾರ್ಗವನ್ನು ಕಂಡುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆಂದಷ್ಟೇ ನಾನು ಹೇಳುವುದು.

ಅಂದ ಮಾತ್ರಕ್ಕೇ ನಾಯಕರೊಬ್ಬರ ಒಂದು ಫೋಟೋದಿಂದಲೇ ಅವರು ಎತ್ತಿ ಹಿಡಿಯುವ ಬದುಕಿನ ಮಾದರಿಯನ್ನು ತಿಳಿದುಬಿಡುಬಹುದೆಂದಲ್ಲ. ಆದರೆ ನನ್ನ ಗೆಳೆಯರ ಈ ಮಾತುಗಳು ನಾನು ಈ ಸುಸ್ಥಿರ ಬದುಕು ಎಂಬ ಶಬ್ದದ ಹಿಂದೆ ಬೀಳಲು ಪ್ರೇರೇಪಿಸಿತು. ಸುಸ್ಥಿರ ಅನ್ನುವುದು ಕನ್ನಡ ಜಾಯಮಾನದ ಅಥವಾ ಈ ನೆಲದ ಬದುಕಿನಿಂದ ಚಿಮ್ಮಿದ ಶಬ್ದವಲ್ಲ. ಹಾಗಾಗಿಯೇ ಅದು ನಮ್ಮ ಕಿವಿಗೆ ಬೀಳುವ ಪ್ರಕ್ರಿಯೆಯಲ್ಲೇ ತನ್ನ ಅಸ್ಪಷ್ಟತೆಯನ್ನು ಹುಟ್ಟಿಸಿಕೊಳ್ಳುತ್ತದೆ ಅದು ಬಂಡವಾಳಶಾಹಿ ಆರ್ಥಿಕತೆಯ ಮೀಟುಗೋಲಾದ 'ಅಭಿವೃದ್ಧಿ'ಯನ್ನು ಸುಶ್ರಾವ್ಯ ಶಬ್ದವಾಗಿ ಕೇಳಿಸುವಂತೆ ಮಾಡಲು ಅದಕ್ಕೆ ಪಕ್ಕವಾದ್ಯದಂತೆ ಜೋಡಿಸಿರುವ ಇಂಗ್ಲಿಷ್‌ನ **sustainable** ಎಂಬ ಶಬ್ದದ ಸ್ಥೂಲ ಕನ್ನಡಾನುವಾದ! ಆದರೆ 'ಅಭಿವೃದ್ಧಿ'ಗೆ ಜೋಡಿಯಾಗಿ ಚಲಾವಣೆಗೆ ಬಂದ ಈ ಶಬ್ದವನ್ನು ಈಗ ಬದುಕಿಗೂ ಜೋಡಿಸಿ ಸುಸ್ಥಿರ ಬದುಕು ಎಂಬ ಹೊಸ ಜೋಡಿ ಶಬ್ದವನ್ನು ಉತ್ಪಾದಿಸಲಾಗಿದ್ದು, ಅದನ್ನು ವಿವರಿಸಿ ಹೇಳುವ ಏದುಸಿರಿನ ಕೆಲಸ ಈಗ ನಡೆದಿದೆ! ಈ ಏದುಸಿರು ಎದ್ದು ಕಾಣುವುದು, ಅದರ ಯಂತ್ರವಿರೋಧಿ ಮಾತುಗಳ ವರಸೆಯಲ್ಲಿ. ಈ ಮಾತುಗಳನ್ನೆಲ್ಲ ಕೇಳಿದಾಗ ನನ್ನಲ್ಲೆದ್ದ ಪ್ರಶ್ನೆ: ಈ 'ಸುಸ್ಥಿರ ಬದುಕು' ಆಂದೋಲನವನ್ನು ರೂಪಿಸಲಾಗಿರುದು, ನಿಜವಾಗಿ ಅನ್ನ ತಿನ್ನುವ ಜನ ಸಾಮಾನ್ಯರಿಗಾಗಿ ಅಥವಾ ಇದು ಬರಿ ಕನಸು ಕಾಣುವುದರಲ್ಲೇ ಅರ್ಥ ಸತ್ತುಹೋಗಿರುವ ಮಧ್ಯಮ ವರ್ಗದ 'ಹೋರಾಟಗಾರ'ರ ಇನ್ನೊಂದು ಕನಸಿನಾಟಕ್ಕಾಗಿಯೋ? ಅಲ್ಲಾ. ರಂಭೆ-ಊರ್ವಶಿಯರು ದಂಡು ದಂಡಾಗಿ ಕಣ್ಣು ಹೊಡೆಯುತ್ತಾ ತಿರುಗಾಡುತ್ತಿರುವ ಸಂತೆಯಲ್ಲಿ ಬ್ರಹ್ಮಚರ್ಯದ ಧರ್ಮೋಪದೇಶ ಮಾಡುವ ಹುಚ್ಚು ಹತ್ತಿಸಿಕೊಂಡವರಿಗೆ ಏನು ಹೇಳುವುದು?



ಜನ ಅದು ತಮ್ಮ ಹಕ್ಕೆಂಬಂತೆ ಸುಖದ ಹುಡುಕಾಟದಲ್ಲಿದ್ದಾರೆ. ಇದು ಸದ್ಯದ ಸತ್ಯ. ಈ ಸತ್ಯವನ್ನು ಮುಖಾಮುಖಿಯಾಗಿಸಿಕೊಳ್ಳದೆ ಯಾವುದೇ ಧರ್ಮೋಪದೇಶದ ಪ್ರಯೋಗವೂ ಕೇವಲ ಒಂದು ಧರ್ಮ ಸಮ್ಮೇಳನವೆಂಬ 'ಸೈಡ್ ಷೋ' ಮಾತ್ರವಾಗಿ ಯಶಸ್ವಿಯೂ ಅನ್ನಿಸಿಕೊಳ್ಳಬಹುದು. ಆದುದರಿಂದ ಇಂದಿನ ಅಗತ್ಯ, ಜನರೇ ತಮ್ಮ ನಿಜ ಧರ್ಮವನ್ನು ಕಂಡುಕೊಳ್ಳುವ ಪಥದೆಡೆಗೆ ಅವರನ್ನು ಸಂಘಟಿಸುವುದು. ಅದು ಸ್ವರಾಜ್ಯದ ಪಥ. ಅದು ಮನುಷ್ಯ ತನ್ನನ್ನು ತಾನೇ ಆಳಿಕೊಳ್ಳುವ ವಿಧಾನಗಳನ್ನು ಕಂಡುಕೊಳ್ಳುವ ರೋಮಾಂಚನಕಾರಿ ಪ್ರಕ್ರಿಯೆ. ಸುಖದ ಹಕ್ಕು ಸ್ಥಾಪನೆಯ ಅಂದಾದುಂದಿಯಲ್ಲಿ ಹೆಚ್ಚಾಗಿ ತನ್ನ ಹೊರಕ್ಕೇ ಹರಿದುಹಂಚಿಹೋಗಿರುವ ಮನುಷ್ಯನನ್ನು ಅವನ ಸಮಗ್ರತೆಯಲ್ಲಿ ಪುನರ್ಸಂಘಟಿಸುವ ಕೆಲಸ. ಇದು ಜನ ತಮ್ಮ ಬೇರುಗಳನ್ನು ಹುಡುಕಿಕೊಂಡು ಸಮುದಾಯಗಳ ಒಕ್ಕೂಟವಾಗಿ ತಮ್ಮನ್ನು ಕಂಡುಕೊಂಡು, ತಮ್ಮ ಸಮುದಾಯದ ಭಾಗವಾಗಿ ತಮಗೆ ಯಾವುದು ಒಳ್ಳೆಯದು ಎಂದು ತಾವೇ ನಿರ್ಧರಿಸಿ ಪಡೆದುಕೊಳ್ಳುವ ಸ್ವಾತಂತ್ರ್ಯ ಸುಖದ ರುಚಿ ಹತ್ತಿಸುವ ಸಾವಯವ ಕೆಲಸ. ಇದು ಒಳಗಿಂದ ಮೂಡುವ ತನ್ನದೇ ಆಯ್ಕೆಗಳನ್ನು ಆಧರಿಸಿದ ಸಹಜ ಸುಸ್ಥಿರತೆ. ಅನ್ಯಾಕರ್ಷಣೆಗೆ ಅಥವಾ ಪ್ರಭಾವಕ್ಕೆ ಸಿಕ್ಕಿ ಅಸ್ಥಿರವಾಗುವಂತಹ ಕೃತಕ 'ರಚನೆ'ಯಲ್ಲ.


ನಾನಿನ್ನು ಹೆಚ್ಚು ಮಾತಾಡಿದರೆ ಅದು ಪ್ರಸನ್ನ ಅವರ ಈ ಸಾಹಸಕ್ಕೆ ನನ್ನ ವಿರೋಧವಿದೆ ಎಂಬ ಅರ್ಥ ಪ್ರಾಪ್ತವಾದೀತು. ಆದರೆ ಪ್ರಸನ್ನ ಯಾವ ಉದ್ದೇಶದಿಂದ ಈ ಆಂದೋಲನವನ್ನು ಆರಂಭಿಸಿದ್ದಾರೋ ಆ ಉದ್ದೇಶ ಅವರಿಗೇ ಇನ್ನಷ್ಟು ಸ್ಪಷ್ಟವಾಗಲು ಮತ್ತು ಅದೇ 'ಮೆಯಿನ್ ಷೋ' ಆಗಲು ಅದು ಮೊದಲು ಸ್ವರಾಜ್ಯ ಆಂದೋಲನವಾಗಿ ಪರಿವರ್ತಿತವಾಗಬೇಕು ಎಂದಷ್ಟೇ ನಾನು ಹೇಳುವುದು. ಅಂದರೆ ಈ ಸುಸ್ಥಿರ ಆಂದೋಲನ ಸಾವಯವವಾಗಿ ಮೂಡಬೇಕು. ಅದು ರಾಷ್ಟ್ರೀಯ-ಪಾಷ್ಟ್ರೀಯ ವೇಷಗಳನ್ನೆಲ್ಲ ಬಿಟ್ಟು ಸ್ಥಳಿಯವಾಗಬೇಕು ಅಂದರೆ ಅದು ನಿಜಾರ್ಥದಲ್ಲಿ ಪ್ರಜಾಪ್ರಭುತ್ವೀಕರಣಕ್ಕೆ ಒಳಗಾಗಿ, ಕನಸುಗಾರಿಕೆಯಲ್ಲಿ ಕಳೆದುಹೋಗದೆ ಜನರ ನಿಜ ಅನುಭವದ ಮೂಸೆಯಲ್ಲಿ ತನ್ನ ಆಕಾರಗಳನ್ನು ಪಡೆಯುತ್ತಾ ವಾಸ್ತವವಾದಿತ್ವವನ್ನು ಸಾಧಿಸಿಕೊಳ್ಳಬೇಕು. ಪ್ರಸನ್ನ, ಗಾಂಧಿ ಗಾಂಧಿ ಎಂದು ಎಷ್ಟೇ ಜಪ ಮಾಡಿದರೂ ಅವರು ತಮ್ಮ ಪೂರ್ವಾಶ್ರಮದ ಮೂಲ ಮಾರ್ಕ್ಸ್‌ವಾದಿ ಮನೋ ಎರಕದಿಂದ ಬಿಡಿಸಿಕೊಳ್ಳಲಾಗಿಲ್ಲ ಎಂದೇ ನನಗನ್ನಿಸುತ್ತಿದೆ.

ಇದೆಲ್ಲವೂ ಸುಸ್ಥಿರ ಬದುಕಿನ ಆಂದೋಲನದ ಸಂಘಟನೆ ಕುರಿತ ನನ್ನ ವೈಯಕ್ತಿಕ ನೋಟದ ಮಾತುಗಳೇ ಹೊರತು, ಅದನ್ನು ಈ ಕಾಲದ ಒಂದು ಮೂಲಸ್ಫೂರ್ತಿಯಾಗಿ ಯಾರೂ ವಿರೋಧಿಸಲಾರರು. ಹಾಗೆಂದೇ ಮುಂದಿನ ಪುಟಗಳ ಈ ಲೇಖನಗಳು. ಓದಿ, ಬರೆಯಿರಿ.

–ಸಂಪಾದಕ.

# ಸುಸ್ಥಿರ ಬದುಕು: ಏನು, ಏಕೆ, ಹೇಗೆ?

**–ಸುಘೋಷ್ ಕೌಲಗಿ**




ಕಳೆದ ಏಪ್ರಿಲ್ ಹತ್ತೊಂಬರಂದು ಬದನವಾಳಿನಲ್ಲಿ ಸುಸ್ಥಿರ ಬದುಕನ್ನು ರೂಪಿಸಲು ಅಗತ್ಯವಾದ ಶ್ರಮಸಹಿತ ಸರಳಬದುಕನ್ನು ಪ್ರಚುರಪಡಿಸುವ ಸಲುವಾಗಿ ರಾಷ್ಟ್ರೀಯ ಸಮಾವೇಶ ಜರುಗಿದೆ. ಈ ಸಂದರ್ಭದಲ್ಲಿ ಇಂದಿನ ನಮ್ಮ ಬದುಕು ಮತ್ತು ಅದರ ಸುಸ್ಥಿರತೆಗೆ ಸಂಬಂಧಿಸಿದಂತೆ ವಿಚಾರ ಮಾಡಬೇಕಾದ ಅಗತ್ಯ ಉಂಟಾಗಿದೆ.

ಮಾನವನ ಜೀವನ ನಿರ್ವಹಣೆಯು ಹಲವಾರು ರೀತಿಯ ಪದಾರ್ಥಗಳ ಲಭ್ಯತೆಯನ್ನು ಅವಲಂಬಿಸಿದೆ. ಹಸಿವು, ನೀರಡಿಕೆ ಮತ್ತು ನಿದ್ರೆಗಳು ಎಲ್ಲರಿಗೂ ಸಮಾನ್ಯ ಅವಶ್ಯಕತೆಗಳಾಗಿವೆ. ಅವುಗಳನ್ನು ಪೂರೈಸಿಕೊಳ್ಳಲು ಪ್ರತಿಯೊಬ್ಬನು ಏನಾದರೂ ಮಾಡಲೇ ಬೇಕಾಗುತ್ತದೆ. ಕೆಲವರು ನೇರವಾಗಿ ಆಹಾರದ ಉತ್ಪಾದನೆಯಲ್ಲಿ ತೊಡಗಿದರೆ, ಕೆಲವರು ಬೆಲೆ ತೆತ್ತು ಅವುಗಳನ್ನು ಪಡೆಯುತ್ತಾರೆ. ಆಹಾರ ಸಿಕ್ಕದೇ ಹೋದಾಗ ಅದರ ಗಳಿಕೆಯ ಚಿಂತೆ ಶುರುವಾಗುತ್ತದೆ. ಹೊಟ್ಟೆ ತುಂಬಿದ ಮೇಲೆ ಮಾತ್ರ ಮುಂದಿನ ಆಟ ನಡೆಯಲು ಸಾಧ್ಯ.

ಮಾನವನಿಗೆ ಆಹಾರದ ಕೊರತೆಯುಂಟಾಗಲು ಹಲವಾರು ಕಾರಣಗಳಿವೆ. ಉತ್ಪಾದನೆಯ ಪ್ರಮಾಣದಲ್ಲಿ ಕೊರತೆ ಮತ್ತು ಅಸಮರ್ಪಕ ಹಂಚಿಕೆ ಅಥವಾ ಆಹಾರವನ್ನು ಕೊಂಡುಕೊಳ್ಳಲು ಬೇಕಾದ ಹಣದ ಕೊರತೆ ಮುಂತಾದವು. ಇಂತಹ ಪರಿಸ್ಥಿತಿಯು ಆಗಾಗ ಉಂಟಾಗಬಹುದು. ಇದೇ ರೀತಿ ಇತರ ಜೀವನಾವಶ್ಯಕತೆಗಳಾದ ನೀರು, ಗಾಳಿ, ವಸತಿ, ವಸ್ತ್ರ, ಉರುವಲು ಮುಂತಾದ ಪದಾರ್ಥಗಳ ಅಲಭ್ಯತೆಯೂ ಜನರಲ್ಲಿ ಹೆಚ್ಚಿನ ಆತಂಕವನ್ನು ಉಂಟು ಮಾಡುತ್ತಿದೆ. ಈ ಅನಿಶ್ಚಿತ ಪರಿಸ್ಥಿತಿ ಉಂಟುಮಾಡುವ ಆತಂಕ ತುಂಬಿದ ಒತ್ತಡದ ಜೀವನವನ್ನು ನಿಭಾಯಿಸುವುದು ಯಾತನಾಮಯವಾಗಿರುತ್ತದೆ. ಅನ್ನ ಸಿಕ್ಕದೇ ಇರುವುದಕ್ಕಿಂತ ಅನ್ನ ಸಿಕ್ಕದೇ ಹೋಗಬಹುದೆನ್ನುವ ಚಿಂತೆಯೇ ಜನರನ್ನು ಹೆಚ್ಚು ಕಳವಳಕ್ಕೆ ಈಡುಮಾಡುತ್ತಿದೆ. ಅಂತಹ ಆತಂಕದ ಮುನ್ಸೂಚನೆಗಳು ಈಗ ಗೋಚರವಾಗುತ್ತಿವೆ. ಇಂತಹ ಪರಿಸ್ಥಿತಿಯನ್ನು ಸರಿದೂಗಿಸಲು ಉತ್ಪಾದಕರು ತಮ್ಮದೇ ಆದ ಉಪಾಯಗಳನ್ನು ಮಾಡುತ್ತಲೇ ಇದ್ದಾರೆ. ಹೆಚ್ಚು ಹೆಚ್ಚು ಆಹಾರ ಉತ್ಪಾದನೆ ಮಾಡಲು ನಿರಂತರ ಪ್ರಯತ್ನಗಳು ನಡೆಯುತ್ತಲೇ ಇವೆ. ಅದೇ ರೀತಿ ಬಳಕೆದಾರರೂ ಸಹ ಹೆಚ್ಚು ಹೆಚ್ಚು ಹಣ ಸಂಪಾದನೆಯ ವಿಧಾನಗಳ ಹುಡುಕಾಟದಲ್ಲಿ ತೊಡಗಿದ್ದಾರೆ. ಒಟ್ಟಿನಲ್ಲಿ ಉತ್ಪಾದಕ ಮತ್ತು ಬಳಕೆದಾರ ಇಬ್ಬರ ಪ್ರಯತ್ನವೂ ಆಹಾರ ಲಭ್ಯತೆಯನ್ನು ಖಾತ್ರಿಮಾಡಿಕೊಳ್ಳುವ ಹವಣಿಕೆಯಾಗಿದೆ. ಉತ್ಪಾದಕತೆಯನ್ನು ಹೆಚ್ಚಿಸಲು ಮನುಷ್ಯ ಹೆಚ್ಚು ಹೆಚ್ಚು ಶ್ರಮವನ್ನು ಪಡಬೇಕಾಗುತ್ತದೆ.

ಇಂತಹ ಶ್ರಮವನ್ನು ಕಡಿಮೆ ಮಾಡಿಕೊಳ್ಳುವ ಉಪಾಯವಾಗಿ ಮನುಷ್ಯನು ಯಂತ್ರಗಳನ್ನು ಆವಿಷ್ಕರಿಸಿದ್ದಾನೆ. ಅವು ಈಗ ಮುಂದುವರೆದು ಮನುಷ್ಯನ ಆಹಾರದ ನಂತರದ ಅಗತ್ಯಗಳನ್ನು ಪೂರೈಸುವ ನೆವದಲ್ಲಿ ಅಗತ್ಯ ಮೀರಿ ಬೆಳೆದು ಮನುಷ್ಯನ್ನೇ ತನ್ನ ಅಡಿಯಾಳನ್ನಾಗಿ ಮಾಡಿಕೊಂಡುಬಿಟ್ಟಿದೆ. ಈ ಯಂತ್ರಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅಗತ್ಯವಾದ ಸಂಪನ್ಮೂಲಗಳನ್ನು ಪರಿಸರದಿಂದ ಪಡೆಯುತ್ತಿದ್ದಾನೆ. ಶ್ರಮವನ್ನು ಕಡಿಮೆ ಮಾಡಿ ಹೆಚ್ಚು ಉತ್ಪಾದಿಸುವ ಯಂತ್ರನಾಗರೀಕತೆಯು ಕೇಂದ್ರೀಕೃತ ಅರ್ಥವ್ಯವಸ್ಥೆಯ ಬಂಡವಾಳಶಾಹಿ ವ್ಯವಸ್ಥೆಯನ್ನು ಹುಟ್ಟುಹಾಕಿ ಮನುಷ್ಯನು ಅನಿವಾರ್ಯವಾಗಿ ಎಲ್ಲವನ್ನೂ ಹಣದ ಮಾಪನದಲ್ಲಿ ಅಳೆಯುವ ಹೊಸ ಜೀವನ ಮೌಲ್ಯವನ್ನು ಹುಟ್ಟುಹಾಕಿದೆ. ಈ ಯಂತ್ರಗಳಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯವು ಭೂಮಿಯ ತಾಪಮಾನದ ಹೆಚ್ಚಳಕ್ಕೆ ಕಾರಣವಾಗಿ ಮನುಷ್ಯ ತನ್ನ ನೆಲೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿಯನ್ನು ತಲುಪುತ್ತಿದ್ದಾನೆ. ಇದಲ್ಲದೆ ಭೂಮಿಯಲ್ಲಿರುವ ಎಲ್ಲ ರೀತಿಯ ಸಂಪನ್ಮೂಲಗಳನ್ನೂ ಯದ್ವಾತದ್ವಾ ದೋಚುತ್ತಿದ್ದಾನೆ. ನಿಧಾನವಾಗಿ ಪರಿಸರದಿಂದ ದೂರವಾಗುತ್ತಿದ್ದಾನೆ. ಭೂಮಿಯ ಮೇಲಿನ ಎಲ್ಲಾ ವಸ್ತುಗಳೂ ತನ್ನ ಉಪಯೋಗಕ್ಕಾಗಿಯೇ ಇವೆ ಎಂದು ಭಾವಿಸುತ್ತಿದ್ದಾನೆ.



ತನ್ನ ದೈನಂದಿನ ಕೆಲಸಕಾರ್ಯಗಳಿಗೂ ಪೂರ್ವ ಯೋಜಿತವಾದ ಸೌಕರ್ಯಗಳನ್ನು ಬಯಸುತ್ತಿದ್ದಾನೆ. ಸಹಜವಾಗಿ ಒದಗಿ ಬರುವ ಸನ್ನಿವೇಶವನ್ನು ಖುಷಿಯಿಂದ ಸ್ವೀಕರಿಸಲಾಗದೆ ಮುಂಬರುವ ಸನ್ನಿವೇಶವನ್ನೂ ತಾನೇ ನಿರ್ದೇಶಿಸುವ ಮತ್ತು ಅದಕ್ಕಾಗಿ ಪೂರ್ವಸಿದ್ಧತೆ ಮಾಡಿಕೊಳ್ಳುವ ಪ್ರಯತ್ನವಾಗಿ ಯಂತ್ರಗಳ ಅವಲಂಬನೆಯು ಒಂದು ಗೀಳಾಗಿ ಪರಿಣಮಿಸಿದ್ದು. ಕೊನೆ ಕೊನೆಗೆ ತನ್ನ ಭಾವನಾತ್ಮಕ ಮತ್ತು ಮಾನಸಿಕ ಅಗತ್ಯಗಳಿಗೂ ಯಂತ್ರಗಳ ಮೊರೆಹೊಕ್ಕು ತಾನೂ ಒಬ್ಬ ಯಂತ್ರವಾಗಿ ಮಾರ್ಪಡುತ್ತಿದ್ದಾನೆ. ಒಟ್ಟಿನಲ್ಲಿ ಈಗಿನ ಮನುಷ್ಯನು ಭೋಗದಿಂದ ಕೂಡಿದ ಐಷಾರಾಮಿ ಜೀವನಶೈಲಿಯ ಆಕರ್ಷಣೆಗೆ ಒಳಗಾಗಿದ್ದಾನೆ. ಈ ರೀತಿಯ ಸುಲಭಸಿದ್ಧ ಜೀವನಶೈಲಿಗೆ ಅಪಾರವಾದ ಸಂಪನ್ಮೂಲಗಳು ಬೇಕಾಗುತ್ತವೆ. ಭೂಮಿಯ ಮೇಲಿನ ಎಲ್ಲ ಜನರೂ ಅದೇ ರೀತಿಯ ಜೀವನವನ್ನು ನಡೆಸುವುದಾದರೆ ಇಲ್ಲಿನ ಸಂಪನ್ಮೂಲಗಳು ಯಾವ ಮೂಲೆಗೂ ಸಾಲುವುದಿಲ್ಲ. ಒಂದಲ್ಲ ಒಂದು ದಿನ ಎಲ್ಲರೂ ಬರಗೆಟ್ಟು ಸಾಯಬೇಕಾಗುತ್ತದೆ.

ಹಾಗಿದ್ದರೆ ಇದಕ್ಕೆ ಸೂಕ್ತ ಪರಿಹಾರವೇನು? ಎಂಬ ಪ್ರಶ್ನೆಯು ನಮ್ಮನ್ನು ಕಾಡುತ್ತದೆ. ಇದಕ್ಕೆ ಉತ್ತರವಾಗಿ ಮನುಷ್ಯನು ಪುನಃ ಸ್ಥಳೀಯ, ಪರಿಸರ ಸ್ನೇಹಿ, ಸುಸ್ಥಿರ ವ್ಯವಸ್ಥೆಗೆ ಮರಳಬೇಕಾದ ಅಗತ್ಯ ಎದ್ದು ಕಾಣುತ್ತಿದೆ. ಇದು ನಮಗೆ ಹೊಸದೇನಲ್ಲ. ಭಾರತೀಯ ಜೀವನಶೈಲಿ ಯಾವತ್ತೂ ಸ್ಥಳೀಯ, ಸ್ವಾವಲಂಬಿ ಮತ್ತು ಪರಿಸರಸ್ನೇಹಿ ಉತ್ಪಾದಕತೆಯನ್ನು ಸಹಜವಾಗಿ ಅಭ್ಯಸಿಸುತ್ತಿತ್ತು. ನಮ್ಮ ನೆಲೆಯಾದ ಭೂಮಿಯನ್ನು ಶೋಷಿಸದೆ, ಪರಿಸರವನ್ನು ಹಾಳುಮಾಡದೆ, ಆಹಾರದ ಕೊರತೆಯ ಆತಂಕದಿಂದ ಮುಕ್ತವಾಗಿ, ನೈಸರ್ಗಿಕ ಸಂಪನ್ಮೂಲಗಳ ಮರು ಪೂರಣಕ್ಕೆ ಪ್ರಯತ್ನಿಸುತ್ತಾ, ಶರೀರ ಶ್ರಮದಿಂದ ಕೂಡಿದ, ಬದುಕಲು ಅಗತ್ಯವಲ್ಲದ ಯಂತ್ರಗಳು ಮತ್ತು ಕಲ್ಪಿತ ಸೌಕರ್ಯಗಳನ್ನು ಹಾಗು ಸಕ್ರಿಯವಲ್ಲದ ಮನರಂಜನೆಯನ್ನು ನಿರಾಕರಿಸುತ್ತಾ, ಕ್ರಿಯಾಶೀಲತೆಯಿಂದ ಬದುಕುವುದೇ ಉತ್ತರ. ಇದೇ ಸುಸ್ಥಿರ ಬದುಕು.

ಸುಸ್ಥಿರ ಬದುಕನ್ನು ಜಾರಿಗೊಳಿಸುವುದು ಹೇಗೆ ಎಂಬ ಆಲೋಚನೆಯು ಮೂಡಿದಾಗ ನಮ್ಮ ಮುಂದೆ ಅನೇಕ ಸವಾಲುಗಳು ಎದ್ದು ನಿಲ್ಲುತ್ತವೆ. ಸುಸ್ಥಿರ ಬದುಕಿನ ಮೊದಲ ಪಾಠವೇ ಶರೀರ ಶ್ರಮ. ಶರೀರ ಶ್ರಮ ಒಬ್ಬರಿಗೆ ಆದರ್ಶವಾದರೆ ಬಹಳಷ್ಟು ಜನರಿಗೆ ಅನಿವಾರ್ಯವಾಗಿದೆ. ಅವರು ಯಾವುದೋ ಆಲೋಚನೆಯಿಂದ ಪ್ರಭಾವಿತರಾಗಿ ಸ್ವಯಂಪ್ರೇರಿತವಾಗಿ ಶರೀರಶ್ರಮವನ್ನು ಮಾಡುತ್ತಿದ್ದಾರೆಂದು ಭಾವಿಸಲಾಗದು. ಅವರೂ ಕೂಡ ಬಂಡವಾಳಶಾಹಿ ವ್ಯವಸ್ಥೆಯ ಪ್ರಲೋಭನೆಗಳಿಗೆ ಒಳಗಾದವರೇ. ಅವರೂ ಪ್ರತಿಕ್ಷಣ ತಮ್ಮ ಶ್ರಮ ಆಧಾರಿತ ಬದುಕಿನಿಂದ ಸುಲಭ ಬದುಕಿನೆಡೆಗೆ ಸಾಗಲು ಸತತ ಪ್ರಯತ್ನ ಮಾಡುತ್ತಿರುವವರೇ. ಮನುಷ್ಯ ಭೋಗ ಜೀವಿ ಎಂಬುದು ಇದುವರೆಗಿನ ಸತ್ಯವಾಗಿದೆ. ಹೀಗಿದ್ದರೂ ಶ್ರಮಜೀವಿಗಳಿಗೆ ಈಗಿನ ವ್ಯವಸ್ಥೆಯ ಅರ್ಥಹೀನತೆಯನ್ನು ವಿವರಿಸಿ, ತನ್ಮೂಲಕ ಅವರ ಬದುಕಿನ ಶೈಲಿ ಆದರ್ಶಪ್ರಾಯವಾಗಿದ್ದು ಸುಸ್ಥಿರ ವ್ಯವಸ್ಥೆಗೆ ಹೆಚ್ಚು ಇಂಬು ನೀಡುತ್ತದೆ ಎಂಬುದನ್ನು ಮನಗಾಣಿಸಿ ಅವರು ಸ್ವಯಂ ಪ್ರೇರಣೆಯಿಂದ ಅದೇ ಬದುಕನ್ನು ಸಾಗಿಸುವಂತೆ ಮಾಡುವುದು ಸಾಧ್ಯವೇ? ಅವರ ತಮ್ಮ ಶ್ರಮ ಆಧಾರಿತ ಬದುಕನ್ನು ಘನತೆಯಿಂದ ಸ್ವೀಕರಿಸುವಂತೆ ಮಾಡಲು ಸಾಧ್ಯವೇ? ಶ್ರಮಕ್ಕೆ ಮತ್ತು ಶ್ರಮಜೀವಿಗಳಿಗೆ ಸಲ್ಲಬೇಕಾದ ಬೆಲೆ ಮತ್ತು ಗೌರವವನ್ನು ದೊರಕಿಸಿಕೊಡುವುದು ಹೇಗೆ? ಈಗಿನ ಸ್ಥಿತಿಯನ್ನು ಅವರ ಅನುಭವದ ಎಲ್ಲೆಯೊಳಗೆ ತರಲು ಅಥವಾ ವಿವರಿಸಲು ಸಾಧ್ಯವೇ?

ಅದರಲ್ಲೂ ಯುವಜನತೆಗೆ ಈಗಿನ ಬಂಡವಾಳಶಾಹಿ ವ್ಯವಸ್ಥೆಯ ಪ್ರಲೋಭನೆಗಳು ಎಷ್ಟು ಸಮಂಜಸವೆನ್ನಿಸುತ್ತಿವೆಯೆಂದರೆ, ಇಡೀ ಜೀವನದ ಕಾಣ್ಕೆಯನ್ನು ಕೇವಲ ಒಂದು ಜಾಹೀರಾತಿನೊಡನೆ ಸಮೀಕರಿಸಿಕೊಳ್ಳುವಷ್ಟು ಮಟ್ಟಿಗೆ ಅವರು ಮೌಲ್ಯರಹಿತರಾಗಿದ್ದಾರೆ. ಸ್ವೇಚ್ಛಾಚಾರವೆಂಬುದು ಇಂದಿನ ಮಂತ್ರವಾಗಿದೆ. ಅದೂ ಅಲ್ಲದೆ ಒಬ್ಬನ ಅನುಭವಕ್ಕೆ ಬರದ ಅರಿವನ್ನು ಅವನಿಗೆ ಮನಗಾಣಿಸುವುದು ಹೇಗೆ? ಮನುಷ್ಯನಿಗೆ ಸ್ವಂತ ಅನುಭವವಾದಾಗ ಮಾತ್ರ ತನ್ನ ಜೀವನಶೈಲಿಯಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತಾನೆಯೇ ಹೊರತು, ಬೇರೆಯವರ ಮಾತು ಮತ್ತು ಅನುಭವದಿಂದಲ್ಲ. ಹಾಗಿದ್ದಾಗ ಅವರನ್ನು

ಈ ಎಲ್ಲ ಸಂಗತಿಗಳಿಗೆ ಈಡು ಮಾಡುವುದು ಹೇಗೆ? ಇನ್ನೊಬ್ಬರಿಗೆ ಮಾತಿನ ಮೂಲಕ ಅನುಭವದ ಅರಿವು ಮೂಡಿಸಲು ಪ್ರಯತ್ನಿಸುವ ಅರ್ಥಹೀನ ಕೆಲಸ ಮತ್ತೊಂದಿಲ್ಲ. ಇನ್ನೊಬ್ಬರ ಆಚಾರ ಅಥವಾ ಜೀವನಶೈಲಿಗೆ ಬದಲಾವಣೆಯನ್ನು ಆರೋಪಿಸುವ ಅಧಿಕಾರ ಯಾರಿಗಿದೆ? ಅಂದುಕೊಂಡ ಬದಲಾವಣೆಯನ್ನು ಮೊದಲು ನನ್ನಲ್ಲಿ ತರಬೇಕಾಗುತ್ತದೆ. ವಿಚಾರಗಳನ್ನು ಆಚರಣೆಗೆ ತರುವುದರಿಂದ ಮಾತ್ರ ಇನ್ನೊಬ್ಬರನ್ನು ಪ್ರಭಾವಿಸಲು ಸಾಧ್ಯ.

ಸುಸ್ಥಿರ ಬದುಕನ್ನು ರೂಪಿಸಲು ಅಗತ್ಯವಾದ ಶ್ರಮವಿಕೇಂದ್ರಿತ ಜೀವನಶೈಲಿಯನ್ನು ನಾವು ಸರಳ ಜೀವನವೆನ್ನಬಹುದು. ಇಲ್ಲಿ ಮನುಷ್ಯನು ಜೀವನದ ಮಿತಿ ಮತ್ತು ಕ್ಷಣಿಕತೆಯನ್ನು ಮರೆಯದೆ, ಐಷಾರಾಮಿ ಜೀವನ ನೀಡುವ ಅಲ್ಪ ಖುಷಿಯನ್ನು ಮೀರಿದ ಹಾಗೂ ಒಂದು ಬೃಹತ್ ಕಾವ್ಯವನ್ನು ಓದಿದಾಗ ಲಭಿಸುವ ಆನಂದದ ರೀತಿಯ ಅನುಭೂತಿಯನ್ನು ಜೀವನದಲ್ಲಿ ಕಾಣುವ ಸ್ವಲ್ಪ ಆಧ್ಯಾತ್ಮಿಕ ಮನೋಭಾವವನ್ನು ರೂಢಿಸಿಕೊಳ್ಳುವ ಅಗತ್ಯವೂ ಇದೆ. 'ಕಡಿಮೆ ಹೊರೆ ಹೆಚ್ಚು ಆರಾಮ' ಎನ್ನುವಂತೆ, ಒಟ್ಟಿಗೆ ಶ್ರಮ ಪಡುವ ಬದಲು ಶ್ರಮವನ್ನು ಸಣ್ಣ ಸಣ್ಣ ಕಂತುಗಳಲ್ಲಿ ಆಗಾಗಲೇ ನಿರ್ವಹಿಸುವುದು, ತೀರಾ ಅಗತ್ಯವಲ್ಲದ ಯಂತ್ರಗಳು, ಸೌಕರ್ಯಗಳನ್ನು ನಿರಾಕರಿಸುವುದು ಮತ್ತು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳುವುದು ಮುಂತಾದವು ಸರಳ ಜೀವನದ ಉಪಕ್ರಮಗಳು. ಶ್ರಮ ವಿಭಜನೆಯ ಸರಳ ಜೀವನವನ್ನು ರೂಪಿಸಿಕೊಂಡಲ್ಲಿ ಶರೀರದ ಆರೋಗ್ಯ, ಮಾನಸಿಕ ಆರೋಗ್ಯ ಮತ್ತು ಪ್ರಕೃತಿಯ ಆರೋಗ್ಯ ಎಲ್ಲವೂ ಸುಧಾರಿಸುವುದಲ್ಲದೆ, ಜೀವನ ಹೆಚ್ಚು ಸುಸ್ಥಿರವಾಗುವುದರಲ್ಲಿ ಅನುಮಾನವಿಲ್ಲ.

**(ಇಂಗ್ಲಿಷ್ ಸಾಹಿತ್ಯ ಓದಿ, ಮೊದಲಿಗೆ ಕಾಲೇಜೊಂದರಲ್ಲಿ ಮೇಷ್ಟ್ರಾಗಿದ್ದ ಸುಘೋಷ್, ನಂತರ ಮೇಲುಕೋಟೆಯಲ್ಲಿನ ತಮ್ಮ ತಂದೆ ಸುರೇಂದ್ರ ಕೌಲಗಿಯವರ 'ಜನಪದ ಸೇವಾ ಟ್ರಸ್ಟ್'ನಲ್ಲಿ ಸರ್ವೋದಯದ ಚಟುವಟಿಗಳಲ್ಲಿ ತೊಡಗಿಕೊಂಡಿದ್ದವರು ಮಲೆನಾಡಿನ ಬದುಕು 'ಅನುಭವಿಸಲು' ಈಗ ಹೆಗ್ಗೋಡಿಗೆ ಬಂದು ನೆಲಸಿದ್ದಾರೆ)**


---

# ತಾಯವ್ವನ ಕತೆ ಮತ್ತು ಅದರ ಮುಂದೆ...

**–ಡಾ. ಸಂಜೀವ ಕುಲಕರ್ಣಿ**



**ಮೊ**ದಲು ಒಂದು ಕತೆ. ಕರುನಾಡು ಎಂಬ ನಾಡಿನಲ್ಲಿ ತಾಯವ್ವ ಅಂತೊಬ್ಬಳು ಇದ್ದಳು. ಪರೋಪಕಾರಿ ಜೀವ. ತಮ್ಮ ಎಲ್ಲ ಸಣ್ಣ ದೊಡ್ಡ ತೊಂದರೆಗಳಿಗೆ ಊರವರು ಧಾವಿಸುತ್ತಿದ್ದುದು ತಾಯವ್ವನ ಕಡೆಗೆ. ಒಮ್ಮೆ ಒಬ್ಬ ಹುಡುಗನಿಗೆ ಕಾಲಿಗೆ ಮುಳ್ಳು ಚುಚ್ಚಿ ಮನೆ ಹಾರುವಂತೆ ನೋವಾದಾಗ ಅವನನ್ನು ತಾಯವ್ವನ ಬಳಿ ತಂದರು. ತಾಯವ್ವ ಮುಳ್ಳು ತೆಗೆಯುವಾಗ ಅಕಸ್ಮಾತ್ತಾಗಿ ಸೂಜಿ ಅವಳ ಬೆರಳಿಗೇ ಚುಚ್ಚಿ ಒಂದು ಹನಿ ರಕ್ತ ಹುಡುಗನ ಮುಳ್ಳಿನ ಗಾಯದ ಮೇಲೆ ಬಿತ್ತು. ಮುಂದೆ ಒಂದು ಗಳಿಗೆಯಲ್ಲಿಯೇ ತಾಯವ್ವ ಮುಳ್ಳು ಹೊರತೆಗೆಯುವದಕ್ಕೂ ಹುಡುಗನ ಬಾಯಿ ಬಂದ್ ಆಗುವದಕ್ಕೂ ಸರಿ ಹೋಯಿತು. ತಾಯವ್ವನ ಮೈಯ ಒಂದು ಹನಿ ರಕ್ತ ಹುಡುಗನ ಮೈಯನ್ನು ಸ್ಪರ್ಶಿಸಿದ್ದಕ್ಕೇ ಹುಡುಗ ಗುಣಮುಖನಾದ ಎಂಬ ಮಾತು ಸಂಜೆಯ ತಂಗಾಳಿಯಂತೆ ಊರ ತುಂಬೆಲ್ಲ ಓಡಾಡಿ ಮರುದಿನ ಬೆಳಿಗ್ಗೆ ಕೋಳಿ ಕೂಗುವದರೊಳಗೆ ಚರ್ಮರೋಗದಿಂದ ಬಳಲುತ್ತಿದ್ದ ಒಬ್ಬ ಅಜ್ಜಿ ಬಂದು "ತಾಯವ್ವಾ, ಒಂದು ಹನಿ ರಗತ ನನ್ನ ಚರ್ಮಕ್ಕ ಹಚ್ಚಿ ನನ್ನ ರೋಗ ಗುಣ ಮಾಡು ನನ್ನ ಹಡದವ್ವ" ಎಂದು ಸೆರಗೊಡ್ಡಿದಳು. ಜೇನು ಹೃದಯದ ತಾಯವ್ವ ಸೂಜಿ ಚುಚ್ಚಿಕೊಂಡು ತನ್ನ ಮೈಯ ಒಂದು ಹನಿ ನೆತ್ತರನ್ನು ಅಜ್ಜಿಗೆ ಕೊಟ್ಟಳು. ಏನು ಅಚ್ಚರಿ ಅಜ್ಜಿಯ ಚರ್ಮರೋಗ ಮೂರು ದಿನದಲ್ಲಿ ಹುಲ್ಲ ಮೇಲಿನ ಇಬ್ಬನಿಯಂತೆ ಕರಗಿ ಮಾಯವಾಯಿತು! ಮುಂದೇನು ಕೇಳ್ತೀರಿ, ದಿನದಿಂದ ದಿನಕ್ಕೆ ಈ ಸುದ್ದಿಗೆ ಮಕ್ಕಳು ಮೊಮ್ಮಕ್ಕಳು ಹುಟ್ಟಿ ಅವು ಸುತ್ತಣ ಹತ್ತು ಹಳ್ಳಿಯ ಕಿವಿ ಹೊಕ್ಕು ಆ ಕಾಯಿಲೆ ಈ ಕಾಯಿಲೆ ನೂರೆಂಟು ಕಾಯಿಲೆಯ ಜನ ಬೆಲ್ಲಕ್ಕೆ ಇರುವೆಯಂತೆ ತಾಯವ್ವನ ಮನೆಗೆ ಮುತ್ತಿದರು. ನಾಡಿನ ಹೆಸರಾಂತ ವಿಜ್ಞಾನಿಗಳು ಬಂದು ಒಂದು ದೊಡ್ಡ ಸಿರಿಂಜ್ ತಯಾರಿಸಿ ತಾಯವ್ವನ ಶರೀರದಿಂದ ಸರಿಯಾಗಿ ರಕ್ತ ತೆಗೆಯುವ ವ್ಯವಸ್ಥೆ ಮಾಡಿದರು. ಈಗ ತಾಯವ್ವನ ಮನೆ ಮುಂದೆ ದಿನಾಲೂ ಜನಜಾತ್ರೆ. ನಾಡಿನ ನಾಲಿಗೆಯ ಮೇಲೆಲ್ಲ ತಾಯವ್ವನನ್ನು ಹೊಗಳಿ ಹಾಡ್ಯಸುವ ಹಾಡುಗಳ ಹಬ್ಬ. ಇತ್ತ ದಿನದಿಂದ ದಿನಕ್ಕೆ ತಾಯವ್ವ ಅಶಕ್ತಳಾಗುತ್ತ ಬಿಳಿಚಿಕೊಳ್ಳುತ್ತ ಸೊರಗುತ್ತ ಹಾಸಿಗೆ ಹಿಡಿದಳು. ಆದರೂ ಜನಜಾತ್ರೆ, ರಕ್ತ ಕೊಡುವದು ಮುಂದುವರಿಯಿತು. ಕೊನೆಗೊಂದು ದಿನ ವೈದ್ಯರು ಬಂದು ಮನೆ ಮುಂದೆ ಸೇರಿದ್ದ ಜನ ಜಂಗುಳಿಗೆ "ತಾಯವ್ವನ ಸ್ಥಿತಿ ಗಂಭೀರವಾಗಿದೆ, ಅವಳ ಮೈಯಲ್ಲಿ ಸ್ವಲ್ಪವೂ ರಕ್ತವಿಲ್ಲ, ಅವಳು ಬದುಕಿ ಉಳಿಯುವ ಸಾಧ್ಯತೆ ಕಡಿಮೆ, ವಾಪಸ್ ಹೋಗಿ" ಎಂದು ಹೇಳಿದರು. ಸೇರಿದ್ದ ಜನರಲ್ಲಿ ಪ್ರತಿಯೊಬ್ಬರ ಕೂಗೂ ಒಂದೇ "ಹಂಗ ಅನಬ್ಯಾಡರೀ, ತಾಯವ್ವ ಸಾಯೂದಿದ್ದರ ಸಾಯಲಿ ಆದರ ನಮಗೊಬ್ಬರಿಗೆ ಒಂದ್ ಹನಿ ರಕ್ತ ಕೊಟ್ಟು ಆಮ್ಯಾಲೆ ಬೇಕಿದ್ರ ಸಾಯಲಿ" ನಾವೆಲ್ಲಾ ಇಂದು ತಾಯವ್ವನ ಮನೆ ಮುಂದೆ ನಿಂತು ಹೀಗೆ ಕೂಗುತ್ತಿರುವ ಜನರೇ ಅಲ್ಲವೇ?



ಇಂದು ನಾವೆಲ್ಲ ಸಾಧಿಸಬಯಸುತ್ತಿರುವ ಪ್ರಗತಿಗೆ, ಹಂಬಲಿಸುತ್ತಿರುವ ಸುಖ ಸಂತೋಷಗಳಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಯುಎಸ್ಎ ಅಂದರೆ ಅಮೇರಿಕವೇ ಆದರ್ಶ. ಆದರೆ ಅಮೆರಿಕದಂಥ ಜೀವನಶೈಲಿ ಜಗತ್ತಿನ ಎಲ್ಲರಿಗೂ ಲಭ್ಯವಾಗಬೇಕಾದರೆ ನಮಗೆ ಐದು ಪೃಥ್ವಿಗಳು ಬೇಕು! ಇದಂತೂ ಸಾಧ್ಯವೇ ಇಲ್ಲದ ಮಾತು. ಹಾಗಾದರೆ ನಮಗೆ ಮುಂದಿನ ಹಾದಿ ಯಾವದು? ನಾವು ಸುಖ ಸಂತೋಷದ ಕನಸು ಕಾಣಬಾರದೇ? ಅದಕ್ಕಾಗಿ ನಾವು ಮಾಡುತ್ತಿರುವ ಪ್ರಯತ್ನಗಳೆಲ್ಲ ವ್ಯರ್ಥವೇ? ನಿಮ್ಮ ಈ ಪ್ರಶ್ನೆಗಳನ್ನೆಲ್ಲ ತುಸು ಹೊತ್ತು ನಿಮ್ಮ ಕಿಸೆಯೊಳಗೇ ಇಟ್ಟುಕೊಂಡು ಸ್ವಲ್ಪ ಇತ್ತ ಬಂದು ನೋಡಿ.

ಇಂದು ಅಭಿವೃದ್ಧಿಯ ಹೆಸರಿನಲ್ಲಿ ಪ್ರತಿ ಸೆಕೆಂಡಿಗೆ ಒಂದು ಫುಟ್ ಬಾಲ್ ಮೈದಾನದಷ್ಟು ವಿಸ್ತಾರದ ನಿತ್ಯ ಹರಿದ್ವರ್ಣ ಕಾಡು ಕಡಿಯಲಾಗುತ್ತಿದೆ. ದಿನಕ್ಕೆ ಐವತ್ತರಿಂದ ನೂರು ತರದ ಜೀವಿ ವೈವಿಧ್ಯಗಳು ಶಾಶ್ವತವಾಗಿ ನಿರ್ನಾಮವಾಗುತ್ತಿವೆ. ಗಂಗೆ ಯಮುನೆಯರ ನೀರು ಕುಡಿಯಲು ಅಲ್ಲ ಸ್ನಾನಕ್ಕೂ ಯೋಗ್ಯವಲ್ಲ ಎಂಬಂತಾಗಿದೆ. ಇವೆಲ್ಲ ದೂರದ ಮಾತು ಅಂದಿರಾ? ಹಾಗಾದರೆ ಬನ್ನಿ ನಮ್ಮ ಸಿರಿಗಂಧದ ಕರುನಾಡಿಗೆ. ಇಡೀ ಉತ್ತರ ಕರ್ನಾಟಕವೇ ಒಂದು ದೊಡ್ಡ ಮರುಭೂಮಿಯಾಗುತ್ತಿದೆ; ಬಯಲುಸೀಮೆಯ ಹಳ್ಳಿಗಳಲ್ಲಿ ಈಗ ಶಾಶ್ವತ ಬರದ ಪರಿಸ್ಥಿತಿ; ಪ್ರತಿವರ್ಷ ಬೇಸಿಗೆಯಲ್ಲಿ ಟ್ಯಾಂಕರ್‌ನಿಂದ ನೀರು ಪೂರೈಕೆ. ಇದು ಹಳ್ಳಿಗಳ ಮಾತಾದರೆ ನಮ್ಮ ರಾಜಧಾನಿ ಉದ್ಯಾನ ನಗರಿ ಬೆಂಗಳೂರಿನ ಹೆಗ್ಗಳಿಕೆ ಏನು ಗೊತ್ತೇ? ಇಂದು ಜಗತಿನ ಅತ್ಯಂತ ಹೆಚ್ಚು ಕಲುಷಿತ ಇಪ್ಪತ್ತು ಮಹಾನಗರಗಳಲ್ಲಿ ಬೆಂಗಳೂರೂ ಒಂದು! ಬೆಂಗಳೂರಿನ ಮೂವತ್ತು ಶೇಕಡಾ ಮಕ್ಕಳು ವರ್ಷವಿಡೀ ಉಸಿರಾಟದ ಕಾಯಿಲೆಗಳಿಂದ ಬಳಲುತ್ತಾರೆ. ಈ ಅಭಿವೃದ್ಧಿ ಮಾದರಿಯ ಕೆಲವು ಮುಖ್ಯ ಗುಣಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

೧ ಹೊಟ್ಟೆಬಾಕ ಕೊಳ್ಳುಬಾಕ ಜೀವನಶೈಲಿ – ನಗರಗಳಲ್ಲಿ ಮಾಲ್‌ಗಳ ಉದ್ಭವಕ್ಕೆ ಇದುವೇ ಅಡಿಪಾಯ

೨. ಮಿತಿಯಿಲ್ಲದ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಗಣಿಧಣಿಗಳ ಸಾಧನೆಯೇ ನಿದರ್ಶನ

೩. ಅನಿಯಂತ್ರಿತ ಪರಿಸರ ಮಾಲಿನ್ಯ : ಆಸ್ಟ್ರೇಲಿಯಾ ಖಂಡದಷ್ಟು ದೊಡ್ಡ ವಿಸ್ತೀರ್ಣದ ಪ್ಲಾಸ್ಟಿಕ್ ಕಸ ಇಂದು ಶಾಂತ ಮಹಾಸಾಗರದಲ್ಲಿ ತೇಲುತ್ತಿದೆ

೪. ಕೆಲವೇ ಕೆಲವರ ಬಳಿ ಬಹಳಷ್ಟು ಆಸ್ತಿ ಮತ್ತು ಸೌಲಭ್ಯಗಳ ಸಂಗ್ರಹ: ಅಂಬಾ/ಅದಾ ನಿಗಳ ನಾಡಗಲದ ಉದ್ಯಮಗಳ, ಮುಗಿಲೆತ್ತರದ ಮನೆಗಳ ಕತೆ ನಿಮಗೆ ಗೊತ್ತು ತಾನೇ.

೫. ತಾಳಿಕೆಯಿಲ್ಲದ, ರಿಪೇರಿಯ ಅವಕಾಶವೇ ಇಲ್ಲದ, ಮತ್ತೆ ಮತ್ತೆ ಹೊಸತು ಎಂಬುದರ ಮಂಜಿನೊಳಗೆ 'ಕೊಳ್ಳು ಬಳಸು ಬಿಸಾಕು' ಮನೋವೃತ್ತಿಗೆ ಪ್ರೋತ್ಸಾಹ : ನಿಮ್ಮ ಕಿಸೆಯಲ್ಲಿರುವ ಪೆನ್ ಒಮ್ಮೆ ನೋಡಿಕೊಳ್ಳಿ.

೬ ಲಾಭವೇ ಅಂತಿಮ ಗುರಿ–ಅದಕ್ಕಾಗಿ ಹೊಸ ಹೊಸ ರೀತಿಯ ಹೊಸ ಹೊಸ ಮಾರುಕಟ್ಟೆಗಳ ನಿರ್ಮಾಣ–ರಿಲಯನ್ಸ್ ಬಿಗ್ ಬಜಾರ್ ಹಿಂದಿಕ್ಕಿ ಬರಲಿದೆ ವಾಲ್ ಮಾರ್ಟ್ ಸರಪಳಿ.

೭. ಮಹಿಳೆ ಮಕ್ಕಳು ಪರಿಸರ ಸಂಸ್ಕೃತಿ ಎಲ್ಲವನ್ನೂ ಪ್ರಚಾರದ ಸಾಧನವಾಗಿ ಬಳಸುವದು: ಐ ಪಿ ಎಲ್ ನಲ್ಲಿ ಕುಣಿಯುವ ಯುವತಿಯರು; ಗಂಡಸರು ಗಡ್ಡ ಬೋಳಿಸಲು ಬಳಸುವ ಸಲಿಕೆಯ ಪ್ರಚಾರದಲ್ಲೂ ಮಹಿಳೆ

೮. ಒಳ್ಳೆಯದನ್ನೇ ಪುರಸ್ಕರಿಸುತ್ತೇವೆ ಎಂದು ಹೇಳುತ್ತಲೇ ಕೆಟ್ಟದನ್ನು ಪ್ರೋತ್ಸಾಹಿಸುವದು: ಲಾಂಗು ಮಚ್ಚು, ನಾಯಕ ಖಳನಾಯಕ ಸಿನೆಮಾಗಳು

೯. ತನ್ನ ಲಾಭ ತನ್ನ ರಕ್ಷಣೆಗಾಗಿ ತನಗೆ ಸರಿಯೆನಿಸಿದ ರೀತಿಯಲ್ಲಿ ರಾಜಕೀಯ ಮತಧರ್ಮ ಶಿಕ್ಷಣ ಇತಿಹಾಸ ವಿಜ್ಞಾನಗಳನ್ನು ಅರ್ಥೈಸುವದು ಮತ್ತು ಬಳಸುವದು. ಪೇಟೆಂಟ್ ಕಾನೂನುಗಳು ; ಹೈಬ್ರಿಡ್ ಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕಯುಕ್ತ ಆಧುನಿಕ ಕೃಷಿ

೧೦. ತಾನು ಮಾಡುತ್ತಿರುವದೇ ಸರಿ ಎಂಬುದಕ್ಕೆ ಹಲವು ತಂತ್ರಗಳ ಮೂಲಕ ಜನಮಾನಸದಲ್ಲಿ ಒಪ್ಪಿಗೆಯನ್ನು ಸೃಷ್ಟಿಸುವದು. ಭಾರತ ಹೊಳೆಯುತ್ತಿದೆ ಜಾಹೀರಾತು ; ಭೂ ಸ್ವಾಧೀನ ಕಾಯದೆ

೧೧. ತನ್ನ ಹಾಡಿಗೆ, ತನ್ನ ಹಾದಿಗೆ ಅಡ್ಡ ಬಂದವರನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮುಗಿಸುವದು : ಚಿಲಿ ದೇಶದ ಅಲೆಂಡೆ ಮತ್ತು ನಮ್ಮದೇ ದೇಶದ ನರೇಂದ್ರ ದಾಬೋಲ್ಕರ್ ಹಾಗೂ ಗೋವಿಂದ ಪನ್ಸಾರೆ ಅವರನ್ನು ನೆನಪಿಸಿಕೊಳ್ಳಿ.

. ಸಾಕು ಸದ್ಯಕ್ಕೆ ಈ ಪಟ್ಟಿಯನ್ನು ಇಲ್ಲಿಗೆ ನಿಲ್ಲಿಸೋಣ. ಮುಖ್ಯ ಪ್ರಶ್ನೆಯೆಂದರೆ ಹಳ್ಳಿಯಿಂದ ದಿಲ್ಲಿಯವರೆಗೆ, ದಿಲ್ಲಿಯಿಂದ ನ್ಯುಯಾರ್ಕ್‌ವರೆಗೆ ಸಂಭ್ರಮ ಸಡಗರಗಳೊಂದಿಗೆ ನಡೆಯುತ್ತಿರುವ ಈ ಅಭಿವೃದ್ಧಿಯ ಆಟದಲ್ಲಿ ನಾನು ನೀವು ಯಾವ ತಂಡದ ಪರವಾಗಿ ಆಡುತ್ತಿದ್ದೇವೆ ಎಂಬುದು; ನಮ್ಮ ನಮ್ಮ ರೊಟ್ಟಿ ಅಥವಾ ಕೇಕ್ ಅನ್ನು ಹೇಗೆ ಬೇಯಿಸಿಕೊಳ್ಳುತ್ತಿದ್ದೇವೆ ಎಂಬುದು. ಸ್ವಲ್ಪ ಒಳಗೆ ಹೊಕ್ಕು ವಿಶ್ಲೇಷಣೆ ಮಾಡಿದರೂ ಸಾಕು ಇದೊಂದು ಆಟವಲ್ಲ ಸುಳಿ ಎಂಬ ಸತ್ಯ ನಮಗೆ ಸರಳವಾಗಿ ಅರ್ಥವಾಗಿ ಬಿಡುತ್ತದೆ. ಈ ಆಟ–ಸುಳಿಯಲ್ಲಿ ನಾವು ಪ್ರತಿಯೊಬ್ಬರೂ ಈ ಗಳಿಗೆ ಗೆದ್ದರೆ ಮುಂದಿನ ಗಳಿಗೆ ಸೋಲುತ್ತೇವೆ; ಇಂದು ಎದ್ದರೆ ನಾಳೆ ಮುಳುಗುತ್ತೇವೆ; ವರ್ಷದಿಂದ ವರ್ಷಕ್ಕೆ ಮುಳುಗುತ್ತಲೇ ಹೋಗುತ್ತೇವೆ . ಹಾಗಾದರೆ ಮುಂದಿನ ದಾರಿ ಯಾವುದಯ್ಯ? ಈ ಪ್ರಶ್ನೆಯನ್ನು ನಮಗೆ ನಾವೇ ಹೇಗೆ ಕೇಳಿಕೊಳ್ಳುತ್ತೇವೆಯೋ ಹಾಗೆ ಉತ್ತರ ಸಿಗುತ್ತದೆ. ಎಷ್ಟು ನೋವಿನಿಂದ ಎಷ್ಟು ಪ್ರಾಮಾಣಿಕವಾಗಿ ಎಷ್ಟು ಛಲದಿಂದ ಎಷ್ಟು ಪ್ರೀತಿಯಿಂದ ಎಷ್ಟು ಸಾತತ್ಯದಿಂದ ಎಷ್ಟು ಆಳವಾಗಿ ಕೇಳಿಕೊಳ್ಳುತ್ತೇವೆಯೋ ಅಷ್ಟು ಸಮರ್ಪಕವಾದ ಸಮಗ್ರವಾದ ಉತ್ತರ ಸಿಗುತ್ತದೆ. ಇಂದು ಜಗತ್ತಿನಾದ್ಯಂತ ಜನರು ಇಂತಹದೊಂದು ಉತ್ತರವನ್ನು ಕಂಡುಕೊಳ್ಳುವ ಮತ್ತು ಆ ಉತ್ತರವನ್ನು ಸಂತೋಷದಿಂದ ಬಾಳುವ ಪ್ರಯತ್ನದಲ್ಲಿದ್ದಾರೆ. ಈ ಉತ್ತರದ ಹೆಸರು ಸುಸ್ಥಿರ ಬದುಕು..

**( ೨೫ ವರ್ಷಗಳ ಕಾಲ ಹೆರಿಗೆ ಮತ್ತು ಸ್ತ್ರೀರೋಗ ಆರೋಗ್ಯ ಕ್ಷೇತ್ರದಲ್ಲಿ ವೃತ್ತಿ ನಿರ್ವಹಿಸಿದ ಸಂಜೀವ ಕುಲಕರ್ಣಿಯವರು ಈಗ ಕಾಡುತೋಟದಲ್ಲಿ ಸಾವಯವ ಕೃಷಿಯಲ್ಲಿ ತೊಡಗಿದ್ದು, ಧಾರವಾಡದ ಬಾಲ ಬಳಗ ಮಾದರಿ ಶಾಲೆಯ ಕಾರ್ಯಾಧ್ಯಕ್ಷರೂ ಆಗಿದ್ದಾರೆ. ಧ್ಯಾನ, ಪರಿಸರ ಶಿಕ್ಷಣ ಮತ್ತು ಒಕ್ಕಲು ಬದುಕು ಇವರ ಸದ್ಯದ ಆಸಕ್ತಿಯ ಕ್ಷೇತ್ರಗಳು)**

# ಸುಸ್ಥಿರ ಬದುಕಿನ ರಾಷ್ಟ್ರೀಯ ಸಮಾವೇಶ : ಎಲ್ಲರನ್ನೂ ಒಳಗೊಳ್ಳುವ ಆಶಯ



**ಬದನವಾಳು ಘೋಷಣೆ**

**ಅಭಿವೃದ್ಧಿ ಎಂಬ ಪದದ ಅರ್ಥವನ್ನು ಸೀಮಿತಗೊಳಿಸಲಾಗಿದೆ ಹಾಗೂ ವಿರೂಪಗೊಳಿಸಲಾಗಿದೆ. ಕೇವಲ ಕೈಗಾರಿಕಾಭಿವೃದ್ಧಿ, ಕೇವಲ ಮಾರುಕಟ್ಟೆಗಳ ಅಭಿವೃದ್ಧಿ ಅಥವಾ ಕೇವಲ ಆರ್ಥಿಕ ಲಾಭದ ವೃದ್ಧಿ ಮಾತ್ರವೇ ಅಭಿವೃದ್ಧಿಯೆಂದು, ಸರಕಾರಗಳು, ರಾಜಕೀಯ ಪಕ್ಷಗಳು ಹಾಗೂ ಅಧಿಕಾರಿಗಳು ತಿಳಿದಿದ್ದಾರೆ. ಜಿ.ಡಿ.ಪಿ ಎಂಬ ಸೀಮಿತ ಲೆಕ್ಕಾಚಾರವು ಮಾನವ ಅಭಿವೃದ್ಧಿಯ ಸಮಗ್ರ ಸೂಚ್ಯಂಕ ಖಂಡಿತಾ ಅಲ್ಲ. ಜನರ ಸಂತಸ ಹಾಗೂ ಜೀವಿಗಳ ನೆಮ್ಮದಿಯು ಅಭಿವೃದ್ಧಿಯ ಮಾನದಂಡವಾಗಿದೆ. ಸಮಾಜದ ಸುಸ್ಥಿರತೆ ಹಾಗೂ ಸಂಸ್ಕೃತಿಗಳ ಮುಂದುವರಿಕೆ ಅಭಿವೃದ್ಧಿಯ ಮಾನದಂಡವಾಗಿದೆ. ದನಕಾಯುವ ಹುಡುಗ ಹಾಗೂ ನೂಲು ಸುತ್ತುವ ಹುಡುಗಿ ಕೂಡ ಅಭಿವೃದ್ಧಿಯ ಹರಿಕಾರರೆಂದು ಮಾನ್ಯಮಾಡಬೇಕು, ಸಮಾನತೆ ಹಾಗೂ ಸಹಕಾರ ತತ್ವಗಳನ್ನು ಪೋಷಿಸುವ ಆರ್ಥಿಕತೆ ಮಾತ್ರವೇ ಅಭಿವೃದ್ಧಿಪರ ಆರ್ಥಿಕತೆ ಎಂದು ಮಾನ್ಯಮಾಡಬೇಕೆಂದು ಬದನವಾಳು ಸತ್ಯಾಗ್ರಹವು ಆಗ್ರಹಿಸುತ್ತದೆ.**

**ಗಾ**ಂಧೀಜಿ ಬೇಟಿ ನೀಡಿದ್ದ ಖಾದಿ ಕ್ಷೇತ್ರ, ಮೈಸೂರು ಜಿಲ್ಲೆಯ ಬದನವಾಳುವಿನಲ್ಲಿ ಕಳೆದ ಏಪ್ರಿಲ್ ೧೯ರಂದು ವಿವಿಧ ಜನಪರ ಸಂಟನೆಗಳ ಕಾರ್ಯಕರ್ತರು, ಸಮಾನ ಮನಸ್ಕರು ಮತ್ತು ಜನಸಾಮಾನ್ಯರನ್ನೊಳಗೊಂಡ ಸುಮಾರು ಐದು ಸಾವಿರ ಜನರ ಸಮ್ಮುಖದಲ್ಲಿ 'ಸುಸ್ಥಿರ ಬದುಕು' ಕುರಿತ ರಾಷ್ಟ್ರೀಯ ಸಮಾವೇಶ ಯಶಸ್ವಿಯಾಗಿ ಜರುಗಿತು. 'ಸುಸ್ಥಿರ ಬದುಕಿನ ಹಲವು ನೆಲೆಗಳನ್ನು ಕಂಡುಕೊಳ್ಳುವ ಚರ್ಚೆಗಳನ್ನೊಳಗೊಂಡಿದ್ದ ಪಂಚಾಯ್ತಿಗಳು ಸೇರಿದಂತೆ ಅಂದು ನಡೆದ ಹಲವು ಕಾರ್ಯಕಲಾಪಗಳಲ್ಲದೆ, ಸಮಾವೇಶಕ್ಕೆ ಒಂದು ತಾತ್ವಿಕ ದೃಷ್ಟಿಕೇಂದ್ರವನ್ನು ಒದಗಿಸುವ ಮತ್ತು ಸುಸ್ಥಿರ ಬದುಕಿನ ಆಂದೋಲನದ ಭವಿಷ್ಯದ ನಡೆಗಳನ್ನು ಸೂಚಿಸಿದ ಕೆಲ ಮುಖ್ಯ ನಡಾವಳಿಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ:

ಏಪ್ರಿಲ್, ೧೪, ಅಂಬೇಡ್ಕರ್ ಜಯಂತಿಯಂದು ಬದನವಾಳುವಿಗೆ ಆಗಮಿಸಿದ ಮೇಧಾ ಪಾಟ್ಕರ್ ಮತ್ತು ಸುತ್ತೂರು ಶ್ರೀಗಳು ಸಾಮಾಜಿಕ ಸಾಮರಸ್ಯ ಸುಸ್ಥಿರ ಬದುಕಿಗೆ ಹೇಗೆ ಪೂರಕ ಎಂಬುದನ್ನು ವಿವರಿಸಿದರು.

ಏಪ್ರಿಲ್ ೧೮ರಂದು ನಡೆದ ಹಿರಿಯರ ಸಭೆಯಲ್ಲಿ, ಹೆಚ್.ಎಸ್. ದೊರೆಸ್ವಾಮಿ, ಸುರೇಂದ್ರ ಕೌಲಗಿ, ನಾ. ಡಿಸೋಜ, ಶ್ರೀಮತಿ ಉಜ್ರಮ್ಮ, ಎಲ್. ಎಸ್. ಶೇಷಗಿರಿರಾವ್, ಪ್ರೊ. ಜಿ. ವೆಂಕಟಸುಬ್ಬಯ್ಯ, ಕೊ. ಚೆನ್ನಬಸಪ್ಪ, ಎಲ್ಲಪ್ಪರೆಡ್ಡಿ, ದೇವನೂರ ಮಹದೇವ, ಡಾ. ಎಂ. ಚಿದಾನಂದ ಮೂರ್ತಿ–ಹೀಗೆ ನಾಡಿನ ಮೂವತ್ತಕ್ಕೂ ಹೆಚ್ಚು ಹಿರಿಯರು ಚರ್ಚಿಸಿ ಸಹಿ ಮಾಡಿದ 'ಬದನವಾಳು ಘೋಷಣೆ'ಯನ್ನು ಅನುಮೋದಿಸಿ ಈ ಸಭೆಯಲ್ಲಿ ಬಿಡುಗಡೆ ಮಾಡಲಾಯಿತು.

ಸ್ವಯಂ ಪ್ರೇರಣೆಯಿಂದ ಈ ಸಭೆಗೆ ಬಂದಿದ್ದ ಶಾಸಕ. ಸಿ.ಟಿ.ರವಿಯವರು ಈ ಹಿರಿಯರು ಪ್ರಧಾನಿ ಮೋದಿಯವರ ಅಭಿವೃದ್ಧಿ ಮಾದರಿಯನ್ನು ಟೀಕಿಸಿದ್ದನ್ನು ಒಪ್ಪದೆ, ಈ ಸಮಾವೇಶ ಕೇವಲ ಸೈದ್ಧಾಂತಿಕವಾಗಿ ಉಳಿದರೆ ಸಾಲದೆಂದೂ, ಈ ಕೋಣೆಯ ಹೊರಗೆ ಇರುವ ದೊಡ್ಡ ಜನ ಸಮೂಹ, ಚರ್ಚಿಸಲಾಗುತ್ತಿರುವ ಈ ಸುಸ್ಥಿರ ಬದುಕಿನ ಆಶಯವನ್ನೆ ಒಂದು ಹಿನ್ನಡೆ ಎಂದು ಭಾವಿಸುತ್ತಾರೆಂದೂ, ಅವರನ್ನು ಒಳಗೊಳ್ಳಬೇಕಾದ ಕರ್ತವ್ಯ ಸರ್ಕಾರಕ್ಕಿದೆ ಎಂದು ಹೇಳಿದರು. ಐ.ಎ.ಎಸ್. ಅಧಿಕಾರಿ ಮದನ್‌ಗೋಪಾಲ್, ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ, ಸಿ.ಟಿ.ರವಿ ಸಮಾವೇಶದಲ್ಲಿ ಪಾಲ್ಗೊಂಡ ಬಗ್ಗೆ ಕೆಲವು ಕಾರ್ಯಕರ್ತರು ಪ್ರಸನ್ನ ಅವರನ್ನು ತರಾಟೆಗೆ ತೆಗೆದುಕೊಂಡರು. ಬದಲಾವಣೆ ಬಯಸುವ ಎಲ್ಲರಿಗೂ ಈ ಚಳುವಳಿ ಅವಕಾಶ ಮಾಡಿಕೊಟ್ಟಿದೆ, ಉದ್ದೇಶಪೂರ್ವಕವಾಗಿ ಕೆಲವರನ್ನು ಹೊರಗಿಡುವುದು ಚಳುವಳಿಯ ಉದ್ದೇಶವಲ್ಲ. ಎಲ್ಲರನ್ನು ಒಳಗೊಂಡರೂ ನಮ್ಮನ್ನು ನಾವು ಕಳೆದುಕೊಳ್ಳದೆ ಉಳಿದುಕೊಳ್ಳುವುದು ಚಳುವಳಿಯ ಉದ್ದೇಶ ಎಂದು ಪ್ರಸನ್ನ ಎಲ್ಲರನ್ನೂ ಸಮಾಧಾನಪಡಿಸಿದರು.

**–ಜಿ.ಎಸ್. ಜಯದೇವ**

# ತಳವರ್ಗಗಳ ಬದುಕುವ ಹಕ್ಕೂ, ಸುಸ್ಥಿರ ಅಭಿವೃದ್ಧಿಯೂ...

–ಎಂ.ಜಿ. ದೇವಸಹಾಯಂ



೯ನೇ ಜೂನ್ ೨೦೧೪ರಂದು ರಾಷ್ಟ್ರಪತಿಗಳು ಸದನವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿಯವರ ಆಡಳಿತ ಕಾರ್ಯಸೂಚಿಯನ್ನು ಹೀಗೆ ಅನಾವರಣಗೊಳಿಸಿದರು: "ನನ್ನ ಸರ್ಕಾರ ಬಡವರಿಗಾಗಿಯೇ ಮೀಸಲು. ನನ್ನ ಸರ್ಕಾರವು ಕೇವಲ ಬಡತನವನ್ನು ತಗ್ಗಿಸುವುದಷ್ಟಕ್ಕೇ ತೃಪ್ತಿಪಡದೇ ಭಾರತದಲ್ಲಿ ಬಡತನ ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿದೆ. ಅಭಿವೃದ್ಧಿಯ ಮೇಲಿನ ಮೊದಲ ಹಕ್ಕು ಬಡವರದ್ದು ಎಂಬ ದೃಢ ನಂಬಿಕೆಯೊಂದಿಗೆ ಸರ್ಕಾರವು, ಯಾರಿಗೆ ಅತ್ಯಂತ ತುರ್ತಾಗಿ ಮೂಲಭೂತ ಅವಶ್ಯಕತೆಗಳ ಅಗತ್ಯವಿದೆಯೋ ಅವರೆಡೆಗೆ ತನ್ನೆಲ್ಲ ಗಮನವನ್ನು ಕೇಂದ್ರೀಕರಿಸುತ್ತದೆ."

ಆದರೆ, ಬಡವರ ಪರ 'ಅಭಿವೃದ್ಧಿ'ಗೊಂದು ಅರ್ಥವಿರಬೇಕೆಂದರೆ, ಅದಕ್ಕೆ ಸುಸ್ಥಿರತೆ ಇರಬೇಕಾಗುತ್ತದೆ. ಏಕೆಂದರೆ, ಜೀವನಾಧಾರ ವ್ಯವಸ್ಥೆಗೆ ಪುನರ್ನವೀಕರಿಸಬಹುದಾದ ಸಂಪನ್ಮೂಲಗಳನ್ನು ಬಿಟ್ಟು ಬೇರಾವ ಸಂಪನ್ಮೂಲಗಳನ್ನೂ ಬಳಸದೇ, ಜೀವನಕ್ಕೆ ಅಗತ್ಯವಾದ ಚಟುವಟಿಕೆಗಳನ್ನು ಎಷ್ಟು ಕಾಲ ಬೇಕಾದರೂ ಮುಂದುವರೆಸಿಕೊಂಡು ಹೋಗಲು ಶಕ್ತವಾಗಿರಬೇಕು ಎನ್ನುವುದೇ ಸುಸ್ಥಿರ ಅಭಿವೃದ್ಧಿಯ ಮೂಲ ಪರಿಕಲ್ಪನೆ. ಯಾವಾಗ ಸಮಾಜವು ಸುಸ್ಥಿರತೆ ಎಂದರೆ ಈ ಜೀವನ ಪೋಷಕ ವ್ಯವಸ್ಥೆಯ ಸಂರಕ್ಷಣೆ ಎಂದು ಗ್ರಹಿಸುತ್ತದೋ ಆಗ ಜನರು ತಮ್ಮ ಕ್ಷೇಮಾಭ್ಯುದಯ, ಸಮಾನ ಆರ್ಥಿಕ ಭಾಗೀದಾರಿಕೆ ಮತ್ತು ಹಕ್ಕುಗಳ ಆಧಾರದ ಮೇಲೆ ಅದಕ್ಕಾಗಿ ಬೇಡಿಕೆ ಇಡುತ್ತಾರೆ. ಈ ಬೇಡಿಕೆಯು ಭೂಮಿ, ಅರಣ್ಯ, ನದಿ, ಸಾಗರ, ಕೆರೆ, ಪರಿಸರ, ಗಾಳಿ, ನೀರು ಇತ್ಯಾದಿ ಸಂಪನ್ಮೂಲಗಳ ನಾಶದಿಂದ ಯಾವುದೇ ರೀತಿಯ ಲಾಭ ಪಡೆಯದ, ಬದಲಿಗೆ ಇದರಿಂದ ಉಂಟಾಗುವ ಮಾಲಿನ್ಯ ಮತ್ತು ಹೆಚ್ಚುವರಿ ವೆಚ್ಚಗಳ ಭಾರವನ್ನು ಹೊರಬೇಕಾಗಿ ಬರುವ ಬಡವರ ಕಡೆಯಿಂದಲೇ ಬರುತ್ತದೆ.

ಸುಸ್ಥಿರ ಅಭಿವೃದ್ಧಿಯ ಬಗೆಗಿನ ತಳವರ್ಗದ ದೃಷ್ಟಿಕೋನಗಳು ವಿಶಾಲವೂ ವಿಭಿನ್ನವೂ ಆಗಿರುತ್ತವೆ ಮತ್ತು ಸಾಮಾನ್ಯವಾಗಿ ಈ ದೃಷ್ಟಿಕೋನಗಳು ಹೋರಾಟಗಳಾಗಿ ರೂಪಾಂತರಗೊಳ್ಳುತ್ತವೆ. ಅಂತಹವುಗಳಲ್ಲಿ ಅರಣ್ಯ ಭೂಮಿಯ ಹಕ್ಕು ಮೊಟ್ಟಮೊದಲ ಸ್ಥಾನವನ್ನು ಪಡೆಯುತ್ತದೆ. 'ದಂಡಕಾರಣ್ಯ' ಪ್ರದೇಶದಲ್ಲಿ ಅರಣ್ಯ ಭೂಮಿಯನ್ನು ರಕ್ಷಿಸಿಕೊಳ್ಳಲು, ಅರಣ್ಯಾಧಿಕಾರಿಗಳು ಮತ್ತು ಸರ್ಕಾರೀ ಪ್ರಾಯೋಜಕತ್ವದ ಖಾಸಗೀ ಗಣಿಗಾರಿಕೆಯ ಹಿತಾಸಕ್ತಿಗಳ ಶೋಷಣೆಯ ವಿರುದ್ಧ ಬುಡಕಟ್ಟು ಜನರು ನಡೆಸಿದ ಹೋರಾಟ ಅತ್ಯಂತ ಪ್ರಮುಖವಾದದ್ದು. ಜನರ ಕಾಡುಗಳನ್ನು ಸ್ವಾಧೀನಪಡಿಸಿಕೊಂಡ ವಸಾಹತುಶಾಹಿಯನ್ನೂ ಮತ್ತು ವಸಾಹತೋತ್ತರ ಕಾಲದ ಪ್ರಭುತ್ವದ ದರ್ಪವನ್ನೂ ಒಂದೇ ತೀವ್ರತೆಯಲ್ಲಿ ಅನುಭವಿಸಿದ ತಳವರ್ಗಗಳ ಮೂಲ ದೃಷ್ಟಿಕೋನದಲ್ಲೇ ಈ ಹೋರಾಟದ ಬೀಜಗಳಿರುವುದು.

ಒಂದು ಕಾಲಕ್ಕೆ ಭಾರತದಲ್ಲಿ ಅತ್ಯಂತ ಹೆಚ್ಚು ಜೀವವೈವಿಧ್ಯವುಳ್ಳ ಮತ್ತು ಸಸ್ಯಗಳು, ಸೂಕ್ಷ್ಮಾಣು ಜೀವಿಗಳು, ಕೀಟಗಳು, ಸಸ್ಯಾಹಾರಿ–ಮಾಂಸಾಹಾರಿ ಪ್ರಾಣಿಗಳು, ಜಲಚರಗಳು, ಪಕ್ಷಿಗಳು ಮುಂತಾದ ಜೀವಿಗಳು ಜೀವ ಪೂರಕ ಸಂಬಂಧ ಹೊಂದಿದ್ದ ದಟ್ಟ ಅರಣ್ಯವಿತ್ತು. ಈ ಸಂಕೀರ್ಣ ಅರಣ್ಯ ಪರಿಸರದ ಭಾಗವಾಗಿಯೇ ಇದ್ದ ಬುಡಕಟ್ಟು ಜನರೇ ಭಾರತದ ನಿಜವಾದ ಮೂಲನಿವಾಸಿಗಳು. ಅವರು ಬೇಟೆಗಾರರಾಗಿ, ಸಂಗ್ರಹಕಾರರಾಗಿ, ಸಾಕಾಣಿಕೆಗಾಗಿ ಪ್ರಾಣಿಹಿಡಿಯುವವರಾಗಿ, ಮೀನುಗಾರರಾಗಿ, ಕುರಿಸಾಕಣೆಕಾರರಾಗಿ, ಅಲೆಮಾರಿ ಕೃಷಿಕರಾಗಿ ಮತ್ತು ಒಂದೆಡೆ ನಿಂತು ಸಾಗುವಳಿ ಮಾಡುವ ರೈತರಾಗಿ ಕಾಡಿನೊಳಗೆ ಬದುಕುತ್ತಿದ್ದರು. ಕೆಲವರು ಗಿಡಮೂಲಿಕೆಗಳ ಔಷಧಿಗಳನ್ನು ಕೊಡುವ ವೈದ್ಯವೃತ್ತಿಯನ್ನು ಮಾಡುತ್ತಿದ್ದರು. ಹಾಗೆಯೇ, ರಂಜನೆಗಾಗಿಯೋ ಬೇಟೆಗಾಗಿಯೋ ಕಾಡಿನೊಳಗೆ ಬರುವವರಿಗೆ ಮಾರ್ಗದರ್ಶಕರಾಗಲು ಮತ್ತು ಸರಕು ವಿನಿಮಯ ಮಾಡಿಕೊಳ್ಳಲು ಹೊರಗಿನ ಜನರೊಂದಿಗೆ ಒಳ್ಳೆಯ ಸಂಬಂಧವನ್ನಿರಿಸಿಕೊಂಡಿದ್ದರು. ಭಾಗಶಃ ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಶ್ಚಿಮಬಂಗಾಳ ಪ್ರದೇಶಗಳನ್ನೊಳಗೊಂಡ ಮತ್ತು ಸಂಪೂರ್ಣವಾಗಿ ಜಾರ್ಖಂಡ್, ಛತ್ತಿಸ್‌ಘಡ, ಒರಿಸ್ಸಾ ರಾಜ್ಯಗಳನ್ನೊಳಗೊಂಡ ದಂಡಕಾರಣ್ಯವು ಭಾರತದ ಒಟ್ಟು ಅರಣ್ಯಸಂಪತ್ತಿನ ಶೇಕಡಾ ೨೫ ರಷ್ಟಿದೆ.

ಒಂದು ರೀತಿಯಲ್ಲಿ ಬುಡಕಟ್ಟು ಜನರು ಅರಣ್ಯದ ಸಸ್ಯ ಮತ್ತು ಪ್ರಾಣಿಸಂಕುಲಗಳ ಪೋಷಕರಾಗಿದ್ದರು. ಭಾರತದ ಕಾಡುಗಳು ಮತ್ತು ಕಾಡುಪ್ರಾಣಿಗಳು ನಿಜವಾಗಿ ನಾಶವಾಗಲು ಶುರುವಾದದ್ದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲೇ. ಭಾರತದ ಒಟ್ಟು ಅರಣ್ಯ ಸಂಪತ್ತಿನ ಪ್ರಮಾಣವನ್ನು ಅಂದಾಜು ಮಾಡಲು ಮತ್ತು ರಫ್ತು ಉದ್ದೇಶಗಳಿಗೆ ಮತ್ತು ಸ್ಥಳೀಯ ಬಳಕೆಗಾಗಿ ದೊಡ್ಡ ಪ್ರಮಾಣದಲ್ಲಿ ಸೂರೆ ಮಾಡಲು ಅವರು ಮೊದಲು ಅರಣ್ಯ ಇಲಾಖೆಯನ್ನು ಸೃಷ್ಟಿಸಿದರು. ಹಾಗೆ ಮಾಡುವಾಗ ಅವರು ಅರಣ್ಯ ಸಂಪತ್ತಿನ ಮೇಲೆ ಬುಡಕಟ್ಟು ಜನರಿಗಿದ್ದ ಅವಲಂಬನೆಯನ್ನು ಪ್ರಶ್ನಿಸಲಿಲ್ಲ.

ಸ್ವತಂತ್ರ ಭಾರತದಲ್ಲಿ, ಸರ್ಕಾರವು ಅರಣ್ಯ ಇಲಾಖೆಯ ನೌಕರರಿಗೇ ಅರಣ್ಯದ ಪರಮಾಧಿಕಾರವನ್ನು ನೀಡುವ ಮೂಲಕ ಸಾವಿರಾರು ವರ್ಷಗಳಿಂದ ಅರಣ್ಯ ಸಂಪತ್ತನ್ನು ನಂಬಿ ಬದುಕುತ್ತಿದ್ದ ಬುಡಕಟ್ಟು ಜನರ ನದಿ ತೀರದ ಹಕ್ಕನ್ನು ಕಡೆಗಣಿಸಿಬಿಟ್ಟಿತು. ಇದರಿಂದಾಗಿ, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ೮ ರಷ್ಟಿದ್ದ ಬುಡಕಟ್ಟು ದಲಿತರು (ಪರಿಶಿಷ್ಟ ಪಂಗಡ) ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡದ್ದಲ್ಲದೇ ತಮ್ಮದೇ ನೆಲದಲ್ಲಿ ಪರಾಧೀನರಾಗಿ ಇಂದು ದೇಶದ ಅತ್ಯಂತ ನತದೃಷ್ಟ 'ತಳವರ್ಗ'ವನ್ನು ಪ್ರತಿನಿಧಿಸುತ್ತಾರೆ.

ಕಟ್ಟುನಿಟ್ಟಾದ ಅರಣ್ಯ ಕಾಯ್ದೆಗಳು ಮತ್ತು ನಿಯಮಗಳು ಅರಣ್ಯಾಧಿಕಾರಿಗಳಿಗೆ ಎಷ್ಟರಮಟ್ಟಿಗಿನ ಪರಮಾಧಿಕಾರವನ್ನು ನೀಡಿದ್ದವೆಂದರೆ ಅವರು ಬುಡಕಟ್ಟು ಜನರಿಗೆ ಎಲ್ಲ ರೀತಿಯ ಕಿರುಕುಳ ಕೊಡುವ ಜೊತೆಗೆ ಎಷ್ಟೋ ವರ್ಷಗಳಿಂದ ಅರಣ್ಯದ ಸಂಪತ್ತನ್ನು ಅವಲಂಬಿಸಿ ಬದುಕುವ ಅವರ ಹಕ್ಕನ್ನು ಕಿತ್ತುಕೊಳ್ಳುವಲ್ಲಿ ಯಶಸ್ವಿಯಾದರು. ಅದಕ್ಕೆ ಪರ್ಯಾಯವಾಗಿ ಅರಣ್ಯದ ಅಂಚಿನಲ್ಲಿದ್ದ ಬೀಳುಬಿಟ್ಟ ಭೂಮಿಯುವನ್ನು ಜೀವನೋಪಾಯಕ್ಕಾಗಿ ನೀಡಲಾಯಿತು. ಆದರೆ ಅವರಿಗೆ ಕೃಷಿಯ ಅನುಭವವಿಲ್ಲದೇ, ಬಂಡವಾಳವೂ ಇಲ್ಲದೇ, ಮೂಲಭೂತ ಸೌಕರ್ಯಗಳೂ ಇಲ್ಲದೇ ಅದರಲ್ಲಿ ಏಳಿಗೆ ಆಗಲಿಲ್ಲ. ನಂತರ ಬಂದ ಸರ್ಕಾರಗಳು ರೂಪಿಸಿದ ವಕ್ರ ನೀತಿಗಳಿಂದಾಗಿ ಬುಡಕಟ್ಟು ಜನರು ಮತ್ತು ಇತರರ ನಡುವೆ ತಪ್ಪುತಿಳುವಳಿಕೆಗಳು ಮತ್ತು ಸಂಘರ್ಷಗಳುಂಟಾದವು. ಈ ಸಂಘರ್ಷಗಳೊಡನೆ ಪೋಲೀಸರನ್ನೂ ಎದುರು ಹಾಕಿಕೊಳ್ಳುವಂತಾಯಿತು. ಪರಿಣಾಮವಾಗಿ ಬುಡಕಟ್ಟು ಜನರ ಸಂಕಷ್ಟಗಳು ಹೆಚ್ಚುತ್ತಾ ಹೊದಂತೆ, ಸಮಾಜ ವಿರೋಧಿ ಶಕ್ತಿಗಳೂ ಬಲಿಯುತ್ತಾ ಹೋದವು.

ವ್ಯಂಗ್ಯವೆಂದರೆ, ಇದೇ ದಂಡಕಾರಣ್ಯ ಪ್ರದೇಶದಲ್ಲೇ ಲಕ್ಷಾಂತರ ಡಾಲರ್ ಬೆಲೆಬಾಳುವ ಖನಿಜಗಳ ಅದಿರು ಸಂಪತ್ತು ಹೇರಳವಾಗಿದೆ. ನವ–ಉದಾರವಾದಿಗಳು ಮತ್ತು ಭ್ರಷ್ಟರಿಂದ ನಡೆಯುತ್ತಿದ್ದ ಸರ್ಕಾರಗಳು ಅದಿರು ಗಣಿಗಾರಿಕೆಗೆ ಸಂಬಂಧಿಸಿ ಬಹುರಾಷ್ಟ್ರೀಯ ಕಂಪೆನಿಗಳು, ಅಂತರ್‍ರಾಷ್ಟ್ರೀಯ ಕಂಪೆನಿಗಳು ಮತ್ತು ಭಾರತೀಯ ಗುತ್ತೇದಾರಿ ಕಂಪೆನಿಗಳೊಂದಿಗೆ ಅನೇಕ ಒಪ್ಪಂದಗಳನ್ನು ಮಾಡಿಕೊಂಡಿತು. ಇಂಥ ಗಣಿ ವ್ಯಾಪಾರಿ ಸಾಹಸಗಳು ಬುಡಕಟ್ಟು ಜನರು ಮತ್ತವರ ಆಕ್ರಮಣಕಾರಿ ಪ್ರತಿನಿಧಿಗಳಿಂದ ತೀವ್ರವಾದ ವಿರೋಧವನ್ನು ಎದುರಿಸಬೇಕಾಯಿತು. ಅದಕ್ಕೆ ಪ್ರತಿಯಾಗಿ ಸರ್ಕಾರಗಳು ಬುಡಕಟ್ಟುಗಳನ್ನು ಹತ್ತಿಕ್ಕಲು ನಿರ್ದಯವಾಗಿ ಬಲಪ್ರಯೋಗ ಮಾಡಿದವು. ಇಂದು ಅದರ ಪರಿಣಾಮವೇನಾಗಿದೆಯೆಂದರೆ, ಬುಡಕಟ್ಟುಗಳ ಮೌನ ಬೆಂಬಲದಿಂದಾಗಿ ಅರಣ್ಯ ಪ್ರದೇಶವು ಬಹುಮಟ್ಟಿಗೆ ನಕ್ಸಲರು, ಮಾವೋವಾದಿಗಳು, ಕಾಡುಗಳ್ಳರು ಮತ್ತು ಉಗ್ರವಾದಿ ಸಂಘಟನೆಗಳ ಹಿಡಿತಕ್ಕೆ ಸಿಕ್ಕಿದೆ. ಜನಪರ ಕಾಳಜಿಯೊಂದಿಗೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಈ ಸಂಘರ್ಷಗಳನ್ನು ನಿಭಾಯಿಸದೇ ಇದ್ದದ್ದರಿಂದ ಮೆತ್ತಗಿದ್ದ 'ತಳವರ್ಗದ ಹೋರಾಟ'ವು ಉಲ್ಬಣಿಸಿ ಪ್ರಭುತ್ವದೊಂದಿಗೆ

ಯುದ್ಧಕ್ಕಿಳಿಯುವಂಥ ಪರಿಸ್ಥಿತಿ ಉಂಟಾಗಿದೆ. ಇಂಥ ಸಂದರ್ಭದಲ್ಲಿ ಪ್ರಭುತ್ವವು ಮಿಲಿಟರಿಯ ಮಧ್ಯಪ್ರವೇಶದ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿರುವುದು ತೀರಾ ಅನರ್ಥಕಾರಿಯಾಗಿ ಪರಿಣಮಿಸಬಲ್ಲದು.

ಒರಿಸ್ಸಾದಲ್ಲಿ 'ಪೋಸ್ಕೋ ಇಂಡಿಯಾ'ದ ಯೋಜನೆಯ ವಿರುದ್ಧ ಪ್ರತಿಭಟನೆ ನಡೆದದ್ದು, ಕೃಷಿ ಭೂಮಿಯ ಮೇಲಿನ ತಳ ಸಮುದಾಯಗಳ ಹಕ್ಕನ್ನು ಮತ್ತು ಕೈಗಾರಿಕೀಕರಣದ ಮೂಲಕ ಜನರ 'ಕ್ಷೇಮ ಮತ್ತು ಉದ್ಧಾರ'ಕ್ಕಾಗಿ ಧ್ವಂಸಗೊಳ್ಳುತ್ತಿರುವ ಕರಾವಳಿ ಪರಿಸರವನ್ನು ರಕ್ಷಿಸುವುದಕ್ಕಾಗಿ. ಸ್ವಂತದ ಬಂದರು ಮತ್ತು ಕಬ್ಬಿಣದ ಅದಿರು ಗಣಿಯನ್ನು ಹೊಂದುವ, ಅಂದಾಜು ೧೨ ಬಿಲಿಯನ್ ಡಾಲರ್‌ಗಳ ವಿದೇಶಿ ನೇರ ಬಂಡವಾಳ ಹೂಡಿಕೆಯ ಹೆಗ್ಗಳಿಕೆ ಇರುವ, ವಾರ್ಷಿಕ ೧೨ ಮಿಲಿಯನ್ ಟನ್ನುಗಳ ಉತ್ಪಾದನೆಯ ಗುರಿಯನ್ನು ಹೊಂದಿದ್ದ ಉಕ್ಕು ಘಟಕವನ್ನು ಕಟ್ಟುವ ಯೋಜನೆ ಅದಾಗಿತ್ತು. ೧೯೯೧ರ ಭಾರತದ ಆರ್ಥಿಕತೆಯ ಉದಾರೀಕರಣದ ನಂತರ ಒಂದೇ ಕಂಪೆನಿಯ ಅತಿ ದೊಡ್ಡ ಹೂಡಿಕೆ ಇದು.

ಅಧಿಕಾರಿಗಳು ಮತ್ತು ರಾಜಕಾರಣಿಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಪೋಸ್ಕೋ ಕಂಪೆನಿಯು ಪರಿಸರ ಮತ್ತು ಕರಾವಳಿ ನಿಯಂತ್ರಣ ವಲಯಗಳ ಪರವಾನಗಿಗಳನ್ನು ಅತ್ಯಂತ ಅನುಮಾನಾಸ್ಪದವಾಗಿ ಪಡೆದುಕೊಂಡಿತು. ಆರಂಭದಲ್ಲಿ, ಈ ಬೃಹತ್ ಯೋಜನೆಯನ್ನು ಉದ್ದೇಶಪೂರ್ವಕವಾಗಿ ಸಣ್ಣ ಸಣ್ಣ ಭಾಗಗಳಾಗಿ ಪ್ರತ್ಯೇಕಿಸಿ ಸ್ವತಂತ್ರ ಯೋಜನೆಗಳೆಂಬಂತೆ (೪ MTPA ಉಕ್ಕು ಸಂಕೀರ್ಣಗಳು, ೪೦೦ ಮೆ.ವ್ಯಾ ಸಾಮರ್ಥ್ಯದ ವಿದ್ಯುತ್ ಸ್ಥಾವರಗಳು ಮತ್ತು ಸ್ವಯಂಪೂರ್ಣವಾದ ಕಿರು ಬಂದರು) ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸಿ ಎಲ್ಲ ಹಂತಗಳಲ್ಲಿ ಅಂಗೀಕಾರವಾಗುವಂತೆ ನೋಡಿಕೊಳ್ಳಲಾಯಿತು. ಎಲ್ಲವೂ ಒಂದೇ ಯೋಜನೆಯ ಭಾಗವಾಗಿದ್ದರೂ, ಒಂದೇ ಕಟ್ಟಡ ಸಂಕೀರ್ಣದಲ್ಲಿ ಸ್ಥಾಪಿತವಾಗಿದ್ದರೂ, ಕೇವಲ ೬ ವರ್ಷಗಳಲ್ಲಿ ತನ್ನ ಗರಿಷ್ಟ ಉತ್ಪಾದನೆಯನ್ನು ತಲುಪುವ ಸ್ಪಷ್ಟ ಉದ್ದೇಶವನ್ನು ಹೊಂದಿದ್ದರೂ ಅನುಮತಿಯನ್ನು ನೀಡಲಾಯಿತು. ಈ ಎಲ್ಲ ಅನುಮತಿಗಳನ್ನೂ ಒಂದೇ ಸಭೆಯಲ್ಲಿ ಮಾಡಲಾದ ಪಾರಿಸರಿಕ ಪರಿಣಾಮಗಳ ಒಂದು ಕ್ಷಿಪ್ರ ಮೌಲ್ಯಮಾಪನದ ಆಧಾರದ ಮೇಲೆ ನೀಡಲಾಗಿದೆ!

ಸಾಕಷ್ಟು ಹೆಚ್ಚುವರಿ ಭೂಮಿ ಮತ್ತು ಭಾರಿ ಪ್ರಮಾಣದ ನೀರಿನ ಅವಶ್ಯಕತೆಗಳಿದ್ದ ಉಪನಗರ ಯೋಜನೆಯನ್ನು ಈ ಇಡೀ ಕಾರ್ಯಾಚರಣೆ ಮರೆಮಾಚಿತ್ತು. ಕಿರು ಬಂದರು ಯೋಜನೆಯನ್ನು, ೧, ೭೦,೦೦೦ DWT ಸಾಮರ್ಥ್ಯದ, ಸುಮಾರು ೨೮೦ ಮೀಟರ್ ಉದ್ದದ, ಬಹುಶಃ ಏಷ್ಯಾದಲ್ಲೇ ಅತಿ ದೊಡ್ಡದಾದ ಭಾರೀ ಹಡಗುಗಳು ಸೂಕ್ಷ್ಮ ಪರಿಸರದ ಜಟಾಧರ್ ಜಲಸಂಧಿಯಲ್ಲಿ ಬಂದು ನಿಲ್ಲಲು ಅನುಕೂಲವಾಗುವಂತೆ ರಚಿಸಲಾಗಿತ್ತು. ಅದಕ್ಕಾಗಿ ೧೨ ಕಿ.ಮೀ ಉದ್ದದ ಚಾನೆಲ್‌ಗಳು ಮತ್ತು ಹಡಗುಗಳ ತಂಗುದಾಣಕ್ಕಾಗಿ ಸಮುದ್ರ ದಂಡೆಯಲ್ಲಿ ಒಂದು ೨ ಕಿ.ಮೀ. ಉದ್ದದ, ಮತ್ತೊಂದು ೧.೬ ಕಿ.ಮೀ. ಉದ್ದದ ಬೃಹತ್ ತಡೆಗೋಡೆಗಳನ್ನು ಕಟ್ಟಬೇಕಿತ್ತು. ಅಪಾಯದ ಅಂಚಿನಲ್ಲಿರುವ ಆಲಿವ್ ರಿಡ್ಲೆ ಆಮೆಗಳ ಗೂಡುಕಟ್ಟುವ ಜಾಗವಾದ ಜಟಾಧರ್ ಸಂಧಿಯನ್ನು ಗಣನೆಗೆ ತೆಗೆದುಕೊಂಡರೆ, ಇಷ್ಟು ಬೃಹತ್ತಾದ ಮೂಲಸೌಕರ್ಯಗಳಿಂದ ಅಲ್ಲಿ ಸಂಭವಿಸಬಹುದಾದ ದುರಂತವಂತೂ ಕಲ್ಪನಾತೀತ. ಇಲ್ಲಿನ ಮರಳು ದಿಬ್ಬಗಳು ಸಿಹಿ ಮಣ್ಣು ಮತ್ತು ನೀರನ್ನು ಒದಗಿಸುವುದರಿಂದ ಮತ್ತು ಚಂಡಮಾರುತಗಳನ್ನು ತಡೆದು ರಕ್ಷಣೆ ಕೊಡುವುದರಿಂದ ಈ ಪ್ರದೇಶವು ವೀಳ್ಯದೆಲೆ ತೋಟಗಳ ಫಲವತ್ತಾದ ಭೂಮಿಯಾಗಿದೆ. ಈ ಯೋಜನೆಗೆ ಪ್ರತಿರೋಧ ಒಡ್ಡಿದ್ದು, ತಮ್ಮ ನೆಲ, ಜಲ ಮತ್ತು ಬದುಕನ್ನು ಕಳೆದುಕೊಳ್ಳುವೆವೆಂದು ಆತಂಕಿತರಾಗಿದ್ದ ಸಾಮಾನ್ಯ ಹಳ್ಳಿಯ ಜನರು. ಅತಿ ಸೂಕ್ಷ್ಮವಾದ ಕರಾವಳಿ ಪರಿಸರವನ್ನು ಕಾಪಾಡುವುದೇ ಈ ತಳವರ್ಗದ ಹೋರಾಟದ ಪ್ರಮುಖ ಉದ್ದೇಶವಾಗಿತ್ತು.


ತಳವರ್ಗದ ಬಡ ಮೀನುಗಾರರೇ, ತಮ್ಮ ಮೀನುಗಾರಿಕೆಯ ಹಕ್ಕನ್ನು ಕಸಿದುಕೊಳ್ಳುವ ಕೂಡುಕುಳಂ ಅಣು ವಿದ್ಯುತ್ ಸ್ಥಾವರದ ವಿರುದ್ಧ ಮತ್ತು ಕರಾವಳಿಯ ಸೂಕ್ಷ್ಮ ಪರಿಸರವನ್ನು ವಿನಾಶಕಾರಿ ಅಭಿವೃದ್ಧಿಯಿಂದ ರಕ್ಷಿಸುವ ಸುಲುವಾಗಿ ಹೋರಾಡಿದವರು. ತಳವರ್ಗದ ದೃಷ್ಟಿಕೋನವೆಂದರೆ, ಇಲ್ಲಿನ ಗಾಳಿ ಮತ್ತು ನೀರುಗಳು ವಿಕಿರಣಶೀಲವಾದರೆ ಕ್ಯಾನ್ಸರ್ ಮತ್ತಿತರ ರೋಗಗಳು ಬರಬಹುದು ಮತ್ತು ಸಮುದ್ರದ ನೀರು ಮಲಿನಗೊಂಡು ಮೀನುಗಾರರು ತಮ್ಮ ಜೀವನೋಪಾಯವಾದ ಮೀನುಗಾರಿಕೆಯಿಂದ ವಂಚಿತರಾಗುವರು ಎಂಬುದೇ. ಅಣು ಸ್ಥಾವರವು 'ಅಭಿವೃದ್ಧಿ ಮತ್ತು ಪ್ರಗತಿ'ಯನ್ನು ತರುತ್ತದೆ ಎಂದು ಎಷ್ಟು ವಾದ ಮಾಡಿದರೂ ಸ್ಥಳೀಯ ಸಮುದಾಯಗಳು ಅದನ್ನು ಒಪ್ಪಲಾರದು. ಅವರಿಗೆ ಸ್ಥಾವರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯು ತರುವ ಸಮೃದ್ಧಿಗಿಂತ ಅದರ ೩೦ ಕಿ.ಮೀ. ವ್ಯಾಪ್ತಿಯಲ್ಲಿ ಬದುಕುವ ಸುಮಾರು ೧೦ ಲಕ್ಷಕ್ಕೂ ಮೇಲ್ಪಟ್ಟ ಜನರ ಜೀವ ಮತ್ತು ಜೀವನ ಭದ್ರತೆ ಮುಖ್ಯ.

ಹರಿಯಾಣ ರಾಜ್ಯದ ಫತೇಹಾಬಾದ್ ಜಿಲ್ಲೆಯ ೨೮೦೦ ಮೆ.ವ್ಯಾ. ಸಾಮರ್ಥ್ಯದ ಗೋರಖ್‌ಪುರ್ ಅಣುಸ್ಥಾವರ ಯೋಜನೆಯಿಂದಾದ ಪರಿಣಾಮಗಳನ್ನು ಎದುರಿಸಿದ ತಳಸಮುದಾಯದ ಜನರೆಂದರೆ ಸಣ್ಣ ಮತ್ತು ಅತಿಸಣ್ಣ ರೈತರು. ಪರಮಾಣು ಶಕ್ತಿ ಇಲಾಖೆಯ ಪ್ರಕಾರ ಈ ಯೋಜನೆಗೆ ೧೫೦೩ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಅಪಾರ ಪ್ರಮಾಣದ ನೀರನ್ನು ಒಮ್ಮೆಲೆ ಕುಡಿಯುವ ಈ ಸ್ಥಾವರಕ್ಕೆ, ಭಾಕ್ರಾ ಕಾಲುವೆ ವ್ಯವಸ್ಥೆಯ ದುರ್ಬಲವಾದ ಫತೇಹಾಬಾದ್ ವಿಭಾಗದ ಕಾಲುವೆ ದಂಡೆಯಲ್ಲಿ ಜಾಗವನ್ನು ನೀಡಲಾಗಿದೆ. ಈ ಸ್ಥಾವರದ ನಿರ್ವಹಣೆಗೆ, ಹರಿಯಾಣ ಸರ್ಕಾರವು ೩೨೦ ಕ್ಯೂಸೆಕ್ಸ್ ನೀರನ್ನು ಹಂಚಿದೆ. ಆದರೆ ಭಕ್ರಾ ನೀರು ಹಂಚಿಕೆ ಒಪ್ಪಂದದ ಪ್ರಕಾರ, ಭಾಕ್ರಾ ನೀರನ್ನು ನೀರಾವರಿಗಾಗಿ ಮತ್ತು ಜಲವಿದ್ಯುತ್ ನೀರಾವರಿಗಾಗಿ ಮಾತ್ರ ಬಳಸಬಹುದೆಂಬ ಷರತ್ತಿರುವುದರಿಂದ ಈ ಹಂಚಿಕೆ ಕಾನೂನುಬಾಹಿರವಾಗಿದೆ. ಅಲ್ಲದೆ ಇದರಿಂದ ಒಂದು ಲಕ್ಷ ಎಕರೆಯಷ್ಟು ಭೂಮಿಗೆ ನೀರಾವರಿ ನಷ್ಟವಾಗುತ್ತದೆ. ಹಾಗೇ ಕಾಲುವೆಯನ್ನು ಸೇರುವ ಮಲಿನಗೊಂಡ ನೀರು ಕೆಳಭಾಗದ ಕೃಷಿ ಭೂಮಿಗೆ ಮತ್ತು ಕೆಳಭಾಗದ ಹಳ್ಳಿಗಳ ಕುಡಿಯುವ ನೀರಿಗೆ ನಿಧಾನವಾಗಿ ವಿಷವನ್ನುಣಿಸಬಹುದು. ಜೊತೆಗೆ ಈ ಸ್ಥಾವರದಲ್ಲಿ ಉತ್ಪಾದನೆಯಾದ ವಿದ್ಯುಚ್ಛಕ್ತಿಯು ಖಂಡಿತವಾಗಿಯೂ ಹರಿಯುವುದು ದೆಹಲಿ, ಗುರ್‌ಗಾಂವ್ ಮತ್ತಿತರ ಸ್ಥಳಗಳಲ್ಲಿನ ಬಹುರಾಷ್ಟ್ರೀಯ ಕಂಪೆನಿಗಳಿಗೆ, ವ್ಯಾಪಾರ/ವಸತಿ/ಕೈಗಾರಿಕಾ ಸಂಕೀರ್ಣಗಳಿಗೆ, ಮಾಲ್‌ಗಳಿಗೆ ಮತ್ತು ಥೀಮ್ ಪಾರ್ಕ್‌ಗಳಿಗೆ.

ಪರಿಸರ ಸಂರಕ್ಷಣೆಯಿಲ್ಲದ ಆರ್ಥಿಕ ಅಭಿವೃದ್ಧಿಯು ಒಂದು ಮೋಸದಾಟವೇ ಸರಿ; ಅದು ಅಡಿಪಾಯವಿಲ್ಲದ ಸೂರಿನಂತೆ ಅಪಾಯಕಾರಿ. ತಳವರ್ಗವು ಈ ಮೂಲ ಅಡಿಪಾಯವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದರೆ, ಆಳುವ ವರ್ಗ 'ಮೋಜಿನ ಸೂರು'ಗಳನ್ನು ಕಟ್ಟುವುದಕ್ಕಾಗಿ ಅದನ್ನು ಅಭಿವೃದ್ಧಿಯ ಹೆಸರಿನಲ್ಲಿ ನಾಶಮಾಡಲು ಹವಣಿಸುತ್ತದೆ. ಇದೇ ಸುಸ್ಥಿರ ಅಭಿವೃದ್ಧಿಗಾಗಿ ನಡೆಸುತ್ತಿರುವ 'ತಳವರ್ಗದ ಹೋರಾಟ'ದ ಮೂಲ ಸತ್ವ. ಈ ಹೋರಾಟದ ಅಂತರ್ಯದಲ್ಲಿರುವುದು ಭೂಮಿ, ನೀರು, ಕಾಡು, ಖನಿಜ ಇತ್ಯಾದಿಗಳ ಸಂರಕ್ಷಣೆ.

ಭಾರತವು ಪ್ರಪಂಚದ ಶೇಕಡಾ ೨ರಷ್ಟು ಭೂಭಾಗವನ್ನು ಮಾತ್ರ ಹೊಂದಿದ್ದು, ಪ್ರಪಂಚದ ಶೇಕಡಾ ೧೭ರಷ್ಟು ಜನಸಂಖ್ಯೆಗೆ ಆಶ್ರಯದಾಣವಾಗಿದೆ. ಭಾರತೀಯ ಅಂತರಿಕ್ಷ ಸಂಶೋಧನಾ ಕೇಂದ್ರವು ೨೦೦೭ರಲ್ಲಿ ಮರುಭೂಮೀಕರಣದ ಬಗ್ಗೆ ಸಲ್ಲಿಸಿದ ವರದಿಯ ಪ್ರಕಾರ, ಶೇಕಡಾ ೬೯ ರಷ್ಟು ಭೂಮಿ ಶುಷ್ಕವಾಗಿದ್ದು, ನೀರು ಮತ್ತು ಗಾಳಿಯ ಸವೆತಕ್ಕೆ, ಕ್ಷಾರತನಕ್ಕೆ ಮತ್ತು ನೀರಿನ ಅಭಾವಕ್ಕೆ ಗುರಿಯಾಗುತ್ತಿದೆ. ದುರುಪಯೋಗ ಮತ್ತು ಮಿತಿಮೀರಿದ ಬಳಕೆಯಿಂದಾಗಿ ಭಾರತದ ಮೂರನೇ ಒಂದರಷ್ಟು ಭೂಭಾಗವು ಮರುಭೂಮಿಯಾಗುತ್ತಿರುವುದರ ಬಗ್ಗೆ ಪರಿಸರ ಖಾತೆಯ ನೂತನ ಸಚಿವರಾದ ಪ್ರಕಾಶ್ ಜಾವಡೇಕರ್ ಪ್ರಸ್ತಾಪ ಮಾಡಿದ್ದಾರೆ. ಇದೆಲ್ಲವೂ 'ಅಭಿವೃದ್ಧಿ'ಯ ಹೆಸರಿನಲ್ಲಿ ಸಂಭವಿಸುತ್ತಿದ್ದು, ಅದರ ಅತ್ಯಂತ ಕೆಟ್ಟ ಪರಿಣಾಮಗಳನ್ನೆದುರಿಸುವುದು ತಳಸಮುದಾಯವೇ.

ಭೂಮಿ ಮತ್ತು ಸಂಪನ್ಮೂಲಗಳ ನ್ಯಾಯಯುತ ಹಂಚಿಕೆಯ ಮೂಲಕ ಬಡವರ 'ಅಭಿವೃದ್ಧಿ'ಯ ಕಲ್ಪನೆ ಮತ್ತು ಲಾಭ ಪಡೆಯುವುದಕ್ಕಾಗಿ ಶ್ರೀಮಂತರು ಮಾಡುತ್ತಿರುವ 'ಪರಿಸರ ನಾಶ'ದ ನಡುವಿನ ವಿರೋಧಾಭಾಸವನ್ನು ಮೋದಿ ಸರ್ಕಾರದ ಆರಂಭದ ದಿನಗಳಲ್ಲೇ ಯಾರು ಬೇಕಾದರೂ ಗ್ರಹಿಸಬಹುದಿತ್ತು. ಈ ವಿರೋಧಾಭಾಸವನ್ನು ಪರಿಹರಿಸುವ ಬದಲಿಗೆ ಭೂಮಿ ಮತ್ತು ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ಸಂಸ್ಥೆಗಳಿಗೆ ಅಡವಿಟ್ಟದ್ದೇ UPA ಸರ್ಕಾರದ ಅವನತಿಗೆ ಕಾರಣ. NDA ಈ ಬಲೆಗೆ ಬೀಳಬಾರದು. ಇಲ್ಲದಿದ್ದರೆ ಮೋದಿಯವರ "ಅಭಿವೃದ್ಧಿಯ ಮೇಲಿನ ಮೊದಲ ಹಕ್ಕು ಬಡವರದ್ದು ಎಂಬ ದೃಢ ನಂಬಿಕೆ" ರಾಷ್ಟ್ರಪತಿಗಳ ಭಾಷಣದಲ್ಲಷ್ಟೇ ಉಳಿಯಬಹುದು!



**(ಲೇಖಕ ದೇವಸಹಾಯಂ ನಿವೃತ್ತ ಐ.ಎ.ಎಸ್. ಅಧಿಕಾರಿ. ಜೆಪಿಯವರನ್ನು ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಚಂಡೀಗಢದಲ್ಲಿ ಬಂಧನದಲ್ಲಿಟ್ಟಿದ್ದಾಗ, ಚಂಡೀಗಢದ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಜೆಪಿಯವರ ಯೋಗಕ್ಷೇಮವನ್ನು ಜತನದಿಂದ ನೋಡಿಕೊಂಡವರು. ಈಗ ಪರಿಸರ ಸಂರಕ್ಷಣೆಗೆ ಬದ್ಧವಾದ ಸ್ವಯಂಸೇವಾ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ)**

(ಕನ್ನಡಕ್ಕೆ: ಟಿ.ಎಲ್ ರೇಖಾಂಬ
ಕೃಪೆ: *ಜನತಾ*, ಜುಲೈ ೨೦, ೨೦೧೪)

## ಭಾಷೆ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ

# ಇದು ನಮ್ಮೆಲ್ಲರ ಮೈಮರೆವಿನ ಕಾಲವೇ?




**ಜಾ**ಗತೀಕರಣದ ಭರಾಟೆಯ ಈ ದಿನಗಳಲ್ಲಿ ರಾಜ್ಯದಲ್ಲಿ ಕನ್ನಡವನ್ನು ಮತ್ತು ಶಿಕ್ಷಣದ ಅರ್ಥವನ್ನು ಉಳಿಸಿ ಬೆಳೆಸಲು ಇರುವ ಮೂಲಧಾರ ಕಾರ್ಯಕ್ರಮವೆಂದರೆ ಕನ್ನಡವನ್ನು ಶಿಕ್ಷಣದ ಅವಿಭಾಜ್ಯ ಅಂಗ ಮಾಡುವುದು; ಕನಿಷ್ಠ, ಕನ್ನಡ ಮಕ್ಕಳ ಪ್ರಾಥಮಿಕ ಶಿಕ್ಷಣವಾದರೂ ಕಡ್ಡಾಯವಾಗಿ ಕನ್ನಡದಲ್ಲಿರುವಂತೆ ಮಾಡುವುದು. ಇದಕ್ಕೆ ನ್ಯಾಯಾಂಗ ಮೂಲಭೂತ ಹಕ್ಕುಗಳ ಹೆಸರಿನಲ್ಲಿ ಅಡ್ಡಿಯುಂಟು ಮಾಡುತ್ತಿರುವಾಗ, ಇದಕ್ಕೆ ಏಕೈಕ ಪರಿಹಾರ ಮಾರ್ಗವೆಂದರೆ, ಈ ಸಂಬಂಧವಾಗಿ ತೊಂದರೆ ಕೊಡುತ್ತಿರುವ ಸಂವಿಧಾನದ ಪರಿಚ್ಛೇದಕ್ಕೆ ಸೂಕ್ತ ತಿದ್ದುಪಡಿ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು. ಆದರೆ ರಾಜ್ಯ ಸರ್ಕಾರ ಏಕೋ ಮತ್ತೆ ಒಂದು ತಾತ್ಕಾಲಿಕ ಪರಿಹಾರ ಕ್ರಮಕ್ಕೆ ಕೈಹಾಕಿದಂತಿದೆ. ಅದು ತರಾತುರಿಯಲ್ಲಿ ವಿಧಾನ ಮಂಡಲದಲ್ಲಿ ಐದನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮವನ್ನು ಮತ್ತು ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸುವುದನ್ನು ಕಡ್ಡಾಯ ಮಾಡುವ ಮಸೂದೆಗಳನ್ನು ಅನುಮೋದನೆ ಪಡೆದುಕೊಂಡು ಅದಕ್ಕೆ ಕಾನೂನಿನ ರೂಪ ಕೊಡಲು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳಿಸಿದೆ. ಇದನ್ನು ನ್ಯಾಯಾಲಯಗಳ ಈ ಹಿಂದಿನ ಪ್ರತಿಕೂಲ ತೀರ್ಪುಗಳನ್ನು ಗಮನಿಸಿಯೇ ಈಗ ಈ ಕಾನೂನನ್ನು ಸಂವಿಧಾನದ ೨೦ಎ ಕಲಮಿನ ಪ್ರಕಾರವೇ ರೂಪಿಸಲಾಗಿದೆ ಎಂದು ರಾಜ್ಯದ ಅಡ್ವೊಕೇಟ್ ಜನರಲ್‌ರಾದ ಗೆಳೆಯ ಪ್ರೊ. ರವಿವರ್ಮ ಕುಮಾರ್ ನನ್ನೊಂದಿಗೆ ಮಾತನಾಡುತ್ತಾ ಹೇಳಿದರು.

ಆದರೆ ರಾಷ್ಟ್ರಪತಿಗಳು ಇದಕ್ಕೆ ಸುಲಭವಾಗಿ ಅಂಕಿತ ಹಾಕುವರೇ ಎಂಬುದು ಪ್ರಶ್ನೆ. ಮಾತೃಭಾಷಾ ಶಿಕ್ಷಣ ಕುರಿತಂತೆ ವಿಚಾರಣಾ ಸಂದರ್ಭದಲ್ಲಿ ವಿವಿಧ ನ್ಯಾಯಾಧೀಶರುಗಳು ಆಡಿದ ಮಾತುಗಳು, ಅವರ ತೀರ್ಪಿನಲ್ಲಿ ಎತ್ತಲಾಗಿರುವ ಹಲವು ನೆಲೆಗಳ ಪ್ರಶ್ನೆಗಳು ಮತ್ತು ಶಿಕ್ಷಣ ರಾಜ್ಯ ಪಟ್ಟಿಯಲ್ಲಿದ್ದರೂ ನೀತಿಗೆ ಒಂದು ರಾಷ್ಟ್ರೀಯ ಚೌಕಟ್ಟು ಇರುವುದು–ಈ ಎಲ್ಲವೂ ಸೃಷ್ಟಿಸುವ ಜಟಿಲತೆಗಳ ನಡುವೆ ರಾಷ್ಟ್ರಪತಿಗಳು ಸುಲಭವಾಗಿ ಸಹಿ ಹಾಕುವರೆ? ಇದರ ಜೊತೆಗೆ, ಮಸೂದೆಯು ಮಾತೃಭಾಷಾ ಶಿಕ್ಷಣದ ಮಾತಾಡಿರುವುದರಿಂದ ರಾಜ್ಯದಲ್ಲಿ ಸುಮಾರು ಶೇ. ೩೦ರಷ್ಟಿರುವ ಕನ್ನಡೇತರರ ಮಕ್ಕಳಿಗೆ ಅವರವರ ಮಾತೃಭಾಷೆಗಳಲ್ಲಿಯೇ ಪ್ರಾಥಮಿಕ ಶಿಕ್ಷಣ ಕೊಡುವ ಶಕ್ತಿ–ಸಾಧ್ಯತೆ–ಸೌಕರ್ಯಗಳು ರಾಜ್ಯ ಸರ್ಕಾರಕ್ಕಿದೆಯೇ? ಅಲ್ಲದೆ, ಈ ಮಸೂದೆಗಳು ಕೇಂದ್ರ ಶಿಕ್ಷಣ ಕ್ರಮದ ಕಾರ್ಪೋರೇಟ್ ಶಿಕ್ಷಣ ಸಂಸ್ಥೆಗಳ( ಪಬ್ಲಿಕ್ ಮತ್ತು ಅಂತಾರಾಷ್ಟ್ರೀಯ ಶಾಲೆಗಳು) ಮತ್ತು ಅಲ್ಪ ಸಂಖ್ಯಾತರ ಶಾಲೆಗಳಿಗೆ(ಇವುಗಳ ವ್ಯಾಖ್ಯಾನವನ್ನು ಇದೇ ಸರ್ಕಾರ ಇತ್ತೀಚೆಗೆ ತಾನೇ ಉದಾರಗೊಳಿಸಿತಲ್ಲ?) ಅನ್ವಯವಾಗುವುದಿಲ್ಲವಾದ್ದರಿಂದ, ಶೈಕ್ಷಣಿಕ ತಾರತಮ್ಯದ ಪ್ರಶ್ನೆ ಎದ್ದು ಮತ್ತೆ ಇದು ನ್ಯಾಯಾಂಗದ ಎದುರು ಹೋಗಿ, ಕನ್ನಡ ಶಿಕ್ಷಣದ ಪ್ರಶ್ನೆ ಮತ್ತೆ ವರ್ಷಗಟ್ಟಲೆ ನೆನೆಗುದಿಗೆ ಬೀಳಬಲ್ಲುದು ಅಲ್ಲವೇ? ಖಾಸಗಿ ಶಾಲೆಗಳ ಮಾಲೀಕರ ಸಂಘ ಈಗಾಗಲೇ ಸರ್ಕಾರದ ಕ್ರಮದ ಬಗ್ಗೆ ತನ್ನ ತೀವ್ರ ಅಸಮಧಾನ ವ್ಯಕ್ತಪಡಿಸಿ, ಕಾನೂನಿನ ಸಮರಕ್ಕೆ ಸಿದ್ಧವಾಗುತ್ತಿರುವುದಾಗಿ ಹೇಳಿದೆ.




ಇದೆಲ್ಲದರ ಹಿನ್ನೆಲೆಯಲ್ಲಿ ನನ್ನ ಒಂದು ತೀವ್ರ ಅನುಮಾನವೆಂದರೆ ಇದನ್ನೆಲ್ಲ ತಿಳಿದೇ, ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳ ಮಾಲೀಕರು ಅಥವಾ ಅವರ ಗೆಳೆಕಾರರು ತುಂಬಿರುವ ನಮ್ಮ ವಿಧಾನ ಮಂಡಲ ಕಳ್ಳ ಮುಗುಳ್ನಗೆಯೊಂದಿಗೇ ಈ ಮಸೂದೆಗಳನ್ನು ಅನುಮೋದಿಸಿದೆಯೇ? ಎಂಬುದು. ಏಕೆಂದರೆ ಈ ಮಸೂದೆಗಳು ಸದ್ದಿಲ್ಲದೆ, ಚರ್ಚೆಯಿಲ್ಲದೇ ಎರಡೂ ಸದನಗಳಲ್ಲಿ ಅನುಮೋದಿತವಾದವು! ಇದನ್ನು ಇತ್ತೀಚೆಗೆ ನನ್ನ ಮನೆಗೆ ಸೌಹಾರ್ದ ಭೇಟಿಗೆಂದು ಬಂದಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರಿಗೆ ಹೇಳಿದಾಗ, 'ಹಾಗಂತೀರಾ?' ಎಂದು ಮುಗಳ್ನಕ್ಕ ರೀತಿ ಈ ಎಲ್ಲವನ್ನೂ ಪ್ರಾಮಾಣಿಕವಾಗಿ ಹೇಳುವಂತಿತ್ತು. ಸಜ್ಜನರೂ ಶಿಕ್ಷಣ ವ್ಯವಸ್ಥೆಯ ಬಗ್ಗೆ ಪ್ರಾಮಾಣಿಕ ಕಾಳಜಿ ಮತ್ತು ಬದ್ಧತೆಗಳನ್ನುಳ್ಳ ಈ ಕಿಮ್ಮನೆಯವರನ್ನು ನಾನು ಕೇಳಿದೆ: ಇದೆಲ್ಲ ದ್ರಾವಿಡ ಪ್ರಾಣಾಯಾಮ ಮಾಡಿಯೂ ಭರವಸೆ ಇಲ್ಲದಿರುವ ಬದಲು, ನೇರವಾಗಿ ಸಂವಿಧಾನ ತಿದ್ದುಪಡಿಗಾಗಿ ರಾಜ್ಯ ತನ್ನ ಮೊದಲ ಹೆಜ್ಜೆಯನ್ನೇಕೆ ಇಡಬಾರದಿತ್ತು ಎಂದು ಕೇಳಿದೆ. ಈ ಹೊತ್ತಿಗಾಗಲೇ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳನ್ನು ಅಲ್ಲದಿದ್ದರೂ, ಶಾಲಾ ಶಿಕ್ಷಣ ಮಂತ್ರಿಗಳದಾದರೂ ಒಂದು ಸಭೆ ಕರೆದು ಚರ್ಚಿಸಿ, ಅಗತ್ಯ ಸಂವಿಧಾನ ತಿದ್ದುಪಡಿಗಾಗಿ ಕೇಂದ್ರಕ್ಕೆ ಒಂದು ಶಿಫಾರ್ಸು ಕಳಿಸಬಹುದಿತ್ತಲ್ಲಾ? ಇಂದಿನ ಪ್ರಧಾನಿಯೂ, ಅವರ ಪಕ್ಷವೂ ರಾಷ್ಟ್ರೀಯತೆಯನ್ನು ತನ್ನ ಪ್ರಧಾನ ಮೌಲ್ಯವಾಗಿ ನಂಬಿವೆ; ಜೊತೆಗೆ ಅವರ ಮೂಲ ಶಕ್ತಿಯಾದ ಆರೆಸ್ಸೆಸ್ ಕೂಡ ಮೊನ್ನೆ ತಾನೆ ಮಾತೃಭಾಷಾ ಶಿಕ್ಷಣಕ್ಕೆ ತನ್ನ ಬೆಂಬಲ ಘೋಷಿಸಿದೆ. ಪರಿಸ್ಥಿತಿ ಹೀಗೆ ಅನುಕೂಲಕರವಾಗಿರುವಾಗ ರಾಜ್ಯ ಸರ್ಕಾರವೇಕೆ ಈ ಅವಕಾಶವನ್ನು ಬಳಸಿಕೊಳ್ಳುತ್ತಿಲ್ಲ? ಸುಮ್ಮನೆ ಸುತ್ತುಬಳಸು ಮಾರ್ಗವನ್ನು ಪ್ರಯತ್ನಿಸುತ್ತಾ ತಾನೂ ಆಯಾಸಗೊಂಡು ಜನರನ್ನೂ ಏಕೆ ಬಳಲಿಸುತ್ತಿದೆ? ಕಿಮ್ಮನೆಯವರು 'ಹೌದು ಇದನ್ನು ಮಾಡಬಹುದು; ಆ ದಿಸೆಯಲ್ಲೂ ಸರ್ಕಾರ ಯೋಚನೆ ಮಾಡುತ್ತಿದೆ.' ಎಂದರು. ಆದರೆ ಅದರಲ್ಲಿ ಖಚಿತ ಭರವಸೆಯೇನೂ ಕಾಣಲಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಪ್ರಾಮಾಣಿಕತೆಯೇ ಅನುಮಾನಾಸ್ಪದತೆಗೆ ಸಿಕ್ಕಿದೆ.

## ಗಾಂಧಿ ಕುರಿತ ಒಂದು ಅದ್ಭುತ ನಾಟಕ




ಕಳೆದ ಐದಾರು ವರ್ಷಗಳಿಂದ, ಇಂದಿನ ಕಪಟ ಮಾರುಕಟ್ಟೆಯಲ್ಲಿ ಪುಸ್ತಕ ವ್ಯಾಪಾರ ಕಷ್ಟವಾಗುತ್ತಿದ್ದು ಪ್ರಕಾಶನವನ್ನು ಮುಚ್ಚುತ್ತೇನೆ ಎಂದು ತಮ್ಮ ಓದುಗರನ್ನೂ, ಲೇಖಕರನ್ನೂ ಹೆದರಿಸುತ್ತಲೇ ಇರುವ ಬಳ್ಳಾರಿಯ ಲೋಹಿಯಾ ಪ್ರಕಾಶನದ ಗೆಳೆಯ ಚೆನ್ನಬಸವಣ್ಣ ಮೊನ್ನೆ ಎಂಟು ಪುಸ್ತಕಗಳನ್ನು ತಮ್ಮ ಪ್ರಕಾಶನದಿಂದ ಹೊರತಂದು ತಮ್ಮ ಓದುಗ–ಲೇಖಕರಿಬ್ಬರಿಗೂ ಅಭಯ ನೀಡಿದ್ದಾರೆ ಎಂದೇ ಹೇಳಬಹುದು. ಅದಿರಲಿ, ಇತ್ತೀಚಿನ ಈ ಎಂಟು ಪುಸ್ತಕಗಳ ಮೇಲೆ ಸುಮ್ಮನೆ ಕಣ್ಣಾಡಿಸುತ್ತಾ ಹೋದಾಗ ನನ್ನ ವಿಶೇಷ ಗಮನ ಸೆಳೆದ ಮೂರು ಪುಸ್ತಗಳೆಂದರೆ, ರಂಜಾನ್ ದರ್ಗಾ ಅವರ ನೆಲ್ಸನ್ ಮಂಡೇಲಾರ ಜೀವನ ಚರಿತ್ರೆ, ಎ.ಎಸ್. ಹಿಪ್ಪರಗಿ ಅವರ ಸಂಕ್ಷಿಪ್ತ ಆತ್ಮ ಕತೆ 'ನನ್ನ ಬದುಕು' ಹಾಗೂ ಈ ಎರಡಕ್ಕಿಂತ ಮುಖ್ಯವಾಗಿ ಹಸನ್ ನಯೀಂ ಸುರಕೋಡರು ಹಿಂದಿಯಿಂದ ಅನುವಾದಿಸಿರುವ ಅಸ್ಗರ್ ವಜಾಹತ್ ಅವರ 'ಗಾಂಧಿಗೆ ಸಾವಿಲ್ಲ' ಎಂಬ ನಾಟಕ. ಕನ್ನಡ ಸಾಹಿತಿಗಳನ್ನ–ವಿಶೇಷವಾಗಿ ಬಂಡಾಯ ಸಾಹಿತಿಗಳನ್ನು ಬಹುವಾಗಿ ಸೆಳೆದ ನೆಲ್ಸನ್ ಮಂಡೇಲಾ ಬಗ್ಗೆ ಈವರೆಗೆ ಒಂದು ಪೂರ್ಣ ಪ್ರಮಾಣದ ಪುಸ್ತಕ ಕನ್ನಡದಲ್ಲಿ ಬಹುಶಃ ಬಂದಿಲ್ಲ ಎಂಬ ಸಂಗತಿಯ ಹಿನ್ನೆಲೆಯಲ್ಲಷ್ಟೇ ರಂಜಾನ್ ದರ್ಗಾರ ಪುಸ್ತಕ ಮುಖ್ಯವೆನಿಸುತ್ತಾದರೆ, ಹಿಪ್ಪರಗಿಯವರ ಪುಸ್ತಕ ಹಳ್ಳಿಯ ಬಡ ಹೈದನೊಬ್ಬ ಆಕಸ್ಮಿಕವೆಂಬಂತೆ ಶಿಕ್ಷಣ ಪಡೆದು ಶಾಲಾಶಿಕ್ಷಕನಾಗಿ ಗ್ರಾಮಾಂತರ ಶಿಕ್ಷಣ ವ್ಯವಸ್ಥೆಗೆ ಸಲ್ಲಿಸುವ ನಿಸ್ವಾರ್ಥ ಮತ್ತು ಬಹುಮುಖ ಸೇವೆಯ ಹಿಂದಿನ ವಿಶಿಷ್ಟ ಮಾನವ ಸ್ವಭಾವ ಹುಟ್ಟಿಸುವ ಬೆರಗಿನ ಕಾರಣದಿಂದಾಗಿ ಗಮನ ಸೆಳೆಯುತ್ತದೆ.

ಇನ್ನು ಗಾಂಧಿ ಕುರಿತ ನಾಟಕ ಈವರೆಗೆ ಗಾಂಧಿ ಕುರಿತಂತೆ ಕನ್ನಡಕ್ಕೆ ಬಂದಿರುವ ನಾಟಕಗಳಲ್ಲೆಲ್ಲ ಶ್ರೇಷ್ಠ ನಾಟಕವೆನಿಸುತ್ತದೆ. ಈವರೆಗೆ ಬಂದಿರುವ ನಾಟಕಗಳು ಗಾಂಧಿಯನ್ನು ಮುಖ್ಯವಾಗಿ ಒಬ್ಬ ವ್ಯಕ್ತಿಯಾಗಿ, ಇನ್ನೊಂದು ವ್ಯಕ್ತಿಯ ಎದುರು ನಿಲ್ಲಿಸಿ ಅವರ ವ್ಯಕ್ತಿತ್ವವನ್ನು ಬಗೆಯುವ ಪ್ರಯತ್ನವಾದರೆ, 'ಗಾಂಧಿಗೆ ಸಾವಿಲ್ಲ' ಗಾಂಧಿಯನ್ನು ಒಂದು ಶಕ್ತಿಯಾಗಿ, ಒಂದು ಸಮಗ್ರ ಜೀವನ ದೃಷ್ಟಿಯ ಒಂದು ಪ್ರತೀಕವಾಗಿ ನೋಡುವ ಮಹತ್ವಾಕಾಂಕ್ಷೆಯನ್ನು ಪ್ರಕಟಿಸುತ್ತಾ, ಅದರಲ್ಲಿ ಸಾಕಷ್ಟು ಯಶಸ್ವಿಯಾಗಿದೆ ಎಂದೇ ಹೇಳಬೇಕು. ಈ ನಾಟಕದಲ್ಲಿ ಗೋಡ್ಸೆ ಗುಂಡಿಗೆ ಸಾಯದೆ ಉಳಿಯುವ ಗಾಂಧಿ ತನ್ನ ಆಶಯದ ಸ್ವರಾಜ್ಯವನ್ನು ಸಾಕಾರಗೊಳಿಸುವಲ್ಲಿ ನೆಹ್ರೂ, ಪಟೇಲ್, ಮೌಲಾನಾ ಮುಂತಾದ ತನ್ನ ಪ್ರಿಯ ಶಿಷ್ಯರನ್ನೇ ಎದುರು ಹಾಕಿಕೊಂಡು ನಡೆಸುವ ಹೋರಾಟ ಗೋಡ್ಸೆಯೊಂದಿಗೂ ಒಂದು ಸಂವಾದದ ದಾರಿಯನ್ನು ತೆರೆದುಕೊಂಡು ಹಿಂದೂ–ಹಿಂದುತ್ವದ ನಡುವಣ ಒಂದು ತಾತ್ವಿಕ ಮುಖಾಮುಖಿಯನ್ನು ಸೃಷ್ಟಿಸಿಕೊಳ್ಳುತ್ತಲ್ಲದೆ, ಬ್ರಹ್ಮಚರ್ಯ ಕುರಿತ ಗಾಂಧಿ ತಿಳುವಳಿಕೆಯನ್ನೂ ನಿಷ್ಠುರವಾಗಿ ಬಗೆದು ನೋಡಲು


**ಅಸ್ಗರ್ ವಜಾಹತ್**

ಹವಣಿಸುತ್ತದೆ. ಗಾಂದಿ ವ್ಯಕ್ತಿತ್ವದ ಸಕಲ ಆಯಾಮಗಳನ್ನೂ, ಅದರ ವಿಸ್ತರಣೆಗಳೊಂದಿಗೆ ಮತ್ತು ಹಲವು ಪ್ರಶ್ನೆಗಳೊಂದಿಗೆ ಪ್ರಸ್ತುತಪಡಿಸುವ ಈ ಕೃತಿಯನ್ನು ಬರೆದವರು ಒಬ್ಬ ಮುಸ್ಲಿಂ ಎಂಬುದೂ ಇಂದಿನ ಸಂದರ್ಭದಲ್ಲಿ ನಿರ್ಲಕ್ಷಿಸಲಾಗದ ಸಂಗತಿಯೇ ಆಗಿದೆ.


ಈ ನಾಟಕ ಗಾಂಧಿಯನ್ನು ಇಂದಿಗೆ ಪ್ರಸ್ತುತಪಡಿಸುವಲ್ಲಿ ಎಂತಹ ಸೂಕ್ಷ್ಮ ಸಮತೋಲನದಲ್ಲಿದೆ ಎಂದರೆ, ಇದರ ನಿರ್ದೇಶಕರ ಆಯ್ಕೆಯೇ ಈ ನಾಟಕದ ಯಶಸ್ಸನ್ನು ನಿರ್ಧರಿಸಬಲ್ಲುದಾಗಿದೆ. ಹಾಗಾಗಿ ಕರ್ನಾಟಕದಲ್ಲಿ ಈ ನಾಟಕದ ಪ್ರಯೋಗಗಳನ್ನು ಕುತೂಹಲದಿಂದ ಎದುರು ನೋಡುವಂತಾಗಿದೆ. ಆದರೆ ಒಂದು ಮಾತು 'ಗೋಡ್ಸೆ @ಗಾಂಧಿ.ಕಾಮ್' ಎಂಬ ಈ ನಾಟಕದ ಮೂಲ ಶೀರ್ಷಿಕೆಯನ್ನು ಅದು ಗೊಂದಲಮಯವಾಗಿದೆ ಎಂದು ಭೋಳೆಯಾಗಿ 'ಗಾಂಧಿಗೆ ಸಾವಿಲ್ಲ' ಎಂದು ಬದಲಾಯಿಸಿರುವುದು ನಾಟಕದ ಒಟ್ಟು ಸಂಕೀರ್ಣತೆಯನ್ನೇ ಮಸುಕು ಮಾಡಿದೆ ಎಂಬುದನ್ನೂ ಇಲ್ಲಿ ಹೇಳಬೇಕು. ಅದೇನೇ ಇರಲಿ, ಇಂತಹ ಅಪರೂಪದ ಕೃತಿಯನ್ನು ಕನ್ನಡಕ್ಕೆ ಕೊಟ್ಟಿರುವುದಕ್ಕಾಗಿ ಅನುವಾದಕ ಸುರಕೋಡ್ ಹಾಗೂ ಪ್ರಕಾಶಕ ಸಿ.ಚೆನ್ನಬಸವಣ್ಣನವರನ್ನು ಅಭಿನಂದಿಸಬೇಕಿದೆ.

## ಚನ್ನಬಸವಣ್ಣನವರಿಗೊಂದು ಪ್ರತಿಭಟನೆ




ಚನ್ನಬಸವಣ್ಣನವರನ್ನು ಅಭಿನಂದಿಸುತ್ತಿರುವ ಹೊತ್ತಿನಲ್ಲೇ ಒಂದು ಪ್ರತಿಭಟನೆಯನ್ನೂ ಅವರ ಬಗ್ಗೆ ದಾಖಲಿಸುವುದು ಅನಿವಾರ್ಯವಾಗಿದೆ. ಕೆಲ ವರ್ಷಗಳ ಹಿಂದೆ ಇವರು 'ನಾನು ಪಾಟೀಲ ಪುಟ್ಟಪ್ಪ' ಕೃತಿಯನ್ನು ಪ್ರಕಟಿಸಿದಾಗಲೇ ಅದರಲ್ಲಿ ಪಾಟೀಲ ಪುಟ್ಟಪ್ಪ ಶಿವರಾಮ ಕಾರಂತರ ವ್ಯಕ್ತಿತ್ವವನ್ನು ಅವಹೇಳನಕ್ಕೀಡುಮಾಡುವಂತಹ ಮಾತುಗಳನ್ನು ಬರೆದಿರುವ ಬಗ್ಗೆ ನಾನು ಚನ್ನಬಸವಣ್ಣನವರಿಗೆ ನನ್ನ ಅಸಮಧಾನವನ್ನು ಸೂಚಿಸಿದ್ದೆ. ಆದರೆ ಆ ಕೃತಿಯ ಎರಡನೇ ಆವೃತ್ತಿಯಲ್ಲೂ ಅದು ಮುಂದುವರೆದು, ಆ ಅವಹೇಳನಕಾರಿ ಮಾತುಗಳು ಕಾರಂತರ ಎಲ್ಲ ಉತ್ತರಾಧಿಕಾರತ್ವವನ್ನೂ ಪಡೆದಿರುವ ಶ್ರೀಮತಿ ಮಾಲಿನಿ ಮಲ್ಯರ ಗಮನಕ್ಕೆ ಬಂದು ಅವರು ಅದನ್ನು ಪ್ರತಿಭಟಿಸಿದಾಗಲೂ, ಪಾಟೀಲ ಪುಟ್ಟಪ್ಪ ಎಂದಿನ ತಮ್ಮ ಉದ್ಧಟತನದಿಂದ ಅದಕ್ಕೆ ಪ್ರತಿಕ್ರಿಯಿಸಿದಾಗಲೂ, ಇದಕ್ಕೆ ಸಂಬಂಧವೇ ಪಡದ ಒಂದಿಬ್ಬರು ಚೇಲಾ ಸಾಹಿತಿಗಳು ಮಾಲಿನಿ ಮಲ್ಯರನ್ನು ಅವಮಾನಿಸುವ ರೀತಿಯಲ್ಲಿ ಹೇಳಿಕೆ ನೀಡಿದಾಗಲೂ ಮತ್ತು ಮತ್ತೆ ಈ ಸಂಬಂಧವಾಗಿ ನಾನು ಅವರಿಗೆ ಸೂಕ್ಷ್ಮವಾಗಿ ಈಗ ನೀವು ಸುಮ್ಮನಿರುವುದು ತರವಲ್ಲ ಎಂದು ಸೂಚಿಸಿದಾಗಲೂ ಚನ್ನಬಸವಣ್ಣ ಮಗುಮ್ಮಾಗಿಯೇ ಇದ್ದುಬಿಟ್ಟದ್ದು ಲೋಹಿಯಾ ಪ್ರಕಾಶನದ ಘನತೆಗೆ ತಕ್ಕುದಲ್ಲ ಎಂದು ಇಲ್ಲಿ ಹೇಳಬೇಕಿದೆ.

## ಮಹಾರಾಷ್ಟ್ರದ ನಿರ್ಮಮ ಪುರೋಹಿತಶಾಹಿ



ತಿಂಗಳ ಹಿಂದೆ ಹತ್ಯೆಯಾದ ಮಹಾರಾಷ್ಟ್ರದ ವಿಚಾರವಾದಿ ಮತ್ತು ಕಮ್ಯೂನಿಸ್ಟ್ ನಾಯಕ ಗೋವಿಂದ ಪನ್ಸಾರೆ ಬಗ್ಗೆ ಪತ್ರಿಕೆಯೊಂದರಲ್ಲಿ ಓದುತ್ತಿದ್ದೆ. ಓದುತ್ತಿದ್ದಂತೆ ಮಹಾರಾಷ್ಟ್ರದ ಪರಂಪರೆಯಲ್ಲಿ ಅಂತರ್ಗತವಾಗಿದೆ ಎಂದು ನಾನು ನಂಬಿದ್ದ ಮಹಾಚೈತನ್ಯದ ಇನ್ನೊಂದು ಮುಖ ನನ್ನ ಮುಖದ ಮೇಲೆ ಅಪ್ಪಳಿಸಿತು. ಜ್ಞಾನೇಶ್ವರ, ತುಕಾರಾಮ, ಫುಲೆ, ಗೋಖಲೆ, ರಾನಡೆ, ಅಂಬೇಡ್ಕರ್, ಶಾಹು ಮಹಾರಾಜ್‌ರ ಜೊತೆಜೊತೆಗೇ ಅಲ್ಲಿ ಅನೇಕ ಅಜ್ಞಾತ ಗೋಡ್ಸೆಗಳ ಪರಂಪರೆಯೇ ಇದೆ ಎಂಬ ಅರಿವೂ ನನ್ನನ್ನು ತಾಗಿ ಮೈಜುಮ್ಮೆನ್ನುವಂತೆ ಮಾಡಿತು. ಪುರೋಹಿತಶಾಹಿಯ ಶೋಷಣಾತ್ಮಕ ಮೌಢ್ಯಾಚರಣೆಗಳ ವಿರುದ್ಧ ಅಂದೋಲನವನ್ನೇ ನಡೆಸಿದ್ದ ನರೇಂದ್ರ ಧಾಭೋಳ್ಕರ್ ಕೊಲೆಯಾಗಿ ಒಂದು ವರ್ಷ ಕಳೆದಿದ್ದರೂ ಹಂತಕರ ಸುಳಿವಿಲ್ಲ! ಈಗ ಗೋವಿಂದ ಪನ್ಸಾರೆಯವರ ಕೊಲೆಯ ನಿಗೂಢತೆ ಕೂಡ ಗಾಬರಿ ಹುಟ್ಟಿಸುವಂತಿದೆ. ನಾನು ಓದಿದ ಪತ್ರಿಕೆಯ ಪ್ರಕಾರ ಪನ್ಸಾರೆಯವರ ಕೊಲೆಗೆ ಮೂಲ ಕಾರಣ, ಅವರು ಮುಂಬೈನ ೨೬/೧೧ ದುರಂತದಲ್ಲಿ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳದ ನಿರ್ದೇಶಕ ಹೇಮಂತೆ ಕರ್ಕರೆಯವರು ಸಾವನ್ನಪ್ಪಿದ ರಹಸ್ಯವನ್ನು ಬೇಧಿಸುವ ಕೆಲಸದಲ್ಲಿ ನಿರತರಾಗಿದ್ದರು. ಆ ಬಗ್ಗೆ ಒಂದು ಕಿರುಪುಸ್ತಕವನ್ನೂ ಅವರು ಸಿದ್ಧಪಡಿಸಿದ್ದರು. ಇದು ಹಿಂದೂ ಮೂಲಭೂತವಾದಿಗಳ ಸಿಟ್ಟಿಗೆ ಕಾರಣವಾಗಿತ್ತು.

ಏಕೆಂದರೆ, ಹೇಮಂತ್ ಕರ್ಕರೆ ನೂರಾರು ಪಾಕಿಸ್ತಾನಿ ಮುಸ್ಲಿಂ ಪ್ರವಾಸಿಗರ ಸಾವಿಗೆ ಕಾರಣವಾಗಿದ್ದ ಸಂಜೋತಾ ಎಕ್ಸ್‌ಪ್ರೆಸ್ ದುರಂತ ಮತ್ತು ಮಾಲೆಗಾಂವ್ ಸ್ಫೋಟದ ಹಿಂದಿದ್ದ ಹಿಂದೂ ಮೂಲಭೂತವಾದಿ ಸಂಘಟನೆಗಳ ಕೈವಾಡವನ್ನು ಭೇದಿಸಿ ಪ್ರಜ್ಞಾ ಸಿಂಗ್ ಸೇರಿದಂತೆ ಅವುಗಳ ಹಲವು ಕಾರ್ಯಕರ್ತರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. ವಿಚಾರಣೆ ನಿರ್ಣಾಯಕ ಘಟ್ಟ ತಲುಪಿದ್ದಾಗ ೨೬/೧೧ರ ಘಟನೆಯಲ್ಲಿ ಕರ್ಕರೆಯವರ ಸಾವು ನಿಗೂಢವಾಗಿ ಸಂಭವಿಸಿತ್ತು. ಈ ಸಾವಿಗೆ ಕಸಬ್‌ನ ಸಹಚರರು ಕಾರಣ ಎಂದು ಚಿತ್ರಿಸಲಾಯಿತಾದರೂ, ಅದು ನಡೆದಿರುವುದು ಮಹಾರಾಷ್ಟ್ರ ಪೋಲೀಸ್ ದಳದಲ್ಲಿರುವ ಹಿಂದೂ ಕೋಮುವಾದಿ ಶಕ್ತಿಗಳಿಂದ ಎಂಬ ಅನುಮಾನ ಆಗಿನಿಂದಲೂ ಇದೆ. ಕರ್ಕರೆಯವರ ಪತ್ನಿ ಕೂಡ ಈ ಬಗ್ಗೆ ದೂರು ಕೊಟ್ಟು, ಗೋಳಾಡಿ ಸುಸ್ತಾಗಿದ್ದಾರೆ.



ಮಹಾರಾಷ್ಟ್ರ ಮೊದಲಿನಿಂದಲೂ ವೈದಿಕ ಪುರೋಹಿತಶಾಹಿಯ ಭದ್ರ ನೆಲೆಯೇ ಆಗಿದೆ. ಈ ಪುರೋಹಿತಶಾಹಿಯ ದಬ್ಬಾಳಿಕೆ ಮತ್ತು ದೌರ್ಜನ್ಯಗಳ ವಿರುದ್ಧ ದನಿ ಎತ್ತಿದ ಸಂತ ಜ್ಞಾನೇಶ್ವರನಿಗೆ ಅಸಹನೀಯ ತೊಂದರೆ ಕೊಟ್ಟ ಈ ಶಕ್ತಿಗಳು ಸಂತ ತುಕಾರಾಮರನ್ನೂ ನಿಗೂಢವಾಗಿ ಕೊಂದವೆಂಬ ಪ್ರತೀತಿ ಇದೆ. ಏಕೆಂದರೆ ತುಕಾರಾಮರು ಹೇಗೆ ಸತ್ತರು, ಅವರ ಸಮಾಧಿಯಾದರೂ ಎಲ್ಲಿದೆ ಎಂಬುದು ಯಾರಿಗೂ ಗೊತ್ತಿಲ್ಲ! ಬದಲಿಗೆ, ತುಕಾರಾಮರನ್ನು ವೈಕುಂಠದಿಂದ ಬಂದ ಪುಷ್ಪಕ ವಿಮಾನ ಕೊಂಡೊಯ್ದಿತು ಎಂಬ ದಂತಕಥೆಯನ್ನು ಕಟ್ಟಿ ಜನರನ್ನು ನಂಬಿಸಲಾಗಿದೆ. ಇನ್ನು ಜ್ಯೋತಿಬಾ ಫುಲೆ ಮತ್ತು ಅವರ ಪತ್ನಿ ಸಾವಿತ್ರಿ ಬಾಯಿಯವರಿಗೆ ಮಹಾರಾಷ್ಟ್ರದ ಪುರೋಹಿತಶಾಹಿ ನೀಡಿದ ಪ್ರಾಣಾಂತಿಕ ಹಿಂಸೆ ಮತ್ತು ಕಿರುಕುಳ ಇತ್ತೀಚಿನ ಇತಿಹಾಸವಾಗಿದೆ. ಇನ್ನೂ ಇತ್ತೀಚಿನ ಇತಿಹಾಸವೆಂದರೆ, 'ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು' ಎಂದು ಘೋಷಿಸಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಸಮರ ಸಾರಿ ಅಪ್ರತಿಮ ದೇಶಭಕ್ತರೆಂದು ಪ್ರಸಿದ್ಧರಾದ ಬಾಲಗಂಗಾಧರ ತಿಲಕರು ಶೂದ್ರರು ಮತ್ತು ಮಹಿಳೆಯರಿಗೆ ಶಾಲಾ ಪ್ರವೇಶವನ್ನು ನಿಷೇಧಿಸಬೇಕೆಂದು ನಡೆಸಿದ ದೀರ್ಘ ಸಾರ್ವಜನಿಕ ಮತ್ತು ನ್ಯಾಯಾಂಗ ಹೋರಾಟ! ಇನ್ನು ಈ ಪರಂಪರೆಯ ನಿರ್ಣಾಯಕ ಸಾಕ್ಷಿಯಾಗಿ, ಗಾಂಧಿ ಕೊಲೆ ಏಕೆ ಮತ್ತು ಯಾರಿಂದಾಯಿತು ಎಂಬ ಚರಿತ್ರೆ ಇದ್ದೇ ಇದೆ. ಅದಕ್ಕಿಂತ ಮುಖ್ಯವಾಗಿ ಈ ಧರ್ಮಲಂಡ ಕೊಲೆಗಾರ ಪರಂಪರೆ ಇನ್ನೂ ಜೀವಂತವಿದೆ ಮತ್ತು ಹೆಚ್ಚೆಚ್ಚು ಪರಿಣಿತಿಯನ್ನು ಸಾಧಿಸುತ್ತಿದೆ ಎಂಬುದು ಗಾಬರಿ ಹುಟ್ಟಿಸುವ ಸಂಗತಿಯಾಗಿದೆ.

ದಾಭೋಲ್ಕರ್ ಮತ್ತು ಪನ್ಸಾರೆಯವರ ಕೊಲೆಯನ್ನು ಎಷ್ಟು ಪರಿಪೂರ್ಣವಾಗಿ ನಿಯೋಜಿಸಿ ಎಸಗಿದ್ದಾರೆಂದರೆ, ಅವನ್ನು ಬೇಧಿಸಲು ಯಾವ ಸುಳಿವೂ ಪೋಲೀಸರಿಗೆ ಇನ್ನೂ ಸಿಗದಾಗಿದೆ. ಕೊಲೆಯ ನಿರ್ವಹಣೆಯನ್ನು ಇಷ್ಟು ಪರಿಪೂರ್ಣವಾಗಿ ಸಿದ್ಧಿಸಿಕೊಂಡಿರುವ ಈ ಮತೀಯ ಮೂಲಭೂತವಾದಿಗಳು ಗಾಂಧಿ ಕೊಲೆಯ ನಂತರ ಹಿಂದೂತ್ವದ ಪಠ್ಯದ ಭಾಗವಾಗಿಯೇ ಏನೋ ಹತ್ಯೆಯ ವಿದ್ಯೆಯಲ್ಲಿ ಪರಿಪೂರ್ಣ ಕೌಶಲ್ಯವನ್ನು ಸಾಧಿಸಿರುವಂತೆ ತೋರುತ್ತಿದೆ. ಈಗ ಹೇಳಿ, ಸಾರ್ವಜನಿಕವಾಗಿ ಧರ್ಮವೆಂದರೆ ನಿಜವಾಗಿ ಮತ್ತು ನಿರ್ಣಾಯಕವಾಗಿ ಏನು?


ಈ ಪ್ರಶ್ನೆ ಇಂದು ರಾಷ್ಟ್ರಾದ್ಯಂತ ಎಲ್ಲ ಕಡೆ ಹಲವು ನೆಲೆಗಳಲ್ಲಿ ಮಾರ್ದನಿಸುತ್ತಿದೆ. ಗುಜರಾತ್‌ನ ಗಾಂಧಿ ವಿದ್ಯಾಪೀಠ, ಗಾಂಧಿ ಸಾಹಿತ್ಯ ಪ್ರಕಟಣಾ ಸಂಸ್ಥೆ ನವಜೀವನ ಟ್ರಸ್ಟ್ ಮತ್ತು ಸಬರ್ಮತಿ ಆಶ್ರಮವೂ ಸೇರಿದಂತೆ ರಾಷ್ಟ್ರದ ಎಲ್ಲ ಶೈಕ್ಷಣಿಕ ಮತ್ತು ಸಂಶೋಧನಾ ಮಂಡಳಿಗಳನ್ನೂ–ಚಲಚಿತ್ರ ಸೆನ್ಸಾರ್ ಮಂಡಳಿಯೂ ಸೇರಿದಂತೆ–ಧರ್ಮದ ಈ ಸಾರ್ವಜನಿಕೀಕರಣದ ಶಕ್ತಿಗಳ ಕೈಗೆ ಒಪ್ಪಿಸಲಾಗಿದೆ. ಇದರ ಉದ್ದೇಶ, ತನ್ನೆಲ್ಲ ಕೃತ್ಯಗಳನ್ನೂ ನೀತಿ ನಿರಪೇಕ್ಷಗೊಳಿಸಿ ಅವುಗಳ ಪರವಾದ ಸಾರ್ವಜನಿಕ ಸಮ್ಮತಿಯನ್ನು ಉತ್ಪಾದಿಸಲು ಸೂಕ್ತವಾದ ಮಾನಸಿಕ ವಾತಾವರಣವನ್ನು ಸೃಷ್ಟಿಸುವುದೇ ಆಗಿದೆ. ಹಾಗಾಗಿಯೇ ವೆಂಡರ್‌ಳ ಹಿಂದೂ ಧರ್ಮ ಕುರಿತ ಪುಸ್ತಕದ ನಿಷೇಧವನ್ನು ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಕ್ಷಮಿಸಿಬಿಡುತ್ತೇವೆ, ಪೆರುಮಾಳ್ ಮುರುಗನ್ 'ನಾನು ಸತ್ತೆ' ಎಂದರೆ, 'ಅದು ನಿನ್ನ ಆಯ್ಕೆ' ಎಂದು ಸುಮ್ಮನಿದ್ದುಬಿಡುತ್ತೇವೆ; 'ಡಾಟರ್ ಆಫ್ ಇಂಡಿಯಾ' ಸಾಕ್ಷ್ಯಚಿತ್ರದ ನಿಷೇಧವನ್ನು ದೇಶಭಕ್ತಿಯ ಹೆಸರಲ್ಲಿ ಸಮರ್ಥಿಸುತ್ತೇವೆ. ಗೋಮಾಂಸದ ಜೊತೆಗೆ ಎಲ್ಲ ರೀತಿಯ ಪಶುಮಾಂಸದ ನಿಷೇಧದಿಂದ ಜನಸಾಮಾನ್ಯರ ಆಹಾರ ಪದ್ಧತಿ ಮತ್ತು ಹಕ್ಕಿಗೆ ಕುತ್ತು ಬಂದಿದ್ದರೂ, ಅದು ಬಹುಸಂಖ್ಯಾತರ ಭಾವನಾತ್ಮಕತೆಯ ಪ್ರಶ್ನೆ ಎಂದು ಅದನ್ನು ಪ್ರಜಾಪ್ರಭುತ್ವೀಕರಿಸಿ ಒಪ್ಪಿಬಿಡುತ್ತೇವೆ ಅಲ್ಲಾ, ನಾವು ಎತ್ತ ಸಾಗುತ್ತಿದ್ದೇವೆ? ನಮಗೆ ಮೈಮೇಲೆ ಎಚ್ಚರವಿದೆಯೇ? ಕೇಳಿಕೊಳ್ಳುವ ಕಾಲ ಬಂದಿದೆ ಅನಿಸುವುದಿಲ್ಲವೇ?

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

**ಪು:ಕೋಲಿಂ ಎಂಬ ಕೌತುಕ ಸಂ: ಡಾ॥ ಜೆ.ಕೆ.ರಮೇಶ್ ಪ್ರ. ಕೋಣಂದೂರು ಂಗಪ್ಪ ಅಭಿನಂದನ ಸಮಿತಿ,** ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಪು: XIV+೨೪+೧೮೬ ಬೆಲೆ: ರೂ. ೩೦೦/–

### ಸಾರ್ಥಕ ಬದುಕಿಗೆ ಸಾರ್ಥಕ ಅಭಿನಂದನೆ




'ಶಿವಮೊಗ್ಗದಲ್ಲಿ ಸಮಾಜ–ವಾದಿಗಳು ಕಟ್ಟಿದ ಅನುಭವ ಮಂಟಪದಲ್ಲಿ ಬೆಳೆದವರು ಲಿಂಗಪ್ಪ' ಎಂದು ಯು.ಆರ್.ಅನಂತಮೂರ್ತಿ ಅವರು ಈ ಪುಸ್ತಕದ ಬೆನ್ನುಡಿಯಲ್ಲಿ ಬರೆದಿದ್ದಾರೆ. ಈ ಅನುಭವ ಮಂಟಪದಲ್ಲಿ ಒಡನಾಡಿದ ಅನೇಕರ ಹೋರಾಟದ ಘಟನೆಗಳು, ಅವರ ಅಭಿರುಚಿ, ಆಸಕ್ತಿ ಕಳಕಳಿಗಳು ಈಗಾಗಲೇ ಜನಜನಿತವಾಗಿದೆ. ಜಾನಪದ ಕಥೆಯಂತೆ ಬಾಯಿಂದ ಬಾಯಿಗೆ ಹರಡಿರುವುದೂ ಆಗಿದೆ. ಲೋಹಿಯಾ–ಗೋಪಾಲಗೌಡರ ಜೊತೆಯಲ್ಲಿ ಬೆಳೆದ ಕೋಣಂದೂರು ಲಿಂಗಪ್ಪ ಅವರ ಸಾರ್ವಜನಿಕ, ಕೌಟುಂಬಿಕ ಬದುಕಿನ ವಿವಿಧ ಮಗ್ಗುಲುಗಳನ್ನು ಈ ಅಭಿನಂದನ ಕೃತಿ ಸಮರ್ಥವಾಗಿ ಹಿಡಿದು ಕೊಡುತ್ತದೆ. ನಲವತ್ತಕ್ಕೂ ಹೆಚ್ಚು ಬರಹಗಾರರು–ಕೋಲಿಂ ಅವರ ಗೆಳೆಯರು, ಅವರನ್ನು ಚಿಕ್ಕಂದಿನಿಂದ ಬಲ್ಲ ಹಿರಿಯರು, ಕುಟುಂಬದವರು– ಲಿಂಗಪ್ಪನವರ ವ್ಯಕ್ತಿತ್ವವನ್ನು ತಮ್ಮದೇ ಆದ ಅನುಭವದ ಆಧಾರದ ಮೇಲೆ ಲೇಖನಗಳನ್ನು ಬರೆದಿದ್ದಾರೆ.

ಸಾರ್ವಜನಿಕವಾಗಿ ತನ್ನನ್ನು ತೊಡಗಿಸಿಕೊಂಡ ಒಬ್ಬ ವ್ಯಕ್ತಿಯ ಹೊರಗಿನ ಸಾಧನೆಗಳೇನು? ಹೋರಾಟಗಳ ಪ್ರಾಮಾಣಿಕತೆ, ಬದ್ಧತೆಗಳೇನು? ವೈಯುಕ್ತಿಕ ಬದುಕಿನಲ್ಲಿ ತನ್ನ ಕೌಟುಂಬಿಕ ಜವಾಬ್ದಾರಿಗಳನ್ನು ನೈತಿಕತೆಯಿಂದ ಯಶಸ್ವಿಯಾಗಿ ಹೇಗೆ ಪೂರೈಸಿದರು? ಈ ವಿಚಾರಗಳನ್ನೆಲ್ಲಾ ಇಲ್ಲಿಯ ಲೇಖನಗಳು ಸ್ವಾರಸ್ಯಕರವಾಗಿ ನಿರೂಪಿಸುತ್ತಾ ಹೋದಂತೆ ಕೋಲಿಂ ಅವರು ಒಂದು ಮುಖ್ಯ ಪಾತ್ರವಾಗಿ ಇಲ್ಲಿ ಮೂಡಿ ನಿಲ್ಲುತ್ತಾರೆ.

ತೀರ್ಥಹಳ್ಳಿ ಬಸ್‌ಸ್ಟ್ಯಾಂಡ್ ಕೂಲಿ ರಾಮಣ್ಣ ಮತ್ತು ತರಕಾರಿ, ದಿನಸಿ ಹೊತ್ತು ಮಾರುತ್ತಿದ್ದ ಗೌರಮ್ಮನ ಮಗ ಲಿಂಗಪ್ಪನವರ ಬಾಲ್ಯ, ವಿದ್ಯಾಭ್ಯಾಸಕ್ಕಾಗಿ ಅನುಭವಿಸಿದ ಕಷ್ಟಗಳು; ಪ್ರೌಢಶಾಲೆ ಮುಗಿಸಿದ ನಂತರ ಗೂಡಂಗಡಿ ವ್ಯಾಪಾರ; ಯು.ಆರ್.ಅನಂತಮೂರ್ತಿಯವರ ನೆರವಿನಿಂದ ಕಾಲೇಜು ವಿದ್ಯಾಭ್ಯಾಸ, ಪೂರ್ಣಚಂದ್ರ ತೇಜಸ್ವಿ, ಕಡಿದಾಳು ಶಾಮಣ್ಣ, ಸಿಪಿಕೆ ಮುಂತಾದವರ ಸಹವಾಸ–ಸ್ನೇಹ–ಸಾಹಸಗಳು, ಗೋಪಾಲಗೌಡರ ನೆರವಿನಿಂದ ಪ್ರೌಢಶಾಲಾ ಶಿಕ್ಷಕರಾದುದು, ಕನ್ನಡ ಚಳುವಳಿಯನ್ನು ಹುಟ್ಟುಹಾಕಿದುದು, ನಂತರ ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು, ಶಾಸಕರಾದುದು ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾದುದ್ದು–ಹೀಗೆ ಅವರ ಬದುಕಿನ ವಿವಿಧ ಹಂತಗಳ ವಿವರಗಳನ್ನು ಇಲ್ಲಿಯ ಲೇಖನಗಳು ಅವರ ಮೇಲಿರುವ ಪ್ರೀತಿಯಿಂದ, ಖುಷಿಯಿಂದ ಚಿತ್ರಿಸುತ್ತವೆ.

ಇದೇ ಕಾರಣಕ್ಕಾಗಿ ಕೆಲವು ಪ್ರಸಂಗಗಳು ಪುನರಾವರ್ತನೆಯಾಗುತ್ತವೆ. ಆದರೆ ಒಂದು ಮುಖ್ಯ ಸಂಗತಿಯನ್ನು, ಈ ಘಟನೆಗಳು ಸಹಜವೆಂಬಂತೆ ಪ್ರಸ್ತಾಪಿಸುತ್ತದೆ. ಅದೆಂದರೆ –ಕಡುಬಡವನಾದ, ಹಿಂದುಳಿದ ಜಾತಿಯ ಒಬ್ಬ ವ್ಯಕ್ತಿ ತನ್ನಲ್ಲಿರುವ ಅಚಲವಾದ ಆತ್ಮ ವಿಶ್ವಾಸದಿಂದ ಹೇಗೆ ಮೇಲೆ ಬಂದ – ಎನ್ನುವುದು.

ಲಿಂಗಪ್ಪನವರಲ್ಲಿದ್ದ ಹಠವೂ ಅವರ ಅನೇಕ ಸಾಧನೆಗಳಿಗೆ ಕಾರಣವೆನ್ನಬಹುದು. ತೇಜಸ್ವಿ 'ಲಿಂಗಪ್ಪ ನಮ್ಮನ್ನೆಲ್ಲ ಹೇಡಿಗಳೆಂದು ದೂಷಿಸಿ, ನಾನೊಬ್ಬನಾದರೂ ಕರಿಬಾವುಟ ತೋರಿಸುತ್ತೇನೆಂದು ನಿರ್ಗಮಿಸಿದ'– ಇಂತಹುದೊಂದು ಪ್ರಸಂಗ ಹೇಳುತ್ತಾರೆ.

ಬೆಂಗಳೂರಿನಲ್ಲಿ ತಮಿಳರಿಂದ ತಮಗೆ ಆದ ಅಪಮಾನದಿಂದಾಗಿ ನೊಂದು, ಛಲದಿಂದ ಲಿಂಗಪ್ಪನವರು ಕನ್ನಡ ಭಾಷಾ ಚಳುವಳಿಯನ್ನು ಹುಟ್ಟುಹಾಕುತ್ತಾರೆ. ಇದನ್ನು ಕಡಿದಾಳು ಶಾಮಣ್ಣ, ಪಿ.ಪುಟ್ಟಯ್ಯ ವಿವರಿಸುತ್ತಾ, ಕನ್ನಡ ಚಳುವಳಿಯನ್ನು ಪ್ರಾರಂಭಿಸಿದ್ದು ಕೋಣಂದೂರರೇ, ಅನಂತರದಲ್ಲಿ ಇತರರು ಕಣ್ಣು ತೆರೆದರು ಎಂದು ಗುರುತಿಸುತ್ತಾರೆ. ಇದು ಐತಿಹಾಸಿಕವಾಗಿ ಬಹಳ ಮುಖ್ಯ ಸಂಗತಿ.

೧೯೭೨ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ಲಿಂಗಪ್ಪನವರನ್ನು ಈ ಕ್ಷೇತ್ರದ ಜನ ತಮ್ಮ ಹಿಂದಿನ ಧೀಮಂತ ನಾಯಕರಂತೆಯೇ ಕಾಣುತ್ತಾರೆ. ಅಧಿಕ ಸಂಖ್ಯೆಯ ಬಡ ರೈತರಿಗೆ ಸಾಗುವಳಿ ಚೀಟಿ ಕೊಡಿಸಿದುದು, ಬಡ ವಿದ್ಯಾರ್ಥಿಗಳಿಗೆ ನೆರವಾಗಿದುದು, ತಮ್ಮ ಬದುಕಿನ ಕಷ್ಟಗಳನ್ನು ತಾಲ್ಲೂಕಿನ ಜನರಲ್ಲೂ ಕಂಡು ಹೋರಾಡಿದುದು – ಈ ಬರಹಗಳು ನೆನಪು ಮಾಡಿಕೊಳ್ಳುತ್ತವೆ.

ಲಿಂಗಪ್ಪನವರದು ಸಾಹಿತ್ಯಕ ಭಾಷೆಯ ವಾಗ್ಮಿತೆ – ಇದು ಅವರಲ್ಲಿ ಸಹಜವಾಗಿದೆ. 'ಲಿಂಗಪ್ಪನವರದು ಕವಿ ಮನಸ್ಸು' ಎಂದು ಡಾ॥ ಶ್ರೀಕಂಠ ಕೂಡಿಗೆ, 'ಅವರು ಯಾವ ಅಮಲಿನ ಅಧಿಕಾರವನ್ನು ಹುಡುಕಿಕೊಂಡು ಹೋದವರಲ್ಲ' ಎಂದು ಡಿ.ಎಸ್.ನಾಗಭೂಷಣ್, 'ನನಗೆ ಗುರುಸಮಾನರು' ಎನ್ನುವ ಕಿಮ್ಮನೆ ರತ್ನಾಕರ – ಹೀಗೆ ವಿವಿಧ ರೀತಿಯಲ್ಲಿ ಲಿಂಗಪ್ಪನವರ ವ್ಯಕ್ತಿತ್ವವನ್ನು ಬಿಡಿಸಲಾಗಿದೆ.

ಲೋಹಿಯಾ ಅವರು, ಕವಿತೆ ಬರೆಯುತ್ತಿದ್ದ ಇವರನ್ನು 'ಕವಿ ಮಹರಾಜ್' ಎಂದು ಪ್ರೀತಿಯಿಂದ ಕರೆಯುತ್ತಿದ್ದುದು; ಟಿ.ವಿ.ಧಾರವಾಹಿ "ಸೀತಾ" ದಲ್ಲಿ ಜಡ್ಜ್ ಆಗಿ ನಟಿಸಿದ್ದು; ಬಡತನದಿಂದಾಗಿ, ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜಯಕರ್ನಾಟಕ ನಾಟಕ ಸಂಘದಲ್ಲಿ ಕಲಾವಿದರಾಗಿದ್ದುದು; ಇಂದಿರಾ ಗಾಂಧಿಯಿಂದ ಸಿಡಿದು ಬಂದಿದ್ದ ಅರಸು ದೆಹಲಿಯಲ್ಲಿ ಇವರನ್ನು ಭೇಟಿಯಾಗಿ ಅಂತರಾಳದಿಂದ ಸಮಾಲೋಚಿಸಿದ್ದು – ಹೀಗೆ ಇಲ್ಲಿನ ಅವರ ಗೆಳೆಯರ ಅನೇಕ ಪ್ರಸಂಗಗಳು ಕುತೂಹಲ ಹುಟ್ಟಿಸುತ್ತವೆ.

ಲಿಂಗಪ್ಪನವರ ಪತ್ನಿ ಮಗಳು, ಸೊಸೆ, ಮೊಮ್ಮಗಳು ಮತ್ತು ತೀರಾ ಹತ್ತಿರದ ನಂಟರು ನೀಡಿರುವ ಹೃದಯ ಸ್ಪರ್ಶಿ ಚಿತ್ರಣಗಳು ಇಲ್ಲಿ ಸಾಕಷ್ಟು ಇವೆ. ಸಂಸಾರ ನಿರ್ವಹಣೆಯಲ್ಲಿ ಎದುರಿಸಿದ ಕಷ್ಟ–ನಷ್ಟಗಳು, ಸಾರ್ವಜನಿಕ ಹೋರಾಟಗಳನ್ನು ಮಾಡುತ್ತಾಲೇ ವ್ಯಯುಕ್ತಿಕ ಬದುಕಿನಲ್ಲಿ ಎದುರಿಸಬೇಕಾಗಿ ಬಂದ ಸವಾಲುಗಳು, ಕೆಲವೊಮ್ಮೆ 'ಸ್ಥಿತ ಪ್ರಜ್ಞ'ನಂತೆ ಇದ್ದು ಸಹ ಮಕ್ಕಳ ವಿದ್ಯಾಭ್ಯಾಸ –ಅಭಿವೃದ್ಧಿಯ ಕಡೆ ಅಲಕ್ಷ್ಯ ಮಾಡದಿದ್ದುದು, ಪತ್ನಿ ಗಿರಿಜಾ ಅವರ ಪೂರ್ಣ ಸಹಕಾರ–ಈ ವಿವರಗಳಿಂದ ಈ ಕೃತಿಗೊಂದು ಸಾರ್ಥಕತೆ ಲಭಿಸಿದೆ.


ಈ ಕೃತಿಯನ್ನ ಓದಿದ ನಂತರ, ಇಂದಿನ ಭ್ರಷ್ಟ ವ್ಯವಸ್ಥೆಯಲ್ಲಿ ಇವರೇಕೆ ಸುಮ್ಮನಿದ್ದಾರೆ? – ಎಂಬ ಪ್ರಶ್ನೆಯನ್ನು ಇಲ್ಲಿ ಯಾರೂ ಕೇಳಿಲ್ಲ! ಬಹುಶಃ, ತಳಮುಟ್ಟಿರುವ ಈ ವ್ಯವಸ್ಥೆಯಲ್ಲಿ ಒಬ್ಬನಾದರೂ ಮುಗ್ಧ, ಸಾಮಾಜಿಕ ಹಳ್ಳಿಗ ನೆಮ್ಮದಿಯಿಂದ ಇರಲಿ ಎಂಬ ಭಾವನೆ ಇಲ್ಲಿ ಕೆಲಸ ಮಾಡಿರಬೇಕು.

ಅಭಿನಂದನ ಗ್ರಂಥಗಳ ಸಮೂಹಕ್ಕೆ ಇದೊಂದು ಉತ್ತಮ ಕಾಣಿಕೆ.

**–ಎಂ.ಬಿ.ನಟರಾಜ್**

~~~~~~~~~~~~~~~~~~~~~~~~~~~~~~~~~~~

### ನಮ್ಮ ಸಮಾಜವಾದಿಗಳು : ಈಗ ಪುಸ್ತಕ ರೂಪದಲ್ಲಿ




**ಕಳೆದ ನಾಲ್ಕು ವರ್ಷಗಳ ಕಾಲ 'ಹೊಸ ಮನುಷ್ಯ' ಪತ್ರಿಕೆಯಲ್ಲಿ 'ನಮ್ಮ ಸಮಾಜವಾದಿಗಳು' ಅಂಕಣದಡಿಯಲ್ಲಿ ಪ್ರಕಟವಾದ ಕರ್ನಾಟಕದ ಸುಮಾರು ೪೫ ಜನ ಸಮಾಜವಾದಿ ಧುರೀಣರ ಸಚಿತ್ರ ಪರಿಚಯು ಬಹಳ ಜನ ಓದುಗರ ಬೇಡಿಕೆಯಂತೆ ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಸಮಾಜವಾದಿ ನಾಯುಕರ ಪರಿಚಯು ಲೇಖನಗಳಲ್ಲದೆ ರಾಜ್ಯದಲ್ಲಿ ಸಮಾಜವಾದಿ ಚಳುವಳಿಯ ವಿಶಿಷ್ಟ ಮಗ್ಗಲುಗಳ ಪರಿಚಯು ಮಾಡುವ ಅನುಬಂಧ' ಲೇಖನಗಳನ್ನೂ ಒಳಗೊಂಡಿರುವ ೨೦೫ ಪುಟಗಳ ಈ ಪುಸ್ತಕದ ಬೆಲೆ ರೂ.೧೫೦/– ಇದನ್ನು ಆಸಕ್ತ 'ಹೊಸ ಮನುಷ್ಯ' ಓದುಗರಿಗೆ ರೂ. ೧೨೦/–ರ ಬೆಲೆಯಲ್ಲಿ ನೋಂದಿತ ಅಂಚೆ ಮೂಲಕ ಕಳಿಸಲಾಗುವುದು. ಪುಸ್ತಕ ಬೇಕಾದವರು ನೂರಿಪ್ಪತ್ತು ರೂಪಾಯಿಗಳನ್ನು ಈ ಕೆಳಗಿನ ವಿಳಾಸಕ್ಕೆ ಎಂ.ಓ ಅಥವಾ ಡಿಡಿ ರೂಪದಲ್ಲಿ ಕಳಿಸಿ ಒಂದು ವಾರದಲ್ಲಿ ಪುಸ್ತಕವನ್ನು ಪಡೆಯಬಹುದು:**

**ಅಪೂರ್ವ ಡಿ'ಸಿಲ್ವ, ಸಮತ ಪ್ರಕಾಶನ, ನಂ.೨೦, ಸಿದ್ಧಾರ್ಥ ಲೇ–ಔಟ್, ಚಾಮರಾಜನಗರ–571313 ದೂ: 9061418845**
~~~~~~~~~~~~~~~~~~~~~~~~~~~~~~~~~~~

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಬುದ್ಧಪೂರ್ಣಿಮೆಯ ಹಾರ್ದಿಕ ಶುಭಾಶಯಗಳು**



**–ಡಾ. ಕೆ. ಮರುಳಸಿದ್ಧಪ್ಪ**
ಮತ್ತು **ಕುಟುಂಬ**
**ಬೆಂಗಳೂರು**

**'ಹೊಸ ಮನುಷ್ಯ'** ಓದುಗರೆಲ್ಲರಿಗೂ
ಬುದ್ಧಪೂರ್ಣಿಮೆಯ ಹಾರ್ದಿಕ ಶುಭಾಶಯಗಳು



–ಪ್ರೊ.ಜಿ.ಕೆ. ಗೋವಿಂದ ರಾವ್
ಮತ್ತು ಕುಟುಂಬ
ಬೆಂಗಳೂರು

'ಹೊಸ ಮನುಷ್ಯ' ಸಮಾಜವಾದಿ ಮಾಸಿಕಕ್ಕೆ
ಶುಭ ಕೋರುವ–



–ಎಂ. ಬಿ. ಪಾಟೀಲ್
ಮತ್ತು ಜಯಶ್ರೀ ಪಾಟೀಲ್
ಕಲಬುರಗಿ

ತಿಂಗಳ ಸಾಲುಗಳು...



ವಿಜಯದಿಂದ ವೈರ ಹುಟ್ಟುತ್ತದೆ. ಸೋತವನು ನೋವಿನಲ್ಲಿ ನರಳುತ್ತಾನೆ. ಶಾಂತಚಿತ್ತರಾದವರು ಸೋಲು ಗೆಲುವುಗಳ ಗೋಜಿಗೆ ಹೋಗದೆ ಸಂತೋಷದಿಂದಿರುತ್ತಾನೆ

ಭಗವಾನ್ ಬುದÀÞ

ಪತ್ರಿಕೆಗೆ ಶುಭ ಕೋರುತ್ತಾ...

–ಬಿ.ಸುರೇಶ

ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)